
ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ


ಸಂಪುಟ 27 ಸಂಚಿಕೆ 30-31 ಜುಲೈ 31, 2005 ಬೆಲೆ ರೂ. 3.00




ಪ್ರಧಾನಿಗಳ ಅಮೆರಿಕಾ ಭೇಟಿ ದೇಶ ನಿರೀಕ್ಷಿಸಿದ್ದೇನು?

DPSC Limited

'ಎನ್ರೋನ್' ಮಿತ್ರಮಂಡಳಿ ಮಹಾರಾಷ್ಟ್ರದ ಜನತೆಗೆ ಮತ್ತೊಮ್ಮೆ ವಂಚನೆ



ಇಂಗ್ಲೀಷ್ ಕಲಿಕೆ ಯಾವ ಹಂತದಿಂದ?




ಸಿಪಿಐ(ಎಂ) ನ ನೇತಾರ ಬಿ.ಎಸ್.ಮಣಿ ಇನ್ನಿಲ್ಲ

- ಕೇಸರಿ ಬಳಗದ ಮುಗಿಯದ ಗೊಂದಲ - ಆಭಾಸ
- ದೂರವಾಣಿ : ದೇಶಕ್ಕೆಲ್ಲಾ ಒಂದೇ ಬೆಲೆ-ಮಾರನ್ ಮಾರಕ ನೀತಿ



- ತಾರಾ ಶ್ರೇಷ್ಠ ನಟಿ



- ಕೋಮುವಾದದ ಕರಾಳ ಮುಖಗಳು : ಪುಸ್ತಕ ವಿಮರ್ಶೆ

ಇಂಗ್ಲೀಷ್ ಕಲಿಕೆ ಯಾವ ಹಂತದಿಂದ?

ದುಡಿಯುವ ಜನರ ದೃಷ್ಟಿ


ಜಿ.ಎನ್.ನಾಗರಾಜ್

ಇತ್ತೀಚೆಗೆ ಕರ್ನಾಟಕದಲ್ಲಿ ಇಂಗ್ಲೀಷ್ ಭಾಷೆಯನ್ನು ಯಾವ ತರಗತಿಯಿಂದ ಕಲಿಸಬೇಕೆಂಬ ಬಗ್ಗೆ ವಾದ ವಿವಾದಗಳು ನಡೆಯುತ್ತಿವೆ. ಈ ವಾದ ವಿವಾದಗಳಿಗೆ ಮೂಲ ಕಾರಣ ಕರ್ನಾಟಕ ಸರ್ಕಾರ. ಕರ್ನಾಟಕ ರಾಜ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಇದ್ದಕ್ಕಿದ್ದಂತೆ ಯಾರೊಡನೆಯೂ ಸಮಾಲೋಚಿಸದೆ, ಮತ್ತು ಭಾಷೆ ಯಂತಹ ಒಂದು ಸೂಕ್ಷ್ಮ ವಿಷಯದ ಬಗೆಗೆ ಸಾರ್ವಜನಿಕ ಚರ್ಚೆ ನಡೆಸದೆ ಒಂದನೇ ತರಗತಿಯಿಂದಲೇ ಇಂಗ್ಲೀಷನ್ನು ಕಲಿಸುವ ಸರ್ಕಾರದ ನಿರ್ಧಾರವನ್ನು ಘೋಷಿಸಿದರು.

ನಂತರ ಅದಕ್ಕೆ ಪ್ರತಿಕೂಲ ಪ್ರತಿಕ್ರಿಯೆ ಬರಲಾರಂಭಿಸಿದಾಗ ಸಾರ್ವಜನಿಕರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವುದಾಗಿ ಘೋಷಿಸಿದರು. ಈ ಹಿನ್ನೆಲೆಯಲ್ಲಿ ವಾದ ವಿವಾದಗಳು ಆರಂಭವಾಗಿ ತೀವ್ರಗೊಳ್ಳುತ್ತಾ ನಡೆದಿವೆ. ಕನ್ನಡ ಸಾಹಿತ್ಯ ಪರಿಷತ್ತಿನ ನೇತೃತ್ವದಲ್ಲಿ ಅನೇಕ ಹಿರಿಯ ಕನ್ನಡ ಸಾಹಿತಿಗಳು ಒಂದನೇ ತರಗತಿಯಿಂದ ಇಂಗ್ಲೀಷ್ ಕಲಿಕೆಯನ್ನು ವಿರೋಧಿಸಿದ್ದಾರೆ. ಆದರೆ ಅದೇ ಸಂದರ್ಭದಲ್ಲಿ ಕನ್ನಡ ಚಳುವಳಿಕಾರರು, ಬಂಡಾಯ ಸಾಹಿತಿಗಳ ಒಂದು ಪ್ರಮುಖ ವಿಭಾಗ, ದಲಿತ ಸಂಘರ್ಷ ಸಮಿತಿಯ ವಿವಿಧ ಬಣಗಳು ಹಾಗೂ ರಾಜ್ಯ ರೈತ ಸಂಘದ ಗುಂಪುಗಳೊಂದಿಗೆ ಕೂಡಿ ಇಂಗ್ಲೀಷನ್ನು ಮೊದಲನೆ ತರಗತಿಯಿಂದಲೇ ಕಲಿಸಬೇಕೆಂದು ಪ್ರತಿಪಾದಿಸುತ್ತಿರುವುದು ಒಂದು ಅನಿರೀಕ್ಷಿತ ಬೆಳವಣಿಗೆಯಾಗಿದೆ.

ಒಂದನೇ ತರಗತಿಯಿಂದ ಇಂಗ್ಲೀಷನ್ನು ಕಲಿಸಬಾರದೆಂದು ಪ್ರತಿಪಾದಿಸುತ್ತಿರುವ ಕನ್ನಡ ಸಾಹಿತಿಗಳು ಮಾತೃಭಾಷೆಯನ್ನೇ ಶಿಕ್ಷಣ ಮಾಧ್ಯಮವಾಗಿ ಏಳನೇ ತರಗತಿಯವರೆಗೆ ಅಳವಡಿಸಿಕೊಳ್ಳಬೇಕು ಎಂಬ ಪ್ರಶ್ನೆಯನ್ನು ಪ್ರಮುಖ ಲಕ್ಷ್ಯವನ್ನಾಗಿ ಮಾಡಿಕೊಂಡಿದ್ದಾರೆ.

ಒಂದನೇ ತರಗತಿಯಿಂದ ಇಂಗ್ಲಿಷ್ ಭಾಷೆ ಕಲಿಕೆ ಆರಂಭಿಸುವುದು ಮಾತೃಭಾಷೆಯ ಅಥವಾ ಕನ್ನಡದ ಕಲಿಕೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಆದ್ದರಿಂದ ಮಾತೃ ಭಾಷೆಗಳಿಗೆ ಪ್ರಧಾನವಾಗಿ ಕನ್ನಡಕ್ಕೆ ಪೆಟ್ಟು ಬೀಳುತ್ತದೆ ಎಂಬುದು ಅವರ ವಾದ. ಭಾಷಾ ಮಾಧ್ಯಮದಲ್ಲಿ ಸಮಾನತೆ ಸ್ಥಾಪಿಸುವುದು ಸಾಧ್ಯವಾದರೆ ಈ ಬಗೆಗೆ ಇರುವ ಸುಪ್ರಿಂ ಕೋರ್ಟ್ ತೀರ್ಪನ್ನು ಕಟ್ಟು ನಿಟ್ಟಾಗಿ ಅನುಸರಿಸಿದರೆ



ಶಿಕ್ಷಣದಲ್ಲಿನ ಅಸಮಾನತೆ ದೂರವಾಗುತ್ತದೆ. ಅದರಿಂದಾಗಿ ಇಂಗ್ಲೀಷನ್ನು ಮೊದಲನೇ ತರಗತಿಯಿಂದ ಕಲಿಸಬೇಕಾದ ಅನಿವಾರ್ಯತೆ ಹಾಗೂ ಒತ್ತಡ ಉಂಟಾಗುವುದಿಲ್ಲ ಎಂಬುದು ಅವರ ಅಭಿಪ್ರಾಯ.

ಇಂಗ್ಲೀಷ್ ಕಲಿಕೆ ಈಗ ಆರಂಭವಾಗುವ 5ನೇ ತರಗತಿಗಿಂತ ಬೇಗನೆ ಇಂಗ್ಲೀಷ್ ಕಲಿಕೆ ಆರಂಭಿಸಬೇಕು ಎನ್ನುವುದಾದರೆ 3ನೇ ತರಗತಿಯಿಂದ ಅದನ್ನು ಕಲಿಸಲು ಆರಂಭಿಸಬಹುದು. ಇದೇ ಬರಗೂರು ರಾಮಚಂದ್ರಪ್ಪನವರ ನೇತೃತ್ವದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಶಿಫಾರಸ್ಸು ಕೂಡ ಆಗಿತ್ತು.

ಇವುಗಳ ಜೊತೆಗೆ ತತ್‌ಕ್ಷಣವೇ ಕನ್ನಡ ಮಾಧ್ಯಮದಲ್ಲಿ ಕಲಿಸುತ್ತೇವೆಂದು ಶಾಲೆಗಳನ್ನು ಆರಂಭಿಸಿ ಇಂಗ್ಲೀಷ್ ಮಾಧ್ಯಮದಲ್ಲಿ ಕಲಿಸುತ್ತಿರುವ ಶಾಲೆಗಳ ಮನ್ನಣೆಯನ್ನು ತತ್‌ಕ್ಷಣವೇ ರದ್ದು ಮಾಡಬೇಕೆಂಬುದು ಕೂಡ ಅವರ ಒತ್ತಾಯವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಚಂದ್ರಶೇಖರ್ ಪಾಟೀಲ ಮಾಜಿ ಅಧ್ಯಕ್ಷರಾದ ಜಿ.ನಾರಾಯಣ, ಪ್ರಸಿದ್ಧ ಕವಿ ಕುವೆಂಪು ಅವರ ವಿದ್ಯಾರ್ಥಿಯಾದ ಡಾ. ಜಿ.ಎಸ್.ಶಿವರುದ್ರಪ್ಪ, ಚನ್ನವೀರ ಕಣವಿ, ಮುಂತಾದ ಪ್ರಮುಖ ಸಾಹಿತಿಗಳ ಜೊತೆಗೆ ಪಾಟೀಲ ಪುಟ್ಟಪ್ಪ, ದೊರೆಸ್ವಾಮಿ ಮೊದಲಾದ ಚಿಂತಕರು ಸೇರಿದ್ದಾರೆ.

ಅದೇ ಸಂದರ್ಭದಲ್ಲಿ ಇಂಗ್ಲೀಷ್ ಕಲಿಕೆಯನ್ನು ಒಂದನೇ ತರಗತಿಯಿಂದಲೇ ಆರಂಭಿಸಬೇಕೆಂದು ವಾದಿಸುತ್ತಿರುವವರು ಇಂದು ಇಂಗ್ಲಿಷಿನ ಕಲಿಕೆಗೆ ಸಾಮಾಜಿಕ ಅಸಮಾನತೆಗೆ ಕಾರಣವಾಗಿದೆ. ಇಂಗ್ಲೀಷ್ ಮಾಧ್ಯಮದಲ್ಲಿ ಕಲಿಯುತ್ತಿರುವ ಶ್ರೀಮಂತ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಹಾಗೂ ಉದ್ಯೋಗಗಳಲ್ಲಿ ಹೆಚ್ಚು ಅವಕಾಶಗಳನ್ನು ಪಡೆಯುತ್ತಿದ್ದಾರೆ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯುವ ಬಡ-ಗ್ರಾಮೀಣ ಅದರಲ್ಲಿಯೂ ಸರ್ಕಾರಿ ಕಾಲೇಜುಗಳಲ್ಲಿ ಕಲಿಯುತ್ತಿರುವ ದಲಿತ ಹಿಂದುಳಿದ ಜಾತಿಗಳ ಮಕ್ಕಳಿಗೆ ಇದರಿಂದಾಗಿ ದೊಡ್ಡ ಅನ್ಯಾಯವಾಗುತ್ತಿದೆ ಎಂದು ವಾದಿಸುತ್ತಿದ್ದಾರೆ. ಶಿಕ್ಷಣ ಮಾಧ್ಯಮ ಮಾತೃಭಾಷೆಯೇ ಆಗಿರಬೇಕೆಂಬ ವಿಚಾರವನ್ನು ಅವರೂ ಸಹ ಒಪ್ಪುತ್ತೇವೆಂದು ಘೋಷಿಸಿದ್ದರೂ ಸಹ ತತ್‌ಕ್ಷಣವೇ ಇಂಗ್ಲೀಷನ್ನು ಒಂದು ಭಾಷೆಯಾಗಿ ಮೊದಲನೇ ತರಗತಿಯಿಂದಲೇ ಕೂಡಲೇ ಆರಂಭಿಸಬೇಕೆಂದು ಪ್ರತಿಪಾದಿಸುತ್ತಿದ್ದಾರೆ. ಈ ರೀತಿಯ ಇಂಗ್ಲೀಷ್ ಕಲಿಕೆ ಆರಂಭ ಹಂತದಲ್ಲಿ ಕೇವಲ ಅಕ್ಷರಾಭ್ಯಾಸ ಹಾಗೂ ಕೆಲವು ಪದಗಳ ಕಲಿಕೆಗೆ ಸೀಮಿತವಾಗಿದ್ದರೂ ಸಾಕು ಆದರೆ ಇಂಗ್ಲೀಷನ್ನು ಒಂದನೇ ತರಗತಿಯಿಂದಲೇ ಕಲಿಸಬೇಕೆಂದು ಪ್ರತಿಪಾದಿಸುತ್ತಿದ್ದಾರೆ.

ಈ ಎಲ್ಲಾ ನಿಲುವುಗಳನ್ನು ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಚರ್ಚಿಸಿತು ಮತ್ತು ಅಖಿಲ ಭಾರತ ಮಟ್ಟದ ಅನುಭವದ ಬೆಳಕಿನಲ್ಲಿ ಈ ಪ್ರಶ್ನೆಯನ್ನು ಪರಿಶೀಲಿಸಿತ್ತು. ಕಾರ್ಮಿಕ ವರ್ಗದ ಪಕ್ಷ-ದುಡಿಯುವ ಜನ ವಿಭಾಗದ ಪಕ್ಷವಾದ ಸಿಪಿಐ(ಎಂ) ಈ ಪ್ರಶ್ನೆಯನ್ನು ಪರಿಶೀಲಿಸುವಾಗ ದುಡಿಯುವ ಜನಗಳಲ್ಲಿ ಗರಿಷ್ಟ ಜನರ ಗರಿಷ್ಟ ಹಿತವೇ ನಮ್ಮ ನೀತಿ ನಿರೂಪಣೆಯ ಆಧಾರ. ಈ ಹಿನ್ನೆಲೆಯಲ್ಲಿ ಇಂದು ಕರ್ನಾಟಕದಲ್ಲಿ ದಲಿತ ಹಿಂದುಳಿದ ಜಾತಿಗಳಿಗೆ ಸೇರಿದ ಕೃಷಿ ಕೂಲಿಕಾರರು ಬಡ ರೈತರು ಹಾಗೂ ಅಸಂಘಟಿತ ಕಾರ್ಮಿಕರು ಅದರಲ್ಲಿಯೂ ಮಹಿಳೆಯರು ಇನ್ನೂ ದೊಡ್ಡ ಪ್ರಮಾಣದಲ್ಲಿ ಶಿಕ್ಷಣ ವಂಚಿತರಾಗಿದ್ದಾರೆ. ಗ್ರಾಮೀಣ ದಲಿತ ಮಹಿಳೆಯರ ಸಾಕ್ಷರತೆಯ ಪ್ರಮಾಣ ಇಂದಿಗೂ ಕೂಡ ಕೇವಲ ಶೇ.10 ರಿಂದ 12 ಮಾತ್ರ ಆಗಿದೆ. ದಲಿತ ಪುರುಷರ ಸಾಕ್ಷರತೆಯೂ ಕೂಡ ರಾಜ್ಯದ ಹಲವು ಪ್ರದೇಶಗಳಲ್ಲಿ



20 ರಿಂದ 25 ಶೇ. ಮಾತ್ರವಾಗಿದೆ. ಇದು ಸಾಕ್ಷರತೆಯ ವಿಷಯ. ಕೇವಲ ಸಹಿ ಮಾಡಲು ಬರುವವರ ಸಂಖ್ಯೆ. ಇನ್ನು ಪ್ರಾಥಮಿಕ ಶಿಕ್ಷಣ ಪಡೆದವರ ಸಂಖ್ಯೆಯನ್ನು ಲೆಕ್ಕಕ್ಕೆ ತೆಗೆದುಕೊಂಡಲ್ಲಿ ಇದು ಇನ್ನಷ್ಟು ಕಡಿಮೆಯಾಗುತ್ತದೆ. ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಒಂದನೇ ತರಗತಿಯಿಂದ 4ನೇ ತರಗತಿ ತಲುಪಿದ್ದೇ ಶಾಲೆ ಬಿಡುತ್ತಾರೆ. ಇವರೆಲ್ಲಾ ಗ್ರಾಮೀಣ ಪ್ರದೇಶದ ದಲಿತ-ಹಿಂದುಳಿದ ಜಾತಿಗಳ ಕೃಷಿ ಕೂಲಿಕಾರ - ಬಡ ರೈತರ ಮಕ್ಕಳೇ ಆಗಿದ್ದಾರೆ. ಇಂತಹ ಸಂದರ್ಭದಲ್ಲಿ ಈ ಶಿಕ್ಷಣ ವಂಚಿತ ಬಡವರಿಗೆ ಶಿಕ್ಷಣದ ಭಾಗ್ಯ ಲಭ್ಯವಾಗುವುದು ಕೇವಲ ಅವರ ಮಾತೃಭಾಷೆಯ ಮೂಲಕ ಮಾತ್ರವೇ. ಅವರಿಗೆ ಅವರ ಪರಿಸರಕ್ಕೆ ಪೂರ್ಣವಾಗಿ ಅಪರಿಚಿತವಾದ, ಮಾತೃಭಾಷೆಯ ವಾಕ್ಯ ರಚನೆ ಹಾಗೂ ಪದಸಂಪತ್ತಿಗೆ ಬಹಳ ದೂರದಲ್ಲಿರುವ ಮತ್ತು ಮಾತೃಭಾಷೆಯ ಲಿಪಿಗೆ ಸಂಬಂಧವಿಲ್ಲದ ಇಂಗ್ಲಿಷ್ ಭಾಷೆಯ ಲಿಪಿ ಹಾಗೂ ಭಾಷೆಯ ಕಲಿಕೆ ಈ ಅಸಂಖ್ಯಾತ ಶಿಕ್ಷಣ ವಂಚಿತ ದುಡಿಯುವ ಜನರನ್ನು ಶಿಕ್ಷಣದಿಂದ ದೂರವಿಡಲು ಮತ್ತೊಂದು ಸಾಧನವಾಗುತ್ತದೆ. ಆದ್ದರಿಂದ ದುಡಿಯುವ ಜನರ ಹಿತದೃಷ್ಟಿಯಿಂದ ಇಂಗ್ಲೀಷ್ ಭಾಷೆಯನ್ನು ಒಂದನೇ ತರಗತಿಯಿಂದ ಇಂಗ್ಲಿಷ್ ಭಾಷೆಯನ್ನು ಒಂದನೇ ತರಗತಿಯಿಂದ ಕಲಿಸುವುದು ಅವರಿಗೆ ಹಾನಿಯನ್ನುಂಟು ಮಾಡುತ್ತದೆ ಎಂಬ ಹಿನ್ನಲೆಯಲ್ಲಿ ಸಿಪಿಐ(ಎಂ) ಪಕ್ಷವು 3ನೇ ತರಗತಿಯಿಂದ ಇಂಗ್ಲೀಷ್ ಕಲಿಕೆ ಆರಂಭಿಸಬೇಕೆಂಬ ನಿಲುವು ತೆಗೆದುಕೊಂಡಿದೆ.

ಕಳೆದ ಒಂದೂವರೆ ದಶಕಗಳ ಜಾಗತೀಕರಣ ಯುಗದಲ್ಲಿ ಜಾಗತೀಕರಣದ ದುಷ್ಪರಿಣಾಮಗಳ ವಿರುದ್ಧ ನಿರಂತರವಾಗಿ ಚಳುವಳಿ ನಡೆಸುತ್ತಾ, ಜಾಗತೀಕರಣದ ವಿರುದ್ಧ ಜನಾಭಿಪ್ರಾಯ ರೂಪಿಸಲು ಇದೇ ಬಂಡಾಯ ಸಾಹಿತ್ಯ ದಲಿತ - ರೈತ ಚಳುವಳಿಗಳೂ ಶ್ರಮಿಸುತ್ತಾ ಬರುತ್ತಿವೆ.

ಜಾಗತೀಕರಣದ ನೀತಿಗಳು ಸೃಷ್ಟಿಸುತ್ತಿರುವ ಒತ್ತಡಗಳ ಪರಿಸ್ಥಿತಿಯಲ್ಲಿ ಎದ್ದು ಬಂದಿರುವ ಈ ಭಾಷಾ ಕಲಿಕೆಯ ಪ್ರಶ್ನೆಯಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲೀಷ್ ಕಲಿಕೆ ಆರಂಭಿಸಬೇಕೆಂದು ಈ ಸಂಘಟನೆಗಳು ನಿಲುವು ತೆಗೆದುಕೊಂಡಿರುವುದು ಆಶ್ಚರ್ಯದ ವಿಚಾರವಾಗಿದೆ ಮತ್ತು ಇದರಿಂದ ಜಾಗತೀಕರಣಕ್ಕೆ ಶರಣಾದಂತೆಯೂ ಆಗಿದೆ.

ಭಾಷಾ ಕಲಿಕೆ ನೀತಿ - ಸಿಪಿಐ(ಎಂ) ನಿಲುವು

ಇತ್ತೀಚೆಗೆ ಇಂಗ್ಲೀಷ್ ಭಾಷೆಯನ್ನು ಪ್ರಾಥಮಿಕ ಶಾಲೆಯ ಒಂದನೆಯ ತರಗತಿಯಿಂದಲೇ ಕಲಿಸಬೇಕೆಂಬ ಸರ್ಕಾರದ ಪ್ರಸ್ತಾವನೆಯಿಂದಾಗಿ ರಾಜ್ಯದಲ್ಲಿ ವಾದ - ವಿವಾದ ಹಾಗೂ ಚಳುವಳಿಗಳು ಎದ್ದಿವೆ. ಇದು ಕನ್ನಡ ಕಲಿಕೆಗೆ ಸಂಸ್ಕೃತಿಗೆ ಮಾರಕವಾಗುತ್ತದೆಂದು ಚಂಪಾ ನೇತೃತ್ವದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜೊತೆಗೆ ಸಾಹಿತಿಗಳ ಬುದ್ಧಿ ಜೀವಿಗಳ ಒಂದು ವಿಭಾಗ ಪ್ರತಿಪಾದಿಸುತ್ತಿದೆ. ಮೂರನೇ ತರಗತಿಯಿಂದ ಪ್ರಾರಂಭಿಸಬಹುದೆಂಬ ರಾಜೀ ಸೂತ್ರವನ್ನು ಮುಂದಿಟ್ಟಿದೆ.

ದಲಿತ, ಹಿಂದುಳಿದ ಜಾತಿಗಳ ಹಿತಕ್ಕಾಗಿ ಹಾಗೂ ಸಮಾನ ಅವಕಾಶಗಳಿಗಾಗಿ ಇಂಗ್ಲೀಷ್ ಭಾಷೆಯನ್ನು ಒಂದನೆಯ ತರಗತಿಯಿಂದಲೇ ಪ್ರಾರಂಭಿಸಬೇಕೆಂದು ದಲಿತ, ಹಿಂದುಳಿದ ಜಾತಿಗಳು, ಸಂಘಟನೆಗಳು ಹಾಗೂ ಸಾಹಿತಿಗಳ ಒಂದು ವಿಭಾಗ, ದಲಿತ ಸಂಘರ್ಷ ಸಮಿತಿಗಳು ಪ್ರತಿಪಾದಿಸುತ್ತಿವೆ.

ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿಯು ಚರ್ಚಿಸಿ ಈ ಕೆಳಗಿನ ನೀತಿಯನ್ನು ಮುಂದಿಟ್ಟಿದೆ.

ಕರ್ನಾಟಕದಲ್ಲಿ ಇನ್ನೂ ಅಸಂಖ್ಯಾತ ಬಡ ಜನತೆ ಶಿಕ್ಷಣ ವಂಚಿತವಾಗಿದೆ. ಪ್ರಾಥಮಿಕ ತರಗತಿಯ ಮೊದಲ ನಾಲ್ಕು ವರ್ಷಗಳಲ್ಲಿ ಅಪಾರವಾಗಿ Dropoutಗಳಾಗುತ್ತಿವೆ. ಸರಿಸುಮಾರು ಇವರೆಲ್ಲರೂ ಬಡಜನರೇ ಅದರಲ್ಲಿಯೂ ಗ್ರಾಮೀಣ ಬಡಜನರೇ. ಜೊತೆಗೆ ಇಂಗ್ಲೀಷ್‌ನಲ್ಲಿಯೇ ಪ್ರೌಢ ಶಾಲೆಗಳ ಮಟ್ಟದಲ್ಲಿ, ಎಸ.ಎಸ.ಎಲ್.ಸಿ ಪರೀಕ್ಷೆ ಯಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ಉತ್ತೀರ್ಣರಾಗದೇ ಅವರ ಬೆಳವಣಿಗೆಯೇ ಮುರುಟಿ ಹೋಗುತ್ತಿದೆ. ಇದರಲ್ಲಿ ಬಹು ಸಂಖ್ಯಾತರು ಬಡವರೇ ಆಗಿದ್ದಾರೆ. ಈ ಹಿನ್ನೆಲೆಯಲ್ಲಿ

1. ಮೊದಲನೇ ತರಗತಿಯಿಂದ ಇಂಗ್ಲೀಷ್ ಕಲಿಕೆ ಸಾಧುವಾದುದಲ್ಲ. ಬೇಕಾದರೆ ಮೂರನೇ ತರಗತಿಯಿಂದ ಕಲಿಸಲು ಆರಂಭಿಸಬಹುದು ಆಗಲೂ ಉತ್ತೀರ್ಣರನ್ನಾಗಿ ಮಾಡುವುದಕ್ಕೆ ಇಂಗ್ಲೀಷ್ ಪರಿಗಣಿಸಬಾರದು.
2. ಮಾತೃ ಭಾಷೆಯ ಮಾಧ್ಯಮದಲ್ಲಿಯೇ ಎಲ್ಲರಿಗೂ ಶಿಕ್ಷಣ ಎಂಬ ಶಿಕ್ಷಣ ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು. ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ನಿಯಂತ್ರಿಸಬೇಕು.

ಅತ್ಯುತ್ತಮ ಸಾಮಾಜಿಕ ಸಂದೇಶವುಳ್ಳ ಚಿತ್ರ 'ಹಸೀನಾ' - ತಾರಾ ರಾಷ್ಟ್ರಮಟ್ಟದ ಶ್ರೇಷ್ಠ ತಾರೆ

ಖ್ಯಾತ ಲೇಖಕಿ ಬಾನು ಮುಷ್ತಾಕರ ಕತೆಯನ್ನಾಧರಿಸಿದ ಗಿರೀಶ್ ಕಾಸರವಳ್ಳಿಯವರ ನಿರ್ದೇಶನದ 'ಹಸೀನಾ' ಈ ವರ್ಷದ ದೇಶದ ಅತ್ಯುನ್ನತ ಸಾಮಾಜಿಕ ಸಂದೇಶವುಳ್ಳ ಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಹಸೀನಾ ಚಿತ್ರದಲ್ಲಿನ ಪ್ರಬುದ್ಧ ಅಭಿನಯಕ್ಕಾಗಿ ತಾರಾ ಶ್ರೇಷ್ಠ ನಟಿ ಪ್ರಶಸ್ತಿಗಳಿಸಿದ್ದಾರೆ. 30 ವರ್ಷಗಳ ನಂತರ ಕನ್ನಡತಿಯೊಬ್ಬರಿಗೆ ಈ ಪ್ರಶಸ್ತಿ ಲಭಿಸಿದೆ. ಸಂಪ್ರದಾಯಸ್ಥ ಸಮಾಜದ ಕಟ್ಟಳೆ ಪ್ರಶ್ನಿಸುವ ದಿಟ್ಟ ಮುಸ್ಲಿಂ ಮಹಿಳೆಯ ಪಾತ್ರದಲ್ಲಿ ತೋರಿದ ಪ್ರಬುದ್ಧ ಅಭಿನಯದಿಂದಾಗಿ ತಾರಾ ಈ ಶ್ರೇಷ್ಠನಟಿ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಇದೇ ಚಿತ್ರದ

52ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ

ಅತ್ಯುತ್ತಮ ವಸ್ತ್ರ ವಿನ್ಯಾಸಕ್ಕಾಗಿ ಇಶ್ರತ್ ನಿಸಾರ್‌ಗೆ ಪ್ರಶಸ್ತಿ ದೊರೆತಿದೆ. ಇದು ರಾಷ್ಟ್ರಮಟ್ಟದಲ್ಲಿ ಕನ್ನಡ ಚಿತ್ರರಂಗದ ಪ್ರತಿಷ್ಠೆಯನ್ನು ಹೆಚ್ಚಿಸಿದೆ. ತಾರಾ ಇನ್ನೂ ಹೆಚ್ಚು ಕಲಾತ್ಮಕ ಚಿತ್ರಗಳಲ್ಲಿ ಅಭಿನಯಿಸಿ ಉನ್ನತ ಪ್ರಶಸ್ತಿ ಪಡೆಯುವಂತಾಗಲಿ. ತಾರಾ ಈ ಚಿತ್ರ ನಿರ್ಮಾಪಕರೂ ಆಗಿದ್ದು, ಹಲವು ತೊಡಕುಗಳನ್ನೆದುರಿಸಿ ಚಿತ್ರ ನಿರ್ಮಾಣಕ್ಕೆ ಹಣ ಹೊಂದಿಸಿದ್ದಾರೆ.

ನಿರ್ದೇಶಕ ಪಿ.ಶೇಷಾದ್ರಿಯವರ 'ಬೇರು' ಚಿತ್ರಕ್ಕೆ ಅತ್ಯುತ್ತಮ ಪ್ರಾದೇಶಿಕ ಚಿತ್ರಪ್ರಶಸ್ತಿ ಪಡೆಯುವ ಮೂಲಕ ಈ ಪ್ರಶಸ್ತಿಯ ಹ್ಯಾಟ್ರಿಕ್ ಸಾಧಿಸಿದ್ದಾರೆ. ಈ ಹಿಂದೆ 'ಅತಿಥಿ', 'ಮುನ್ನುಡಿ' ಚಲನಚಿತ್ರಕ್ಕೆ ರಾಷ್ಟ್ರಮಟ್ಟದಲ್ಲಿ ಈ ಗೌರವ ಲಭಿಸಿತ್ತು.

ಕೆಜಿಎಫ್ ಮಾಜಿ ಶಾಸಕರು - ಕಾರ್ಮಿಕ ವರ್ಗದ ಕಣ್ಮಣಿ

ಕಾಮ್ರೇಡ್ ಟಿ.ಎಸ್.ಮಣಿ ಇನ್ನಿಲ್ಲ

ಸುಮಾರು ನಾಲು ದಶಕಗಳ ಕಾಲ ಸಿಪಿಐ(ಎಂ) ಪಕ್ಷವನ್ನು ಮತ್ತು ಸಿಐಟಿಯುವನ್ನು ಕೆ.ಜಿ.ಎಫ್‌ನಲ್ಲಿ ಮುನ್ನಡೆಸಿಕೊಂಡು ಬಂದಿದ್ದ ಕಾಂ. ಟಿ.ಎಸ್.ಮಣಿಯವರು ದಿನಾಂಕ 25.06.2005 ರಂದು ಪಕ್ಷದ ರಾಜ್ಯಸಮಿತಿ ಸಭೆಯಲ್ಲಿ ಭಾಗವಹಿಸಲು ಬೆಂಗಳೂರಿಗೆ ತೆರಳುತ್ತಿದ್ದಾಗ ಕೋಲಾರದ ಬಳಿಯಲ್ಲಿ ಪ್ರಜ್ಞಾಹೀನರಾಗಿ ಸ್ಥಳೀಯ ಜಾಲಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆಗೊಳಗಾದರು. ಮಿದುಳಿನ ರಕ್ತಸ್ರಾವ, ಹೃದಯ ಸ್ಥಂಭನವಾಗಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ದಿನಾಂಕ 13.07.2005 ರಂದು ರಾತ್ರಿ ಸುಮಾರು 8.30 ಗಂಟೆಗೆ ನಿಧನರಾದರು. ಕಾಂ.ಮಣಿಯವರು ಮಡದಿ ಜಯದೇವಿ, ಮಗಳು ಅಹಲ್ಯಾ ಹಾಗೂ ಅಪಾರ ಸಂಖ್ಯೆಯ ಅಭಿಮಾನಿಗಳು ಮತ್ತು ಸಂಗಾತಿಗಳನ್ನು ಅಗಲಿದ್ದಾರೆ.

1937 ರಲ್ಲಿ ತೇನ್‌ಪಲ್ಲಿ ಗಂಗನ್‌ರವರ ಪುತ್ರರಾಗಿ ಜನಿಸಿದ ತೇನ್‌ಪಲ್ಲಿ ಸುಬ್ರಮಣಿಯವರು ತಮ್ಮ ಬಾಲ್ಯದಿಂದಲೇ ಕಾರ್ಮಿಕ ಚಳುವಳಿಗೆ ಆಕರ್ಷಿತರಾದರು. ಇವರ ಅಣ್ಣ ಕಾಂ.ಟಿ.ಸ್ವಾಮಿನಾಥನ್‌ರವರು ಅಂದು ಕೆಂಬಾವುಟದಡಿಯಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿ ಮತ್ತು ಕಾರ್ಮಿಕ ಚಳುವಳಿಯಲ್ಲಿ ಕಾಂ.ಕೆ.ಎಸ್.ವಾಸನ್ ಮತ್ತು ಕಾಂ. ವಿ.ಎಂ.ಗೋವಿಂದನ್‌ರವರ ನಂತರದ ಸಾಲಿನಲ್ಲಿ ಬರುವ ಪ್ರಮುಖ ನಾಯಕರಾಗಿದ್ದರು.

1945ರಲ್ಲಿ ನಡೆದ ಗಣಿ ಕಾರ್ಮಿಕರ ಸಮರಶೀಲ ಹೋರಾಟದ ಸಂದರ್ಭದಲ್ಲಿ ಕಾಂ.ಟಿ.ಎಸ್.ಮಣಿಯವರ ಇಡೀ ಕುಟುಂಬವನ್ನೇ ಇಲ್ಲಿಂದ ಗಡಿಪಾರು ಮಾಡಿ ಆಂಧ್ರಪ್ರದೇಶದ ಒಂದು ಕಾಡಿನಲ್ಲಿ ಬಿಡಲಾಯಿತು. ಅಂತಹ ಹೋರಾಟದ ಪರಂಪರೆ ಇರುವ ಈ ಕುಟುಂಬದಲ್ಲಿ ಹುಟ್ಟಿದ ಮಣಿಯವರು 1958ರಲ್ಲಿ ಗಣಿ ಕಾರ್ಮಿಕರಾಗಿ ಉದ್ಯೋಗಕ್ಕೆ ಸೇರಿ ಕಾಂ.ಕೆ.ಎಸ್.ವಾಸನ್ ಮತ್ತು ಕಾಂ.ವಿ.ಎಂ.ಗೋವಿಂದನ್‌ರವರ ಮಾರ್ಗದರ್ಶನದಲ್ಲಿ ಕಾರ್ಮಿಕರನ್ನು ಸಂಘಟಿಸುವ ಕಾರ್ಯಕ್ಕೆ ಇಳಿದರು.

1964ರಲ್ಲಿ ಪರಿಷ್ಕರಣವಾದಿಗಳಿಂದ ಸಿಪಿಐ(ಎಂ) ಬೇರ್ಪಟ್ಟಾಗ ಇಡೀ ಕೆ.ಜಿ.ಎಫ್‌ನ ಪಕ್ಷ ಸಿಪಿಐ(ಎಂ)ನೊಂದಿಗೆ ನಿಲ್ಲುವಂತೆ ಮಾಡುವಲ್ಲಿ ಕಾಂ.ಟಿ.ಎಸ್.ಮಣಿಯವರ ಪಾತ್ರ ಬಹಳ ಪ್ರಮುಖವಾದುದಾಗಿದೆ. ಹಿಂದೆ ಜನಪ್ರಿಯರಾಗಿದ್ದ ಹಿರಿಯ ಮುಖಂಡರು ನಿಷ್ಕ್ರಿಯರಾದಾಗ ಪಕ್ಷವನ್ನು ಮುನ್ನಡೆಸುವ ಜವಾಬ್ದಾರಿಯನ್ನು ಕಾಂ.ಟಿ.ಎಸ್.ಮಣಿಯವರು ವಹಿಸಿಕೊಂಡರು. ನಂತರ 1968ರಲ್ಲಿ ತಮ್ಮ ಉದ್ಯೋಗಕ್ಕೆ ರಾಜಿನಾಮೆ ನೀಡಿ ಪೂರ್ಣಕಾಲದ ಕಾರ್ಯಕರ್ತರಾಗಿ ಪಕ್ಷವನ್ನು ಮತ್ತು ಬಿ.ಜಿ.ಎಂ.ಎಲ್.ನಲ್ಲಿ ಸಿಐಟಿಯುವನ್ನು ಕಟ್ಟುವ ಕಾರ್ಯವನ್ನು ಕೈಗೊಂಡರು.

1968-69ರಲ್ಲಿ ಆಗತಾನೆ ಆರಂಭಗೊಂಡ ಬಿಇಎಂಎಲ್ ಕಾರ್ಖಾನೆಯಲ್ಲಿ ಕಾರ್ಮಿಕ



ಸಂಘವನ್ನು ಕಟ್ಟುವುದಕ್ಕಾಗಿ ಎಲ್ಲಾ ವಿಧದ ಪ್ರಯತ್ನಗಳನ್ನು ನಡೆಸಿದುದಲ್ಲದೇ ಈಗಿರುವ ಭಾರತ್ ಅರ್ಥ್ ಮೂವರ್ಸ್ ನೌಕರರ ಸಂಘ (ಬಿಇಎಂಇಎ)ಕ್ಕೆ ರಾಬರ್ಟ್‌ಸನ್ ಪೇಟೆಯಲ್ಲಿ ಒಂದು ಕಛೇರಿಯನ್ನು ತೆರೆಯಲು ಬೆಂಗಾವಲಾಗಿ ನಿಂತರು. ನಂತರ ಸಿಐಟಿಯು ಬೆಂಬಗಲಿಗರ ಗುಂಪನ್ನು ಪಕ್ಷವನ್ನು ಬಿಇಎಂಎಲ್‌ನಲ್ಲಿ ಕಟ್ಟಲು ನಿರಂತರ ಮಾರ್ಗದರ್ಶನ ನೀಡುತ್ತಾ ಬಂದಿದ್ದಾರೆ.

ಬಿಜಿಎಂಎಲ್‌ನ ಮೈಸೂರು ಮೈನ್ಸ್ ಕಾರ್ಮಿಕ ಸಂಘದಲ್ಲಿ 1972ರಿಂದ ಜಂಟಿ ಕಾರ್ಯದರ್ಶಿಯಾಗಿ ನಂತರದಲ್ಲಿ 1980ರಲ್ಲಿ ಇಡೀ ಬಿಜಿಎಂಎಲ್‌ಗೆ ಒಂದೇ ಯೂನಿಯನ್‌ಗಾಗಿ ನಡೆದ ಚುನಾವಣೆಯಲ್ಲಿ ಉಪಾಧ್ಯಕ್ಷರಾಗಿ, 2002ರಲ್ಲಿ ಬಿಜಿಎಂಎಲ್ ಸಿಐಟಿಯು ಸಂಘದ ಅಧ್ಯಕ್ಷರಾಗಿ ದುಡಿದಿದ್ದಾರೆ.

1974ರಲ್ಲಿ ಚಿನ್ನದ ಗಣಿ ಕಾರ್ಮಿಕರು ನಡೆಸಿದ 48 ದಿನಗಳ ಸಮರಶೀಲ ಮುಷ್ಕರದಲ್ಲಿ ಕಾಂ. ಟಿ.ಎಸ್.ಮಣಿಯವರು ಪ್ರಮುಖ ಪಾತ್ರವನ್ನು ವಹಿಸಿದ್ದಾರೆ.

1980ರಲ್ಲಿ ಸಾರ್ವಜನಿಕ ಉದ್ದಿಮೆಗಳ ಜಂಟಿ ಕ್ರಿಯಾ ಸಮಿತಿ (ಜೆಎಎಫ್)ಯ ಕರೆಯ ಮೇರೆಗೆ ನಡೆದ 80 ದಿನಗಳ ಮುಷ್ಕರದ ಸಂದರ್ಭದಲ್ಲಿ ಕಾಂ.ಟಿ.ಎಸ್.ಮಣಿಯವರ ನೇತೃತ್ವದ ಬಿಜಿಎಂಎಲ್ ಕಾರ್ಮಿಕ ಸಂಘದ ಮೂಲಕ ಮುಷ್ಕರ ನಿರತ ಬಿಇಎಂಎಲ್ ಕಾರ್ಮಿಕ ಕುಟುಂಬಗಳಿಗೆ ಅಕ್ಕಿಯನ್ನು ಹಂಚುವ ಸೌಹಾರ್ದ ಸಹಕಾರದ ಕಾರ್ಯವನ್ನು ಮಾಡಿದರು.

ಸಿಐಟಿಯುವಿನ ರಾಜ್ಯಸಮಿತಿ ಸದಸ್ಯರಾಗಿ ನಂತರ ರಾಜ್ಯಸಮಿತಿ ಉಪಾಧ್ಯಕ್ಷರಾಗಿ ಹಲವು ದಶಕಗಳಿಂದ ಇದ್ದು ಅವರು ಸಿಐಟಿಯು ಜನರಲ್ ಕೌನ್ಸಿಲ್ ಸದಸ್ಯರೂ ಆಗಿದ್ದರು.

ಶೈಕ್ಷಣಿಕ ಕ್ಷೇತ್ರದಲ್ಲಿ ಅಪಾರ ಆಸಕ್ತಿಯಿದ್ದ ಟಿ.ಎಸ್.ಮಣಿಯವರು ಆರಂಭದ ದಿನಗಳಲ್ಲಿ ಗಣಿ ಕಾರ್ಮಿಕರಿಗೆ, ಅವರ ಮಕ್ಕಳಿಗೆ ರಾತ್ರಿ ಶಾಲೆಗಳನ್ನು ನಡೆಸುತ್ತಿದ್ದರು. ಇದರಿಂದಾಗಿ ಆ ಪೀಳಿಗೆಯ ಜನ ಇವರನ್ನು ವಾದ್ಯಾರಯ್ಯ(ಮೇಷ್ಟ್ರು) ಎಂದು ಕರೆಯುತ್ತಿದ್ದರು.

ಮೈಸೂರು ಮೈನ್ಸ್ ವರ್ಕರ್ಸ್ ಯೂನಿಯನ್‌ನ ಪ್ರೌಢಶಾಲೆಯ ಸಂಚಾಲಕರಾಗಿ ದೀರ್ಘಕಾಲದಿಂದ ಸೇವೆ ಸಲ್ಲಿಸುತ್ತ ಗೋಲ್ಡನ್ ವ್ಯಾಲಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ(GIVT)ಯ ಹಿರಿಯ ಉಪಾಧ್ಯಕ್ಷರಾಗಿಯೂ ಇದ್ದರು.

ಸ್ಥಳೀಯ ಪುರಸಭಾ ಸದಸ್ಯರಾಗಿ ಅವರು ಗೆದ್ದು ಬಂದ ಆಂಡರ್‌ಸನ್ ಪೇಟೆಯಲ್ಲಿ ಹಲವಾರು ಜನ ಮೆಚ್ಚುವ ಕೆಲಸಗಳನ್ನು ಮಾಡಿರುವುದಲ್ಲದೇ 1977 ರಿಂದ ನಿರಂತರವಾಗಿ ಕರ್ನಾಟಕ ವಿಧಾನ ಸಭಾಚುನಾವಣೆಯಲ್ಲಿ ಸ್ಪರ್ಧಿಸುತ್ತಾ ಬಂದಿದ್ದಾರೆ. 1985ರಲ್ಲಿ ನಡೆದ ಚುನಾವಣೆಯಲ್ಲಿ ಅತ್ಯಂತ ಹೆಚ್ಚು 28,000 ಮತಗಳನ್ನು ಗಳಿಸಿ ಕೆ.ಜಿ.ಎಫ್ ಮೀಸಲು ಕ್ಷೇತ್ರದಿಂದ ಶಾಸಕರಾಗಿ ಚುನಾಯಿತರಾದರು.

ಆ ಸಂದರ್ಭದಲ್ಲಿ ರೌಡಿಗಳ ಅಟ್ಟಹಾಸದಿಂದಾಗಿ ಗಲಭೆಯ ವಾತಾವರಣವಿದ್ದ ಕೆಜಿಎಫ್‌ನಲ್ಲಿ ಶಾಂತಿ ನೆಲೆಸುವಂತೆ ಮಾಡಿದರು. ಗಣಿಯನ್ನು ಮುಚ್ಚಿಬಿಡುವುದಾಗಿ ಕೇಂದ್ರ ಸರಕಾರ ಘೋಷಿಸಿದಾಗ ಕೆಜಿಎಫ್‌ನ ಎಲ್ಲಾ ರಾಜಕೀಯ ಪಕ್ಷಗಳನ್ನು ಮತ್ತು ಕಾರ್ಮಿಕ ಸಂಘಗಳನ್ನು ಒಂದುಗೂಡಿಸಿ 'save KGF committee' ಯನ್ನು ರಚಿಸಿ ಅದರ ಸಂಚಾಲಕರಾಗಿ ಹಲವಾರು ಹೋರಾಟಗಳಿಗೆ ನೇತೃತ್ವ ನೀಡಿದರು.

ಶಾಸಕರಾಗಿ ಕೆಜಿಎಫ್‌ನಲ್ಲಿ ಕುಡಿಯುವ ನೀರಿನ ಬವಣೆಯನ್ನು ಬಗೆಹರಿಸಲು ಕ್ಷೇತ್ರದಲ್ಲಿ ಮೊತ್ತಮೊದಲ ಬಾರಿಗೆ ವ್ಯಾಪಕವಾಗಿ ಕೊಳವೆ ಬಾವಿಗಳನ್ನು ಹಾಕಿಸಿದರು. ಆಸ್ಪತ್ರೆಗಳನ್ನು ಸುಸಜ್ಜಿತಗೊಳಿಸುವುದು, ದುರಸ್ತಿ ಕಾಣದೆ ಬಿದ್ದುಹೋಗಿದ್ದ ಶಾಲಾ ಕಟ್ಟಡಗಳನ್ನು ನವೀಕರಣಗೊಳಿಸಿ ವಿದ್ಯಾಭ್ಯಾಸಕ್ಕೆ ಅನುಕೂಲವಾದ ವಾತಾವರಣವನ್ನು ನಿರ್ಮಿಸಿದರು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ಹಾಸ್ಟೆಲ್‌ಗಳ ನಿರ್ಮಾಣವಾಗುವಂತೆ ಮಾಡಿದರು. ಇದಲ್ಲದೇ ಕೆ.ಎಸ್.ಆರ್.ಟಿ.ಸಿ. ಬಸ್ಸು ನಿಲ್ದಾಣವನ್ನು ನಿರ್ಮಿಸುವ ತೀರ್ಮಾನವನ್ನು ತೆಗೆದುಕೊಳ್ಳುವಂತೆ ಮಾಡಿದರು.

ಬಿಜಿಎಂಎಲ್ ಗಣಿ ಮುಚ್ಚಿಹೋಗಿ ಕಳೆದ 4-5 ವರ್ಷಗಳಿಂದ ಯಾವುದೇ ರೀತಿಯ ಪರಿಹಾರ ಸಿಗದೆ ಜನತೆ ತತ್ತರಿಸುತ್ತಿರುವ ಸಂದರ್ಭದಲ್ಲಿ ಅವರ ಸಮಸ್ಯೆಗಳ ಪರಿಹಾರಕ್ಕಾಗಿ ನಿರಂತರ ಹೋರಾಟಗಳನ್ನು ನಡೆಸಿಕೊಂಡು ಬಂದು ಗಣಿ ಕಾರ್ಮಿಕರಿಂದ ಮಾತ್ರವಲ್ಲದೇ ಇಡೀ ಕೆಜಿಎಫ್‌ನ ಜನತೆಯಿಂದ ವಾದ್ಯಾರಯ್ಯ, ಟಿ.ಎಸ್, ತೇನ್.ಸು.ಮಣಿ ಎಂದು ಆತ್ಮೀಯವಾಗಿ ಕರೆಯಿಸಿಕೊಂಡು ಬಂದ ಕಾಂ.ಟಿ.ಎಸ್.ಮಣಿಯವರ ಅಗಲಿಕೆ ದಿಗ್ಭ್ರಮೆಯನ್ನುಂಟುಮಾಡಿದೆ.

ಭಾವಪೂರ್ಣ ಅಂತಿಮ ನಮನ

ಅವರಿಗೆ ಅಂತಿಮ ನಮನ ಸಲ್ಲಿಸಲು ಕೆಜಿಎಫ್‌ನ ಸಾವಿರಾರು ಜನ ಸೇರಿದ್ದರು. 14ನೇ ತಾರೀಖು ಬೆಳಗ್ಗಿನ ಜಾವದಿಂದಲೇ ಬೇರೆ ಬೇರೆ ಪಂಚಾಯತಿಗಳ ಜನತೆ, ವಾರ್ಡುಗಳ ಜನತೆ, ಕಾರ್ಮಿಕ ಸಂಘಗಳ ಜನ, ಶಾಲಾ ಕಾಲೇಜುಗಳ ಉಪಾಧ್ಯಾಯರು, ವಿದ್ಯಾರ್ಥಿಗಳು, ಸ್ಥಳೀಯ ಶಿಕ್ಷಣರಂಗದ ಪ್ರಮುಖರು ಸಾಲು ಸಾಲಾಗಿ ಬಂದು ಅಗಲಿದ ನಾಯಕನಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಆಂಡರ್‌ಸನ್‌ಪೇಟೆಯ ವ್ಯಾಪಾರಿಗಳು ಇಡೀ ದಿನ ಅಂಗಡಿಗಳನ್ನು ಮುಚ್ಚಿದರೆ, ರಾಬರ್ಟ್‌ಸನ್ ಪೇಟೆಯ ವ್ಯಾಪಾರಿಗಳೆಲ್ಲರೂ ಮಧ್ಯಾಹ್ನದ ನಂತರ ಕಾಂ.ಟಿ.ಎಸ್.ಮಣಿಯವರ ಗೌರವಾರ್ಥ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿದರು.

ಅವರ ನಿರಾಡಂಬರ ಸರಳ ಜೀವನದ ಬಗ್ಗೆ, ಕಮ್ಯುನಿಸ್ಟ್ ಜೀವನ ಶೈಲಿಯ ಬಗ್ಗೆ ಜನರು ನೆನೆಸಿಕೊಂಡು ಮಾತಾಡುತ್ತಿದ್ದರು.

ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿ ಕಾಂ.ಜಿ.ಎನ್.ನಾಗರಾಜ್, ರಾಜ್ಯ ಮುಖಂಡರಾದ ಕಾ.ವಿ.ಜೆ.ಕೆ.ನಾಯರ್, ಕಾಂ.ಜಿ.ವಿ.ಶ್ರೀರಾಮರೆಡ್ಡಿ, ಕಾಂ.ಪ್ರಕಾಶ್, ಕಾಂ.ಜಿ.ಸಿ.ಬಯ್ಯಾರೆಡ್ಡಿ, ಕಾಂ.ಇ.ಕೆ.ಎನ್. ರಾಜನ್, ಕಾಂ.ಮೀನಾಕ್ಷಿ ಸುಂದರಂ, ಕಾಂ.ಉಮೇಶ್, ಕಾಂ.ಮುಜೀಬ್, ಕೋಲಾರ ಜಿಲ್ಲಾ ಸಮಿತಿ ಸದಸ್ಯರು, ಬಾಗೇಪಲ್ಲಿ ತಾಲ್ಲೂಕು ಸಮಿತಿ ಸದಸ್ಯರು, ಡಿವೈಎಫ್ಐ, ಎಸ್.ಎಫ್.ಐ,

ಪುಟ 8ಕ್ಕೆ

ಕಾಂ.ಮಣಿ ಅವರ ನಿಧನಕ್ಕೆ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರಾದ ಆರ್.ಉಮಾನಾಥ್, ಕೇಂದ್ರಸಮಿತಿ ಸದಸ್ಯರಾದ ರಾಮಚಂದ್ರನ್, ತಮಿಳುನಾಡು ರಾಜ್ಯಸಮಿತಿ ಕಾರ್ಯದರ್ಶಿ ಎನ್.ವರದರಾಜನ್, ರಾಜ್ಯ ಮುಖಂಡರಾದ ಎ.ಕೆ.ಪದ್ಮನಾಭನ್, ಡಿ.ಲಕ್ಷ್ಮಣನ್, ಜಿ.ರಾಮಕೃಷ್ಣನ್, ವಿ.ಮೀನಾಕ್ಷಿ ಸುಂದರಂ, ಪಿ.ಸೆಲ್ವಸಿಂಗ್, ಸಿಐಟಿಯು ರಾಜ್ಯ ಕಾರ್ಯದರ್ಶಿ ಎ.ಸೌಂದರ್‌ರಾಜನ್ ಹಾಗೂ ಸಿಐಟಿಯು ಮುಖಂಡರಾದ ಟಿ.ಕೆ.ರಂಗರಾಜನ್ ಅವರುಗಳು ತಮ್ಮ ತೀವ್ರ ಸಂತಾಪವನ್ನು ಸೂಚಿಸಿದ್ದಾರೆ.

ಸಿಪಿಐ(ಎಂ) ರಾಜ್ಯಸಮಿತಿ ಶ್ರದ್ಧಾಂಜಲಿ

ದಮನಿತರ ನಡುವೆ ಬೆಳೆದ ಸರಳಜೀವಿ, ಹಲವು ಐತಿಹಾಸಿಕ ಹೋರಾಟಗಳ ನಾಯಕ, ಸದಾ ಸ್ಮರಣೀಯ, ಭಾರತ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮಿತಿ ಸದಸ್ಯರಾದ, ದಲಿತ ಗಣಿ ಕಾರ್ಮಿಕರ ನಾಯಕರಾದ, ಕೆಜಿಎಫ್‌ನಲ್ಲಿ ಕಮ್ಯೂನಿಸ್ಟ್ ಚಳುವಳಿಯನ್ನು ಕಟ್ಟಿ ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸಿದ ಹಾಗೂ ಮಾಜಿ ಶಾಸಕರಾದ ಟಿ.ಎಸ್.ಮಣಿಯವರು ಜುಲೈ 13ರಂದು ರಾತ್ರಿ 8.45ಕ್ಕೆ ಕೋಲಾರದ ದೇವರಾಜ್ ಅರಸು ಮೆಡಿಕಲ್ ಕಾಲೇಜು ಆಸ್ಪತ್ರೆಯಲ್ಲಿ ನಿಧನರಾಗಿರುತ್ತಾರೆ. ಇವರಿಗೆ 68 ವರ್ಷ ವಯಸ್ಸಾಗಿತ್ತು.

ಇತ್ತೀಚಿಗಷ್ಟೆ ವೆಲ್ಲೂರಿನಲ್ಲಿ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಮಣಿಯವರು 15 ದಿನಗಳ ಹಿಂದೆ ಅಸ್ವಸ್ಥರಾಗಿ ಆಸ್ಪತ್ರೆಗೆ ಸೇರಿದ್ದರು.

ಸ್ವಾತಂತ್ರ್ಯ ಹೋರಾಟದಲ್ಲಿ ಧೀರ ಪಾತ್ರವಹಿಸಿದ ಗಣಿ ಕಾರ್ಮಿಕರ ಪರಂಪರೆಯಲ್ಲಿಯೇ ಬೆಳೆದ ಟಿ.ಎಸ್.ಮಣಿ ನಾಲ್ಕು ದಶಕಗಳ ಕಾಲ ಕಾರ್ಮಿಕ ಚಳುವಳಿಗೆ ಸೇವೆಸಲ್ಲಿಸಿದ್ದಾರೆ. 1958 ರಲ್ಲಿ ಗಣಿಕಾರ್ಮಿಕನಾಗಿ ಕೆಲಸಕ್ಕೆ ಸೇರಿದ ಮಣಿಯವರು ಮೈಸೂರು ಗಣಿ ನೌಕರರ ಸಂಘದ ಕಾರ್ಯದರ್ಶಿ ಯಾಗಿ ನಂತರ ಭಾರತ ಗೋಲ್ಡ್ ಮೈನ್ಸ್ ಎಂಪ್ಲಾಯಿಸ್ ಯೂನಿಯನ್‌ನ ಪದಾಧಿಕಾರಿಯಾಗಿ ಕಾರ್ಮಿಕರ ಪರವಾಗಿ ಹಲವಾರು ಚಳುವಳಿಗಳನ್ನು ನಡೆಸಿದರು. ಸಿಐಟಿಯು ಕರ್ನಾಟಕ ರಾಜ್ಯದ ಉಪಾಧ್ಯಕ್ಷರಲ್ಲೊಬ್ಬರಾಗಿದ್ದು, ಅಖಿಲ ಭಾರತ ಜನರಲ್ ಕೌನ್ಸಿಲ್ ನ ಸದಸ್ಯರೂ ಆಗಿದ್ದರು. 1974 ರಲ್ಲಿ ಬಿ.ಜಿ.ಎಂ.ಎಲ್ ನಲ್ಲಿ 18,000 ನೌಕರರ 48 ದಿನಗಳ ಮುಷ್ಕರದಲ್ಲಿ ಅವರ ನೇತೃತ್ವ ಐತಿಹಾಸಿಕವಾದುದು.

1985ರಲ್ಲಿ ಕೆಜಿಎಫ್ ಮೀಸಲು ವಿಧಾನ ಸಭಾ ಕ್ಷೇತ್ರದಿಂದ ಸಿಪಿಐ(ಎಂ) ವತಿಯಿಂದ ವಿಧಾನ ಸಭೆಗೆ ಆಯ್ಕೆಯಾಗಿದ್ದು ದುಡಿಯುವ ಜನರ, ಹಾಗೂ ಇತರೆ ಜನವಿಭಾಗದ ಸಮಸ್ಯೆಗಳ ಕುರಿತಾಗಿ ಸರಕಾರದ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದ್ದರು. ಶಾಸಕರಾಗಿಯೂ ಸರಳ ಜೀವನ ನಡೆಸಿದ ಟಿ.ಎಸ್.ಮಣಿ ಕಾಲ್ನಡಿಗೆಯಲ್ಲಿಯೇ ಸಂಚರಿಸುತ್ತಾ ಬಡವರಿಗೆ ಸುಲಭ ಲಭ್ಯರಾಗಿದ್ದರು. ಕೊನೆಯವರೆಗೂ ಬಡತನದಲ್ಲಿಯೇ ಬದುಕಿದರು.

ಟಿ.ಎಸ್.ಮಣಿಯವರು ಪತ್ನಿ ಮತ್ತು ಮಗಳನ್ನು ಹಾಗೂ ಅಪಾರ ಹಿತೈಷಿಗಳನ್ನು ಅಗಲಿದ್ದಾರೆ. ಈ ಸಂದರ್ಭದಲ್ಲಿ ಅವರ ಪತ್ನಿ ಹಾಗೂ ಮಗಳ ದುಃಖದಲ್ಲಿ ಸಿಪಿಐ(ಎಂ) ಭಾಗಿಯಾಗುತ್ತದೆ. ಅಗಲಿದ ಗಣಿ ಕಾರ್ಮಿಕ ನಾಯಕನಿಗೆ ಸಿಪಿಐ(ಎಂ) ತನ್ನ ಕೆಂಬಾವುಟವನ್ನು ತಗ್ಗಿಸಿ ವಂದನೆ ಸಲ್ಲಿಸುತ್ತದೆ.

ಗುಲ್ಬರ್ಗಾ : ಅಸ್ವಸ್ಥ ಆಸ್ಪತ್ರೆ - ಚಿಕಿತ್ಸೆಗಾಗಿ ಚಳುವಳಿ

ಹೈದರಾಬಾದ್ ಕರ್ನಾಟಕದ ಗುಲ್ಬರ್ಗ ಜಿಲ್ಲಾ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಹಲವಾರು ಮೂಲಭೂತ ಸೌಲಭ್ಯಗಳಿಗಾಗಿ ಒತ್ತಾಯಿಸಿ, ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ನಗರ ಸಮಿತಿ ನೇತೃತ್ವದಲ್ಲಿ ಜೂನ್ 13ರಂದು ನೂರಾರು ಜನರು ಐದು ದಿನಗಳ ಧರಣಿ ಸತ್ಯಾಗ್ರಹ ನಡೆಸಿದರು.

ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ದಿನವೊಂದಕ್ಕೆ ಸಾವಿರಾರು ರೋಗಿಗಳು ತಪಾಸಣೆ ಮತ್ತು ಚಿಕಿತ್ಸೆಗಾಗಿ ಬರುತ್ತಾರೆ. ಒಂದು ವರ್ಷದಲ್ಲಿ 4 ಲಕ್ಷ 96 ಸಾವಿರ ಹೊರರೋಗಿಗಳು 49 ಸಾವಿರ ಒಳರೋಗಿಗಳು ಚಿಕಿತ್ಸೆ ಪಡೆಯುವ 760 ಬೆಡ್‌ಗಳ ಬೃಹತ್ ಆಸ್ಪತ್ರೆ ಇದು. ಇಲ್ಲಿಯ ಬಹುಪಾಲು ಜನರಿಗೆ ಖಾಸಗಿ ಆಸ್ಪತ್ರೆ ವೆಚ್ಚ ಭರಿಸಲಾಗದು. ಇವರಿಗೆ ಸರ್ಕಾರಿ ಆಸ್ಪತ್ರೆಯೇ ಆಶ್ರಯವಾಗಿದೆ. ಆದರೆ ಲಕ್ಷಾಂತರ ರೋಗಿಗಳು ಆಶ್ರಯಿಸಿರುವ ಈ ಆಸ್ಪತ್ರೆ ಮೂಲಭೂತ ಸೌಲಭ್ಯ, ವೈದ್ಯರು ಹಾಗೂ ಸಿಬ್ಬಂದಿ ಕೊರತೆ ಮತ್ತು ವೈದ್ಯಕೀಯ ಉಪಕರಣಗಳ ಕೊರತೆ ಅನುಭವಿಸುತ್ತಿದೆ. ಮೆಡಿಕಲ್ ಸರ್ಜರಿ, ಎಲುಬು, ಹೆರಿಗೆ, ಹೃದಯ, ಚರ್ಮ, ದಂತ, ಮೂಗು-ಗಂಟಲು-ಕಿವಿ, ಕಣ್ಣು, ತೀವ್ರ ನಿಗಾ ಘಟಕ ಹೀಗೆ ಒಟ್ಟು 15 ವಿಭಾಗಗಳು ಆಸ್ಪತ್ರೆಯಲ್ಲಿವೆ. 198 ವೈದ್ಯರು ಈ ಆಸ್ಪತ್ರೆಯನ್ನು ಸಮರ್ಥವಾಗಿ ನಿರ್ವಹಿಸಲು ಅಗತ್ಯವಾಗಿದೆ. ಆದರೆ ಈಗ ಈ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಕೇವಲ 32 ಜನ ವೈದ್ಯರು. ಹೀಗೆ ಸಮಸ್ಯೆಗಳ ಆಗರವಾಗಿರುವ ಆಸ್ಪತ್ರೆಯತ್ತ ಜಿಲ್ಲಾಡಳಿತವಾಗಲಿ, ರಾಜ್ಯ ಸರ್ಕಾರವಾಗಲಿ ಗಮನ ಹರಿಸುತ್ತಿಲ್ಲ. ಸರ್ಕಾರದ ಈ ನಿರ್ಲಕ್ಷ್ಯತನಕ್ಕೆ ಇಲ್ಲಿಯ ಜನತೆ ರೋಸಿಹೋಗಿದ್ದಾರೆ.

ಈ ಆಸ್ಪತ್ರೆಗೆ ಕಳೆದ ವರ್ಷದ ನವೆಂಬರ್‌ನಲ್ಲಿ ಎಂಸಿಐ(ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ)ದ ತಂಡ ಬೇಟಿ ನೀಡಿತ್ತು. ಈ ಎಂಸಿಐನ ಹೊಸ ನೀತಿಯಿಂದಾಗಿ ಹೊಸ ಸಮಸ್ಯೆಗಳು ಉದ್ಭವಿಸಿ, ತೀವ್ರ ಸ್ವರೂಪ ಪಡೆದಿವೆ. ಸರ್ಕಾರದ ಈ ವೈದ್ಯಕೀಯ ಆಸ್ಪತ್ರೆಯನ್ನು ಇದುವರೆಗೆ ಖಾಸಗಿ ವೈದ್ಯಕೀಯ ಕಾಲೇಜಾದ ಎಂ.ಆರ್. ಮೆಡಿಕಲ್ ಕಾಲೇಜಿಗೆ ಸೇರ್ಪಡೆ ಮಾಡಲಾಗಿತ್ತು. ಇದರಿಂದ ಈ ಕಾಲೇಜಿನ ವೈದ್ಯಕೀಯ ಸ್ನಾತಕೋತ್ತರ ವಿದ್ಯಾರ್ಥಿಗಳು (ಅರ್ಥಾತ್ ವೈದ್ಯರು) ಮತ್ತು ವೈದ್ಯಕೀಯ ಪದವಿ ವಿದ್ಯಾರ್ಥಿಗಳು (ಕಲಿಕೆಯಲ್ಲಿರುವ ವೈದ್ಯರು) ಇವರ ಸೇವೆಯನ್ನು ಬಳಿಕೊಂಡು ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಜನವರಿ 1, 2005 ರಿಂದ ಈ ಆಸ್ಪತ್ರೆಯನ್ನು ಖಾಸಗಿ ವೈದ್ಯಕೀಯ ಕಾಲೇಜಿಗೆ ಸೇರ್ಪಡೆ ಮಾಡುವ ನೀತಿಗೆ ತಡೆ ಹಾಕಲಾಗಿದೆ. ವಾಸ್ತವವಾಗಿ ಸರ್ಕಾರದ್ದೇ ಆದ ವೈದ್ಯಕೀಯ ಕಾಲೇಜೊಂದನ್ನು ಸ್ಥಾಪಿಸಿ ವೈದ್ಯಕೀಯ ಶಿಕ್ಷಣದ ಅವಕಾಶ ವಿಸ್ತರಿಸುವುದು ಮತ್ತು ಬಡ ರೋಗಿಗಳಿಗೆ ಉತ್ತಮ ಚಿಕಿತ್ಸಾ ಸೌಲಭ್ಯ ನೀಡುವುದು ಇವೆರಡೂ ಸಾಧ್ಯವಿದೆ. ಆದರೆ ಇಂತಹ ರಾಜಕೀಯ ಇಚ್ಛಾಶಕ್ತಿಯಿಲ್ಲ. ಖಾಸಗಿ ವೈದ್ಯಕೀಯ ಕಾಲೇಜು ದೊರೆಗಳ ಮರ್ಜಿಯಲ್ಲಿರುವುದರಲ್ಲೇ ಸರ್ಕಾರಕ್ಕೆ 'ಸುಖ-ಶಾಂತಿ-ನೆಮ್ಮದಿ' ಇದೆ.

ಈ ಗಂಭೀರ ಸಮಸ್ಯೆಯತ್ತ ಸರ್ಕಾರದ ಗಮನ ಸೆಳೆಯಲು ಸಿಪಿಐ(ಎಂ)ನ ನಗರ ಸಮಿತಿ ಜೂನ್ 13 ರಂದು ಜಿಲ್ಲಾ ಆಸ್ಪತ್ರೆ ಎದುರು ಅನಿರ್ದಿಷ್ಟಾವಧಿ ಧರಣಿ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮಕ್ಕೆ ಜಿಲ್ಲೆಯ ವಿವಿಧ ಭಾಗಗಳಿಂದ ನೂರಾರು ಜನರು ಪಾಲ್ಗೊಂಡಿದ್ದರು. ಈ ಧರಣಿ ಕಾರ್ಯಕ್ರಮಕ್ಕೆ ಜನ ಬೆಂಬಲ ಹೆಚ್ಚಾಗುತ್ತಿದ್ದಂತೆ ವಿವಿಧ ಪಕ್ಷಗಳ ಮುಖಂಡರು ಭಾಗವಹಿಸ ತೊಡಗಿದ್ದರು. ಧರಣಿ ಸ್ಥಳಕ್ಕೆ ಜೆಡಿ(ಎಸ್)ನ ಶಾಸಕರಾದ ಬಿ.ಆರ್.ಪಾಟೀಲ್ ಭೇಟಿ ನೀಡಿ ಆಸ್ಪತ್ರೆಯ ಸಮಸ್ಯೆ ಬಗೆಹರಿಸುವಂತೆ ಸರ್ಕಾರದ ಗಮನ ಸೆಳೆಯುತ್ತೇನೆ ಎಂಬ ಭರವಸೆ ನೀಡಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹಾಗೂ ಗುಲ್ಬರ್ಗಾ ಸಂಸತ್ ಸದಸ್ಯರಾದ ಇಕ್ಬಾಲ್ ಅಹ್ಮದ್ ಸರಡಗಿ ಭೇಟಿ ನೀಡಿ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಸಮಸ್ಯೆ ಬಗೆ ಹರಿಸುವುದಾಗಿ ಭರವಸೆ ನೀಡಿದರು.

ಗುಲ್ಬರ್ಗಾ ವಿಧಾನಸಭಾ ಕ್ಷೇತ್ರದ ಹಾಲಿ ಶಾಸಕರಾದ ಬಿಜೆಪಿಯ ಚಂದ್ರಶೇಖರ ದಾವೂರರಿಗೆ ತಾವೇ ಈ ಚಳುವಳಿಯ ಮುಂದೆ ನಿಲ್ಲಬೇಕಾದ ಕರ್ತವ್ಯ ಇತ್ತು. ಆದರೆ ಕನಿಷ್ಟ ಅವರು ನಡೆಯುತ್ತಿರುವ ಹೋರಾಟದ ಸ್ಥಳಕ್ಕೆ ಭೇಟಿ ನೀಡುವ ಸೌಜನ್ಯವನ್ನು ತೋರಲಿಲ್ಲ. ಹೈದರಾಬಾದ್ ಕರ್ನಾಟಕ ವಿಭಾಗವನ್ನು ಪ್ರತಿನಿಧಿಸುವ ಹಾಲಿ ವಿಧಾನ ಪರಿಷತ್ ಸದಸ್ಯರಾದ, ಬಿಜೆಪಿಯ ರಾಜ್ಯ ಮುಖಂಡರೂ ಸ್ವತಃ ವೈದ್ಯರೂ ಆದ 'ಡಾ. ತಂಗಾ' ರವರಿಗೂ ಈ ಹೋರಾಟವೇನೂ ರುಚಿಸಲಿಲ್ಲ. ಅವರನ್ನು ಹೋರಾಟ ಸೆಳೆಯಲಿಲ್ಲ. ಕಮ್ಯುನಿಸ್ಟರ ನೇತೃತ್ವದ ಹೋರಾಟಕ್ಕೆ ಬರುವುದು ಬೇಡ. ಸ್ವತಃ ಈ ಸಂಬಂಧ ಏನಾದರೂ ಮಾಡಬೇಕಲ್ಲ! ಅದೂ ಇಲ್ಲ.

ಈ ಮಧ್ಯೆ ಸಮಸ್ಯೆಗಳ ಬಗೆಗೆ ಗಮನ ನೀಡಲಾಗುವುದೆಂದೂ, ಹೋರಾಟ ಕೈಬಿಡಬೇಕೆಂದು ಚಳುವಳಿಕಾರನ್ನು ಜಿಲ್ಲಾಡಳಿತ ವಿನಂತಿಸಿತು. ಜೂನ್ 16 ರ ಸಂಜೆ ಸ್ವತಃ ಮುಖ್ಯಮಂತ್ರಿಗಳು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು. ಜೂನ್ 17ರಂದು ಮುಖ್ಯಮಂತ್ರಿಗಳ ಸೂಚನೆಯ ಮೇರೆಗೆ ಆರೋಗ್ಯ ಇಲಾಖೆ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ವೈದ್ಯಾಧಿಕಾರಿಗಳು ಧರಣಿ ನಿರತರನ್ನು ಭೇಟಿಮಾಡಿ ಮೂಲಭೂತ ಸೌಲಭ್ಯ ಕಲ್ಪಿಸುವ ಭರವಸೆ ನೀಡಿದ ನಂತರ ಅನಿರ್ದಿಷ್ಟಾವಧಿ ಸತ್ಯಾಗ್ರಹ ಕೊನೆಗೊಂಡಿತು.

ಗುಲ್ಬರ್ಗಾದಲ್ಲಿ ನಡೆದ ಜಿಲ್ಲಾ ಅಭಿವೃದ್ಧಿಗೆ ಸಂಬಂಧಿಸಿದ ಸಭೆಗೆ ಚಳುವಳಿಗಾರರನ್ನು ಆಹ್ವಾನಿಸಲಾಯಿತು. ಈ ಸಭೆಯಲ್ಲಿ ಸಿಪಿಐ(ಎಂ) ನೇತೃತ್ವದ ಚಳುವಳಿಯ ಪರವಾಗಿ ಮಾತನಾಡಿದ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಾರುತಿ ಮಾನ್ಪಡೆಯವರು ಆಸ್ಪತ್ರೆಯ ಸಮಗ್ರ ಸಮಸ್ಯೆಯ ಕುರಿತು ಅತ್ಯಂತ ಪರಿಣಾಮಕಾರಿಯಾಗಿ ಮಾತನಾಡಿ ಜಿಲ್ಲೆಯ ವೈದ್ಯಕೀಯ ವ್ಯವಸ್ಥೆಗೆ 'ದೊಡ್ಡ ಆಪರೇಷನ್' ಆಗಬೇಕಾದ ಅಗತ್ಯವನ್ನು ಮನವರಿಕೆ ಮಾಡಿಕೊಟ್ಟರು.

ಮುಖ್ಯಮಂತ್ರಿಗಳು, ಜನಪ್ರತಿನಿಧಿಗಳು ಹಾಗೂ ರಾಜಕೀಯ ಪಕ್ಷಗಳ ಮುಖಂಡರೊಡನೆ ಈ ಮಾತುಕತೆಯು ನಡೆಯಿತು. ಈ ಸಭೆಯಲ್ಲಿ ಸಿಪಿಐ(ಎಂ) ಮೇಘರಾಜ ಕಠಾರೆ ಸಹ ಭಾಗವಹಿಸಿದ್ದರು.

ಚಳುವಳಿಯ ಫಲಶೃತಿ

ಒಟ್ಟು ಈ ಚಳುವಳಿಯ ಫಲಶೃತಿಯಾಗಿ ಜಿಲ್ಲಾ ಆಸ್ಪತ್ರೆಗೆ 15 ಕೋಟಿ ರೂಪಾಯಿಗಳ ವೆಚ್ಚದ ಹೊಸ ಕಟ್ಟಡ ನಿರ್ಮಿಸುವ ಬಗೆಗೆ ಹಾಗೂ ಹಾಲಿ ಇರುವ ಆಸ್ಪತ್ರೆ ಕಟ್ಟಡವನ್ನು ನವೀಕರಿಸಲು 4 ಕೋಟಿ ರೂಪಾಯಿಗಳನ್ನು ನೀಡುವ ಬಗೆಗೆ ನಿರ್ಧಾರವಾಗಿದೆ.

ಇದಲ್ಲದೆ 166 ವೈದ್ಯರುಗಳನ್ನು 35 ಕಿರಿಯ ವೈದ್ಯರುಗಳನ್ನು ತುಂಬಿಕೊಳ್ಳುವ ಸಂಬಂಧ ತತ್‌ಕ್ಷಣ ಕ್ರಮ ವಹಿಸುವುದಾಗಿ ಮುಖ್ಯಮಂತ್ರಿಗಳ ಭರವಸೆ ನೀಡಿದ್ದಾರೆ. ಆಸ್ಪತ್ರೆಯ ಮತ್ತೊಂದು ಗಂಭೀರ ಸಮಸ್ಯೆಯಾದ ನೀರಿನ ಸಮಸ್ಯೆ ನಿವಾರಿಸುವ ಬಗೆಗೆ ಸಹ ಭರವಸೆ ನೀಡಲಾಗಿದೆ.


ಈ ಧರಣಿ ಸತ್ಯಾಗ್ರಹದ ನೇತೃತ್ವವನ್ನು ಸಿಪಿಐ(ಎಂ)ನ ನಗರ ಕಾರ್ಯದರ್ಶಿ ಗಂಗಮ್ಮ ಬಿರಾದಾರ, ಜೈಲಾಲ್ ತೋಟದ ಮನಿ, ಗೌರಮ್ಮ ಪಾಟೀಲ್, ಸಿದ್ದಮ್ಮ ರವೀಂದ್ರ ಬೋಧನ, ಮಲ್ಲಿಕಾರ್ಜುನ ಹರಸೂರು, ಸತ್ಯಭೋದ, ಸಂಗಮ್ಮ ಪಾಟೀಲ, ಮಂಜೂರ ಪಟೇಲ್, ಶ್ರೀಮಂತ ಬಿರಾದಾರ, ವಿರುಪಾಕ್ಷಪ್ಪಾ ಮತ್ತು ಅರುಣ ಕುಮಾರ್ ಮೊದಲಾದವರು ವಹಿಸಿದ್ದರು.

'ಮಾದರಿ ಶೋಷಣೆ' ವಿರುದ್ಧ ಬಿ.ಎಸ್.ಎನ್.ಎಲ್.ನ 'ಖಾಯಂ ಅಲ್ಲದ' ಕೆಲಸಗಾರರ ಪ್ರತಿಭಟನೆ

ಭಾರತ ಸರಕಾರದ ಸ್ವಾಯತ್ತ ಸಂಸ್ಥೆಯಾದ ಭಾರತ ಸಂಚಾರ ನಿಗಮ ಲಿಮಿಟೆಡ್‌ನಲ್ಲಿ ದುಡಿಯುತ್ತಿರುವ ನಾನ್-ಪರ್ಮನೆಂಟ್ ನೌಕರರ ನ್ಯಾಯೋಚಿತವಾದ ಮತ್ತು ಸಂವಿಧಾನಬದ್ಧವಾಗಿ ಸಿಗಬೇಕಾದ ಸೌಲಭ್ಯಗಳನ್ನು ಒತ್ತಾಯಿಸಿ ಕರ್ನಾಟಕ ರಾಜ್ಯ ಬಿಎಸ್‌ಎನ್‌ಎಲ್ ನಾನ್- ಪರ್ಮನೆಂಟ್ ವರ್ಕರ್ಸ್ ಯೂನಿಯನ್ ಉಡುಪಿ ಜಿಲ್ಲಾ ಸಮಿತಿ ಆಶ್ರಯದಲ್ಲಿ ಜೂನ್ 17ರಂದು ಉಡುಪಿ ನಗರದ ಕುಂಜಿಬೆಟ್ಟು ಶಾರದಾ ಕಲ್ಯಾಣ ಮಂಟಪದಿಂದ ಕಡಿಯಾಳಿಯ ಬಿಎಸ್‌ಎನ್‌ಎಲ್‌ನ ಏರಿಯಾ ಜನರಲ್ ಮೇನೇಜರ್ ಕಛೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಜನರಲ್ ಮೆನೇಜರ್ ಪರವಾಗಿ ಡೆಪ್ಯೂಟಿ ಜನರಲ್ ಮೆನೇಜರ್‌ರವರು ಮನವಿ ಸ್ವೀಕರಿಸಿದರು.

ಉಡುಪಿ ಜಿಲ್ಲೆಯಲ್ಲಿ ಬಿಎಸ್‌ಎನ್‌ಎಲ್ ಅಧಿಕಾರಿಗಳ ಕೈಕೆಳಗೆ ಇರುವ ವಿವಿಧ ಕಚೇರಿ ಮತ್ತು ದೂರವಾಣಿ ವಿನಿಮಯ ಕೇಂದ್ರಗಳಲ್ಲಿ ದುಡಿಯುತ್ತಿರುವ ಹಂಗಾಮಿ, ತಾತ್ಕಾಲಿಕ, ದಿನಕೂಲಿ ಮತ್ತು ಗುತ್ತಿಗೆ ಕಾರ್ಮಿಕರಿಗೆ ಸರಕಾರ ನಿಗದಿ ಪಡಿಸಿದ ಕನಿಷ್ಟ ವೇತನ, ಗುರುತು ಚೀಟಿ, ಹಾಜರಿ ಪುಸ್ತಕ, ಭವಿಷ್ಯ ನಿಧಿ, ಇ.ಎಸ್.ಐ., ಗ್ರಾಚ್ಯುಟಿ, ಸರಕಾರ ನಿಗದಿ ಪಡಿಸಿದ ರಜಾ ಸೌಲಭ್ಯ ಇತ್ಯಾದಿ ಸವಲತ್ತುಗಳನ್ನು ಜಾರಿಗೊಳಿಸುವಂತೆ ಘೋಷಣೆ ಹಾಕಿ ಒತ್ತಾಯಿಸಿದರು.

ಸಂಘದ ಉಡುಪಿ ಜಿಲ್ಲಾ ಅಧ್ಯಕ್ಷರಾದ ಪಿ.ವಿಶ್ವನಾಥ ರೈಯವರು ನೌಕರರನ್ನು ಉದ್ದೇಶಿಸಿ ಮಾತನಾಡುತ್ತಾ ಈ ಸಂಸ್ಥೆಯಲ್ಲಿ ಹೆಚ್ಚಿನ ನೌಕರರು 1996ಕ್ಕೂ ಮೊದಲಿನಿಂದಲೂ ನಿರಂತರವಾಗಿ ದುಡಿಯುತ್ತಿದ್ದಾರೆ. ಕೇಂದ್ರ ಸರಕಾರದ ಈ ಸಂಸ್ಥೆ ಎಲ್ಲಾ ಸಂಸ್ಥೆಗಳಿಗೆ ಮಾದರಿಯಾಗಿರಬೇಕಾಗಿತ್ತು. ಆದರೆ ಇದು ಕಾರ್ಮಿಕರ ಶೋಷಣೆಗೆ ಮಾದರಿ ಆಗಿದೆ. ಈ ನೌಕರರ ಪರಿಶ್ರಮದ ದುಡಿಮೆಯ ಫಲವನ್ನು ಕೆಲವೇ ಮಂದಿ ಗುತ್ತಿಗೆದಾರರು ಮತ್ತು ಉನ್ನತ ಅಧಿಕಾರಿಗಳು ಅನುಭವಿಸುತ್ತಿದ್ದಾರೆ. ಸಂಘಟಿತರಾದರೆ ಇದ್ದ ಕೆಲಸವನ್ನೂ ಕಳೆದುಕೊಳ್ಳುವಿರೆಂಬ ಭಯವನ್ನು ಒಡ್ಡುತ್ತಿದ್ದಾರೆ. ಹಂಗಾಮಿ ಕಾರ್ಮಿಕರನ್ನು ಬೇನಾಮಿ ಹೆಸರಿನಲ್ಲಿ ದುಡಿಸುತ್ತಿದ್ದಾರೆ. ಕೆಲಸ ಮಾಡುವವರು ಒಬ್ಬರಾದರೆ ಸಂಬಳವನ್ನು ಪಡೆಯುವ ದಾಖಲೆಯಲ್ಲಿ ಇನ್ನೊಬ್ಬರ ಹೆಸರು ಇರುತ್ತದೆ. ಈ ರೀತಿಯ ಕಾನೂನುಬಾಹಿರ ಶೋಷಣೆಗಳು ನಿಲ್ಲಬೇಕು ಎಂದರು.



ಸಂಘದ ಉಪಾಧ್ಯಕ್ಷ ಎಸ್.ಅಪ್ಪಾಜಿಯವರು ವಂದನಾರ್ಪಣೆ ಮಾಡಿದರು.

ಕಾರ್ಯಕ್ರಮದ ನೇತೃತ್ವವನ್ನು ಸಿಪಿಐ(ಎಂ) ಪಕ್ಷದ ಡೇವಿಡ್ ಎ. ಕರ್ಕಡ, ಸಂಘದ ಉಪಾಧ್ಯಕ್ಷ ಮೋಹನ್, ಕೋಶಾಧಿಕಾರಿ ರವಿರಾಜ್, ಸಂತೋಷಕುಮಾರ್ ಮೊದಲಾದವರು ವಹಿಸಿದ್ದರು.

ತೈಲ ಬೆಲೆ ಏರಿಕೆ ಮತ್ತು ಬಸ್ ಪ್ರಯಾಣ ದರ ಏರಿಕೆ ವಿರುದ್ಧ ಮುಂದುವರಿದ ಸಿ.ಪಿ.ಐ(ಎಂ) ಪ್ರತಿಭಟನೆ

ಕೇಂದ್ರ ಯು.ಪಿ.ಎ ಸರಕಾರದ ತೈಲ ಬೆಲೆ ಏರಿಕೆ ವಿರೋಧಿಸಿ, ರಾಜ್ಯ ಸರಕಾರದ ಬಸ್ ಪ್ರಯಾಣ ದರ ಏರಿಕೆ ವಿರೋಧಿಸಿ ಕಾರವಾರದ ಸುಭಾಶ ಸರ್ಕಲ್‌ನಲ್ಲಿ ಸಿಪಿಐ(ಎಂ) ಪಕ್ಷದ ಮತ್ತು ಇನ್ನಿತರ ಸಂಘಟನೆಗಳ ನೂರಾರು ಕಾರ್ಯಕರ್ತರು ಪ್ರತಿಭಟನಾ ಪ್ರದರ್ಶನ ನಡೆಸಿ ಸರಕಾರದ ಭೂತದಹನ ನಡೆಸಲಾಯಿತು. ಎಡಪಕ್ಷಗಳು ದೇಶಾದ್ಯಂತ ಚಳುವಳಿ ನಡೆಸಲು ಕರೆ ನೀಡಿದ್ದರ ಭಾಗವಾಗಿ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಜಿಲ್ಲಾಧಿಕಾರಿಗಳಿಗೆ ಮನವಿ ನೀಡಿ ಬೆಲೆ ಏರಿಕೆ ವಾಪಸ್ಸಿಗೆ ಒತ್ತಾಯಿಸಲಾಯಿತು.

ಪ್ರತಿಭಟನೆಯ ನೇತೃತ್ವ ವಹಿಸಿದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ, ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡುತ್ತ ದರ ಏರಿಕೆ ಜನಸಾಮಾನ್ಯರ ಮೇಲೆ ತೀವ್ರ ಹೊರೆಯಾಗಿದ್ದು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಸರಕಾರ ತೈಲ ಬೆಲೆ ಏರಿಸಬೇಕಾದ ಪ್ರಮೇಯವೇ ಇಲ್ಲ. ಪೆಟ್ರೋಲ್‌ನ ವಾಸ್ತವಿಕ ಬೆಲೆ ಲೀಟರ್‌ಗೆ 19.00 ರೂ ಮಾತ್ರ. ಡಿಸೇಲ್‌ನ ವಾಸ್ತವಿಕ ಬೆಲೆ ಲೀಟರ್‌ಗೆ 18.53 ರೂಪಾಯಿ ಮಾತ್ರ. ಉಳಿದದ್ದೆಲ್ಲಾ ತೆರಿಗೆ. ಹಾಗಾಗಿ ಎಡಪಕ್ಷಗಳು ಬೆಲೆ ಏರಿಸದೇ ಬದಲಿ ಮಾರ್ಗ ಅನುಸರಿಸಲು ಸೂಚಿಸಿದ್ದವು. ಸರಕಾರ ಇದನ್ನು ನಿರ್ಲಕ್ಷಿಸಿರುವುದು ತೀವ್ರ ಖಂಡನೀಯ, ಬೆಲೆ ಏರಿಕೆ ವಾಪಸ್ಸಾಗಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಸಮಿತಿ ಸದಸ್ಯೆ ಯಮುನಾ ಗಾವಂಕರ್ ಮಾತನಾಡಿ ಅಂತರಾಷ್ಟ್ರೀಯವಾಗಿ ತೈಲ ದರ ಏರಿಕೆಯಿಂದಾಗಿ ನಾವು ಏರಿಸಬೇಕಾಗಿದೆ ಎನ್ನುವುದು ಬೂಟಾಟಿಕೆ. ಕಾರ್ಮಿಕರಿಗೆ ರೈತರಿಗೆ, ಕೂಲಿಕಾರರಿಗೆ ಹೊರೆಯಾದ ತೈಲ ಬೆಲೆ ಏರಿಕೆ ವಾಪಸ್ಸಾಗಬೇಕು ಎಂದರು.

ಪ್ರತಿಭಟನೆಯ ನೇತೃತ್ವವನ್ನು ಕಾರವಾರ ಶಾಖೆ ಕಾರ್ಯದರ್ಶಿ, ಜಿ.ಎಲ್.ನಾಯ್ಕ, ಸದಸ್ಯ ಯಶೋಧನ್, ವಿದ್ಯಾರ್ಥಿ ಮುಖಂಡರಾದ ವಿಠ್ಠಲ


ಕೆ.ಆರ್.ಪುರಂನಲ್ಲಿ ನಡೆದ ಪ್ರತಿಭಟನೆ

ನಾಯ್ಕ, ಭಾರತಿ ಗಾಂವಕರ್, ಡಿಎಸ್‌ಎಸ್‌ನ ಎಲಿಷಾ, ರಿಕ್ಷಾ ಡ್ರೈವರ್‌ಗಳು ಹೀಗೆ ನೂರಾರು ಜನ ಸೇರಿದ್ದರು.

ಕೆ.ಆರ್.ಪುರಂ: ಪೆಟ್ರೋಲ್-ಡೀಸೆಲ್ ಬೆಲೆ ಏರಿಕೆ ಮಾಡಿರುವುದನ್ನು ವಿರೋಧಿಸಿ ಕೆ.ಆರ್.ಪುರಂ ಶಾಖೆಯ ನೇತೃತ್ವದಲ್ಲಿ ದಿನಾಂಕ 04.07.2005ರಂದು ದೇವಸಂದ್ರ ಮುಖ್ಯರಸ್ತೆಯಿಂದ ಮೆರವಣಿಗೆ ಹೊರಟು. ಕೆ.ಆರ್.ಪುರಂ ತಹಸೀಲ್ದಾರ್ ಕಛೇರಿ ಎದುರು ರಾಷ್ಟ್ರೀಯ ಹೆದ್ದಾರಿ 4ರಲ್ಲಿ ರಸ್ತೆ ತಡೆ ನಡೆಸಿ ಭೂತದಹನ ಮಾಡಲಾಯಿತು. ಕೆ.ಆರ್.ಪುರಂ ಶಾಖೆಯ ಕಾರ್ಯದರ್ಶಿ ಕಾಂ.ರಮೇಶ್ ಸಭೆಯ ನೇತೃತ್ವ ವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಗೋಪಾಲಗೌಡ, ಕಾಂ. ಗೌರಮ್ಮ ಹಾಗೂ ಕ್ಷೇತ್ರ ಸಮಿತಿ ಕಾರ್ಯದರ್ಶಿಯಾದ ಕಾಂ. ರಾಮಚಂದ್ರ ಮಾತನಾಡಿದ್ದರು.. ಸುಮಾರು 200 ರಿಂದ 250 ಜನ ಭಾಗವಹಿಸಿದ್ದರು. ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದೆ ಮತ್ತು ಸ್ಥಳೀಯರು ಹಾಗೂ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದರು.


ಮಿಸ್ಟರ್ ಎಲ್.ಕೆ. ಅಡ್ವಾನಿ ರಾಜೀನಾಮೆ ನೀಡುತ್ತಾರೆಯೇ ಇಲ್ಲವೇ ಎಂಬ ಒಗಟಿನ ಹಾಸ್ಯಾಸ್ಪದ ನಾಟಕ ಸಾಕಷ್ಟುಕಾಲ ಮುಂದುವರಿದು ಇದೀಗ ಒಂದು ಪ್ರಮುಖ ಘಟ್ಟಕ್ಕೆ ಬಂದುನಿಂತಿದೆ. ಅತ್ಯಂತ ಅಪಮಾನಕರ ರೀತಿಯಲ್ಲಿ ಅಡ್ವಾಣಿ ಬಿಜೆಪಿಯ ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸುತ್ತಿದ್ದಾರೆ. ಅಧ್ಯಕ್ಷ ಪದವಿ ಬಿಟ್ಟುಕೊಡಲು (ಬೇರೆ ದಾರಿ ಕಾಣದೆ) ಒಪ್ಪಿರುವ ಅಡ್ವಾಣಿಯವರು ಗೌರವಯುತವಾಗಿ(?) ನಿರ್ಗಮಿಸಲು ಕೊಂಚ ಕಾಲಾವಕಾಶ ನೀಡುವಂತೆ ಆರೆಸ್ಸೆಸ್‌ನ್ನು ಕೇಳಿಕೊಂಡಿದ್ದಾರೆ.

ಈ ಎಲ್ಲದರಿಂದಾಗಿ ಚೆನ್ನೈನಲ್ಲಿ ನಿಗದಿಯಾಗಿದ್ದ ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಮುಂದಕ್ಕೆ ಹೋಗಿದೆ. ಅಂದರೆ ಈ ಸಭೆ ನಡೆಯುವ ಸೆಪ್ಟೆಂಬರ್‌ವರೆಗೆ ಅಡ್ವಾಣಿಯವರ ಜೀವದಾನ ದೊರೆತಿದೆ. ಆರೆಸ್ಸೆಸ್ ಒತ್ತಡದಿಂದಾಗಿ ಅಡ್ವಾಣಿ ರಾಜೀನಾಮೆ ನೀಡಬೇಕಾಯಿತು ಎಂಬ ಭಾವನೆ ಜನರಲ್ಲಿ ಮೂಡುವುದನ್ನು ತಪ್ಪಿಸುವುದೇ ಈಗಿನ ಈ ಜೀವದಾನದ ಉದ್ದೇಶ.

ಆರೆಸ್ಸೆಸ್ ತಾನೊಂದು ಪೂರ್ಣವಾಗಿ ಸಾಂಸತಿಕ ಸಂಘಟನೆ, ರಾಜಕೀಯಕ್ಕೂ ತನಗೂ ಏನೂ ಸಂಬಂಧವಿಲ್ಲ ಎಂದು ಏನೇ ಹೇಳಿಕೊಂಡರೂ ಬಿ.ಜೆ.ಪಿ. ಪಕ್ಷವು ಆರ್.ಎಸ್.ಎಸ್.ನ ಒಂದು ರಾಜಕೀಯ ಹಸ್ತವಲ್ಲದೆ ಬೇರೇನೂ ಅಲ್ಲ. ಹೀಗೆ ರಾಜಕೀಯ ಹೊಣೆಗಾರಿಕೆಯನ್ನು 'ಹೊರಗುತ್ತಿಗೆ' ನೀಡುವ ಕ್ರಮವನ್ನು 1951ರಲ್ಲಿ 'ಜನಸಂಘ' ಸ್ಥಾಪಿಸುವುದರ ಮೂಲಕ ಆರೆಸ್ಸೆಸ್ ಕಂಡುಕೊಂಡಿತು. ಮಹಾತ್ಮ ಗಾಂಧಿಯವರ ಹತ್ಯೆಯ ಹಿನ್ನೆಲೆಯಲ್ಲಿ ಆರ್.ಎಸ್.ಎಸ್.ನ್ನು ನಿಷೇಧಿಸಿದ್ದ ಈ ಅವಧಿಯಲ್ಲಿ ಆರ್.ಎಸ್.ಎಸ್.ಗೆ ಇದು ಅಗತ್ಯವಾಗಿತ್ತು. ಬಿಜೆಪಿಯ ಅಧ್ಯಕ್ಷತೆ ಎಂಬ ಹೊಣೆಗಾರಿಕೆ ನಿರ್ವಹಿಸಬೇಕೆಂಬ 'ಹೊರಗುತ್ತಿಗೆ'ಯನ್ನು ಸಂಘದ ಮಾಲೀಕರು ಎಲ್.ಕೆ.ಅಡ್ವಾಣಿಯವರಿಗೆ ನೀಡಿದ್ದಾರೆ. ಅದನ್ನು ತಾವು ಬಯಸಿದಂತೆ ಯಾವಾಗಲಾದರೂ ಮೊಟಕು ಮಾಡುವ ಅಧಿಕಾರ ಇರುವುದು ಈ ಮಾಲೀಕರ ಕೈಯಲ್ಲೇ.

ಸ್ಪಷ್ಟವಾಗಿ ಅಡ್ವಾಣಿಯವರು ಬಿಜೆಪಿ ಅಧ್ಯಕ್ಷತೆಯನ್ನು ಗುತ್ತಿಗೆ ಆಧಾರದಲ್ಲಿ ನಿರ್ವಹಿಸುತ್ತಿದ್ದಾರೆ. ಈ ಗುತ್ತಿಗೆಯ ಅವಧಿಯನ್ನು ಆರ್‌ಎಸ್‌ಎಸ್ ನಿರ್ಣಯಿಸುತ್ತದೆ.

ಮೇಲ್ನೋಟಕ್ಕೆ ಆರ್.ಎಸ್.ಎಸ್. ಮತ್ತು ಬಿಜೆಪಿಗಳ ನಡುವಿನ ವಿವಾದದಂತೆ ಅಥವಾ ಭಿನ್ನಾಭಿಪ್ರಾಯದಂತೆ ತೋರುತ್ತಿರುವ ಈ 'ಸೈದ್ಧಾಂತಿಕ ವಿಚಲನೆ' ಪ್ರಶ್ನೆಯು ಸಂಘಪರಿವಾರವನ್ನು ಆವರಿಸಿಕೊಂಡಿರುವ ನಿಜವಾದ ಬಿಕ್ಕಟ್ಟನ್ನು ಮರೆ ಮಾಚುವ ಒಂದು ಮುಖವಾಡವಾಗಿದೆಯಷ್ಟೆ. ತನ್ನ ವಿಚಾರಗಳ ಆಧಾರದಲ್ಲಿ ಜನರನ್ನು ಅಣಿನೆರೆಸುವಲ್ಲಿ ಅಥವಾ



ಭಾರತದ ಜಾತ್ಯಾತೀತ, ಪ್ರಜಾಸತ್ತಾತ್ಮಕ, ಒಕ್ಕೂಟ ಗುಣಗಳನ್ನು ನಾಶವಾಡಿ ಕೋಮು ವಿಭಜನೆಯನ್ನು ಉಂಟು ಮಾಡುವಲ್ಲಿ ಅವರು ವಿಫಲರಾಗಿದ್ದಾರೆ. ಕೇಸರಿ ಬಳಗದ ನಿಜವಾದ ಬಿಕ್ಕಟ್ಟಿರುವುದೇ ಇಲ್ಲಿ. ಆಯೋಧ್ಯೆಯ ಮೇಲಿನ ಭಯೋತ್ಪಾದಕ ದಾಳಿಯ ನಂತರ ಸಂಘ ಪರಿವಾರವು ಸಾಕಷ್ಟು ತಿಣಕಾಡುತ್ತಿದ್ದರೂ ಜನತೆ ಇದಕ್ಕಿಂತ ಗಂಭೀರವಾದ ಪ್ರಶ್ನೆಗಳ ಬಗೆಗೇ - ಭಾರತದ ಭವಿಷ್ಯದ ಬಗೆಗೇ ಕಾಳಜಿ ವಹಿಸಿದ್ದಾರೆ.


ಅಡ್ವಾಣಿ ಅವಮಾನಕಾರಿ ನಿರ್ಗಮನ

ಕೇಸರಿ ಬಳಗದ ಮುಗಿಯದ ಗೊಂದಲ - ಆಭಾಸ

ಭಾವನಾತ್ಮಕ ಪ್ರಶ್ನೆಗಳ ಆಧಾರದಲ್ಲಿ ಜನರನ್ನು ಬಡಿದೆಬ್ಬಿಸುವುದರಲ್ಲಿನ ಕೇಸರಿ ಪಡೆಯ ವೈಫಲ್ಯವೇ ಈ ಬಿಕ್ಕಟ್ಟಿನ ಮೂಲವಾಗಿದೆ.

ಉಳಿದ ವಿಚಾರಗಳೇನೇ ಇರಲಿ ಕಳೆದ ಒಂದು ವರ್ಷದ ಅವಧಿಯ ಯು.ಪಿ.ಎ. ಸರ್ಕಾರದ ಆಡಳಿತ ರಾಷ್ಟ್ರರಾಜಕಾರಣ ಚರ್ಚೆಯ ಗುಣದಲ್ಲಿ ಗಣನೀಯವಾಗಿ ಬದಲಾವಣೆ ಬಂದಿದೆ. ಪಾಕಿಸ್ತಾನ ತಂಡ ಭಾರತದಲ್ಲಿ ಕ್ರಿಕೆಟ್ ಆಡಿಲು ಬಿಡಬೇಕೇ? ಬೇಡವೇ?, ಗಂಗಾನದಿ ತೀರದಲ್ಲಿ ದೀಪ್ತಿ ಮೆಹ್ತಾ ಸಿನಿಮಾದ ಚಿತ್ರೀಕರಣ ಮಾಡಬೇಕೇ? ಬೇಡವೇ? ಎಂ.ಎಫ್. ಹುಸೇನರ ಕಲಾ ಚಿತ್ರಗಳ ಪ್ರದರ್ಶನ ನಡೆಯಬೇಕೆ? ಬೇಡವೇ ಅಥವಾ ಪಾಕಿಸ್ತಾನದ ಘಜಲ್ ಗಾಯಕ ಗುಲಾಂ ಆಲಿ ಯವರನ್ನು ಭಾರತದಲ್ಲಿ ಹಾಡಲು ಬಿಡಬೇಕೆ? ಬೇಡವೇ? ಎಂಬ ಬಗ್ಗೆಯೇ ಈಗ ಜನತೆ ತಲೆ ಕೆಡಿಸಿಕೊಳ್ಳಬೇಕಾದ ಪರಿಸ್ಥಿತಿ ಇಲ್ಲ. ಸಂಘ ಪರಿವಾರವು ಮುಂಚೂಣಿಗೆ ತಂದಿದ್ದ ಜನರ ಐಕ್ಯತೆಯನ್ನು ವಿಭಜಿಸುವ ವಿಭಜನಕಾರಿ ಪ್ರಶ್ನೆಗಳು ಈಗ ಜನರ ಗಮನ ಸೆಳೆಯುವಲ್ಲಿ ಬಹುತೇಕ ವಿಫಲಗೊಳ್ಳುತ್ತಿವೆ.

ಬದಲಿಗೆ ಜನರು ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅವಕಾಶನೀಡುವುದರ ಪರಿಣಾಮವೇನು? ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆಯ ವಿರುದ್ಧ ಪ್ರತಿಭಟನೆ ತೋರಿಸುವುದು ಹೇಗೆ? ಭಾರತದ ಸಾರ್ವಜನಿಕ ಉದ್ದಿಮೆಗಳನ್ನು ರಕ್ಷಿಸಿಕೊಳ್ಳುವುದು ಹೇಗೆ? ಇಂತಹ ವಿಚಾರಗಳ


ಆರ್‌ಎಸ್‌ಎಸ್ ಮುಖ್ಯಸ್ಥ ಸುದರ್ಶನ್

ಕುರಿತ ಚರ್ಚೆ ವ್ಯಾಪಕಗೊಂಡಿದೆ. ಭಾರತದ ದುಡಿಯುವ ವರ್ಗ ದೇಶದ ನೈಸರ್ಗಿಕ ಸಂಪನ್ಮೂಲಗಳನ್ನು ಲೂಟಿ ಹೊಡೆಯುವ ವಿದೇಶಿ ಬಂಡವಾಳದ ವಿರುದ್ಧ ಸಂಘರ್ಷದತ್ತ ಮುನ್ನಡೆದಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕೋಟ್ಯಾಂತರ ಜನ ನೈಸರ್ಗಿಕ ವಿಕೋಪಗಳಿಂದ ಹಾಗೂ ಮನುಷ್ಯ ನಿರ್ಮಿತ ಸಂಕಷ್ಟದ ಪರಿಸ್ಥಿತಿಯಲ್ಲಿ ಬದುಕುಳಿಯುವುದಕ್ಕಾಗಿ ಹೋರಾಡುತ್ತಿದ್ದಾರೆ. ಖಾಸಗಿ ಲೇವಾದೇವಿಗಾರರ ಕಪಿಮುಷ್ಠಿಯಲ್ಲಿ ಸಿಲುಕಿರುವ ರೈತಾಪಿ ಜನರು ಸಾಲು ಸಾಲು ಆತ್ಮಹತ್ಯೆಯ ಹಾದಿ ಹಿಡಿದಿದ್ದಾರೆ.

ಜನತೆಯ ಬದುಕಿನ ಮೇಲೆ ದುರ್ಭರ ಬವಣೆಯನ್ನು ಹೇರುವ-ಜನರ ಬದುಕಿಗೆ ಸಂಬಂಧಿಸಿದ ಈ ಯಾವುದೇ ಪ್ರಶ್ನೆಗಳಲ್ಲಿಯೂ ಬಿಜೆಪಿ - ಆರ್.ಎಸ್.ಎಸ್‌ಗಳು ಶೋಷಕ ವರ್ಗದ ಪರವಾಗಿದ್ದಾರೆಂಬುದು ಅತ್ಯಂತ ಸ್ಪಷ್ಟವಾಗಿ ಗೋಚರವಾಗುತ್ತಿದೆ. ಈ ಸಂಬಂಧದ ಹಲವು ಪ್ರಶ್ನೆಗಳಲ್ಲಿ ಅವರ ಮೌನವೇ ಇದಕ್ಕೆ ಸಾಕ್ಷಿಯಾಗಿದೆ.

ಮಿಲಿಯಾಂತರ ಜನರ ಜೀವನದ ಮೇಲೆ ಸಂಕಷ್ಟಗಳ ಸರಮಾಲೆಯನ್ನೇ ಹೇರುತ್ತಿರುವ ಆರ್ಥಿಕ ನೀತಿಗಳ ಪ್ರಶ್ನೆಯಲ್ಲಿ ಅತ್ಯಂತ ನಾಚಿಕೆಗೆಟ್ಟ ವಿಧಾನದಲ್ಲಿ ಅವರು 'ಸುಧಾರಣೆ'ಯ ಪರವಹಿಸಿದ್ದಾರೆ. ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯ ಬಗ್ಗೆ ಹಸಿವಿನ ಸಾವುಗಳ ಬಗೆಗೆ ಜನರ ಹತಾಶ ಆತ್ಮಹತ್ಯೆಗಳ ಬಗೆಗೆ ಅವರಿಗೆ ಯಾವುದೇ ಕಾಳಜಿಯಿಲ್ಲವೆಂಬುದು ಅವರ ವರ್ತನೆಗಳಿಂದ ವ್ಯಕ್ತವಾಗುತ್ತಿದೆ.

ಭಾರತದ ಜಾತ್ಯಾತೀತ, ಪ್ರಜಾಸತ್ತಾತ್ಮಕ, ಒಕ್ಕೂಟ ಗುಣಗಳನ್ನು ನಾಶವಾಡಿ ಕೋಮು ವಿಭಜನೆಯನ್ನುಂಟು ಮಾಡುವಲ್ಲಿ ಅವರು ವಿಫಲರಾಗಿದ್ದಾರೆ. ಕೇಸರಿ ಬಳಗದ ನಿಜವಾದ ಬಿಕ್ಕಟ್ಟಿರುವುದೇ ಇಲ್ಲಿ. ಅಯೋಧ್ಯೆಯ ಮೇಲಿನ ಭಯೋತ್ಪಾದಕ ದಾಳಿಯ ನಂತರ ಸಂಘ ಪರಿವಾರವು ಸಾಕಷ್ಟು ತಿಣಕಾಡುತ್ತಿದ್ದರೂ ಜನತೆ ಇದಕ್ಕಿಂತ ಗಂಭೀರವಾದ ಪ್ರಶ್ನೆಗಳ ಬಗೆಗೇ - ಭಾರತದ ಭವಿಷ್ಯದ ಬಗೆಗೇ ಕಾಳಜಿ ವಹಿಸಿದ್ದಾರೆ. ಈ ಕೇಸರಿ ಬಳಗಕ್ಕೆ 'ಭೂತ'ವನ್ನು ಮುಂದೆ ಮಾಡುವುದನ್ನು ಬಿಟ್ಟರೆ 'ಭವಿಷ್ಯ'ದ ಬಗೆಗೆ ಯಾವುದೇ ಅಜೆಂಡಾ ಇಲ್ಲವಾಗಿದೆ. ಆರ್.ಎಸ್.ಎಸ್. ಮತ್ತು ಬಿಜೆಪಿಗಳು ಇಂದು ಮುಗಿಯದ ಗೊಂದಲ, ಅಪಹಾಸ್ಯಕಾರಿ ಆಭಾಸಗಳಲ್ಲಿ ಮುಳುಗಿದ್ದಾರೆ. ಈ ಸಮಸ್ಯೆಯನ್ನು ಅವರು ಒಬ್ಬ ವ್ಯಕ್ತಿಯನ್ನು ಬದಲಾಯಿಸುವ ಮೂಲಕ ಬಗೆಹರಿಸಿಕೊಳ್ಳಲು ಸಾಧ್ಯವಿಲ್ಲ.

ದಿನೇದಿನೇ ತೆರೆದುಕೊಳ್ಳುತ್ತಾ ಹೋಗುತ್ತಿರುವ ಈ ಪ್ರಹಸನದಲ್ಲಿ ಒಬ್ಬ ವ್ಯಕ್ತಿ 'ದೊರೆ'ಗಿಂತಲೂ 'ನಿಷ್ಠಾವಂತ'ನಾಗಿ ರೂಪುಗೊಂಡಿದ್ದಾರೆ. ತಮ್ಮ 'ಸಮಾಜವಾದಿ ಇತಿಹಾಸದ ಶವಪೆಟ್ಟಿಗೆ'ಗೆ ಕೊನೆಯ ಮೊಳೆ ಹೊಡೆದಿರುವ ಜಾರ್ಜ್ ಫರ್ನಾಂಡೀಸ್ ಅವರಲ್ಲಿ ಬಿಜೆಪಿಯ ಅತ್ಯಂತ 'ನಿಷ್ಠಾವಂತ' 'ವಕ್ತಾರ'ನನ್ನು ಎಲ್.ಕೆ.ಅಡ್ವಾಣಿ ಕಂಡುಕೊಂಡಿದ್ದಾರೆ.

ಈ ಕೋಮುವಾದಿ ಶಕ್ತಿಗಳನ್ನು ಮತ್ತು ಅವರ ಅಜೆಂಡಾಗಳನ್ನು ಮೂಲೆಗುಂಪು ಮಾಡಲು ಸಾಧ್ಯವಾದಲ್ಲಿ ಅದು ಭಾರತ ಆಧುನಿಕ ಗಣತಂತ್ರವನ್ನು ಬಲಿಷ್ಠಗೊಳಿಸುವತ್ತ ಮತ್ತು ಜನತೆಯ ಬದುಕನ್ನು ಉತ್ತಮ ಪಡಿಸುವ ನಿಟ್ಟಿನಲ್ಲಿ ಭಾರತದ ಭವಿಷ್ಯವನ್ನು ಉಜ್ವಲಗೊಳಿಸುವುದರತ್ತ ಉತ್ತಮ ಹೆಜ್ಜೆಯನ್ನಿಟ್ಟಂತಾಗುತ್ತದೆ.

ಕಾಮ್ರೇಡ್ ಬಿಪ್ಲವ ದಾಸ್‌ಗುಪ್ತ ನಿಧನ

ಹೆಸರಾಂತ ಆರ್ಥಿಕ ತಜ್ಞ, ಸಿಪಿಐ(ಎಂ)ನ ರಾಜ್ಯಸಭಾ ಸದಸ್ಯ ಕಾಮ್ರೇಡ್ ಬಿಪ್ಲವ್ ದಾಸ್ ಗುಪ್ತಾ ಜುಲೈ 17 ರಂದು ಕಲ್ಕತ್ತದ ತಮ್ಮ ನಿವಾಸದಲ್ಲಿ ನಿಧನ ಹೊಂದಿದರು. ಅವರಿಗೆ 67 ವರ್ಷ ವಯಸ್ಸಾಗಿತ್ತು. ಕೆಲವು ಕಾಲದಿಂದ 'ಪಾರ್ಕಿನ್‌ಸನ್' ಕಾಯಿಲೆಯಿಂದ ಬಳಲುತ್ತಿದ್ದ ಅವರು 18ನೇ ಅಧಿವೇಶನದ ವರೆಗೂ ಪಕ್ಷದ ಕೇಂದ್ರ ಸಮಿತಿ ಸದಸ್ಯರಾಗಿದ್ದರು.

ಡಿಸೆಂಬರ್ 30, 1938 ರಂದು ಜನಿಸಿದ ದಾಸ್‌ಗುಪ್ತ ಕಲ್ಕತ್ತದ ವಿದ್ಯಾರ್ಥಿ ಸಂಘಟನೆಯಲ್ಲಿ ಸಕ್ರಿಯ ಮುಖಂಡರಾಗಿದ್ದರು. ನಂತರ ಅರ್ಥಶಾಸ್ತ್ರದಲ್ಲಿ ಉನ್ನತ ವ್ಯಾಸಂಗ ನಡೆಸಿದ ಅವರು ಕಲ್ಕತ್ತ, ದೆಹಲಿ(ಜೆಎನ್‌ಯು), ಇಂಗ್ಲೆಂಡ್‌ನ ಲಂಡನ್, ಸಸೆಕ್ಸ್ ವಿಶ್ವ ವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ವಿದ್ಯಾರ್ಥಿಗಳಿಗೆ ಜನಾನುರಾಗಿಯಾಗಿದ್ದರು. ಹೆಸರಾಂತ ವಿದ್ವಾಂಸರಾಗಿದ್ದರೂ, ರೈತ ಸಂಘಟನೆಯಲ್ಲಿ ದುಡಿದ ಅವರು ಅಖಿಲ ಭಾರತ ಕಿಸಾನ್ ಸಭಾದ ಸಹ ಕಾರ್ಯದರ್ಶಿಯಾಗಿದ್ದರು.

'ನಕ್ಸಲೈಟ್ ಚಳುವಳಿ(1974)', 'ಗ್ರಾಮೀಣ ಸಮಾಜ ಮತ್ತು ಶ್ರಮದ ಉಪಯೋಗ(1977)', 'ನಗರೀಕರಣ, ವಲಸೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಬದಲಾವಣೆ 1985', ಮತ್ತಿತರ ಉಪಯುಕ್ತ ಮಾರ್ಕ್ಸ್‌ವಾದಿ ಕಣ್ಣೋಟದ ಸಾಹಿತ್ಯವನ್ನು ನೀಡಿದ ದಾಸ್ ಗುಪ್ತಾ ಬಂಗಾಳಿ ಸಾಂಸತಿಕ ಚಳುವಳಿಗೆ ಮೀಸಲಾಗಿದ್ದ 'ನಂದನ್' ಪತ್ರಿಕೆಯ ಸಂಪಾದಕರಾಗಿ ಹಲವಾರು ಲೇಖನಗಳನ್ನು ಬರೆದಿರುತ್ತಾರೆ. 'ಜಾಗತೀಕರಣ'ದ ಕುರಿತಾಗಿ ಇತ್ತೀಚೆಗೆ ಅವರು ಬರೆದಿರುವ ಪುಸ್ತಕವನ್ನು ರಾಜ್ಯ ಸಭೆಯಲ್ಲಿ ಅವರ ಸ್ನೇಹಿತರೂ ಆಗಿದ್ದ ಪ್ರಧಾನಮಂತ್ರಿ ಮನಮೋಹನ ಸಿಂಗ್ ರವರು ಬಿಡುಗಡೆಗೊಳಿಸಬೇಕಾಗಿತ್ತು.



ಸಿಪಿಐ(ಎಂ) ಪಾಲಿಟ್‌ಬ್ಯೂರೋ ತನ್ನ ಸಂತಾಪ ಸಂದೇಶದಲ್ಲಿ 'ಸಮರ್ಥ ಬುದ್ಧಿಜೀವಿ ಹಾಗೂ ಜನ ಸಾಮಾನ್ಯರಿಗಾಗಿ ದುಡಿದ ಹೋರಾಟಗಾರನನ್ನು ಕಳೆದುಕೊಳ್ಳಬೇಕಾಯಿತು' ಎಂದು ಬಣ್ಣಿಸಿದೆ. ಪಾಲಿಟ್‌ಬ್ಯೂರೋ ಸದಸ್ಯರಾದ ಹರ್ಕಿಶನ್ ಸಿಂಗ್ ಸುರ್ಜಿತ್, ಜ್ಯೋತಿಬಸು, ಅನಿಲ್ ಬಿಸ್ವಾಸ್, ಬಿಮನ್ ಬಸು, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ, ಸಿಪಿಐ ಪ್ರಧಾನ ಕಾರ್ಯದರ್ಶಿ ಎ.ಬಿ.ಬರ್ಧನ್ ಮೊದಲಾದ ಮುಖಂಡರು ಶ್ರದ್ಧಾಂಜಲಿ ಸಲ್ಲಿಸಿ ಕಮ್ಯುನಿಸ್ಟ್ ಚಳುವಳಿಗೆ ಬಿಪ್ಲವ್ ದಾಸ್ ಗುಪ್ತರವರು ನೀಡಿದ ಕೊಡುಗೆಯನ್ನು ಸ್ಮರಿಸಿದ್ದಾರೆ.


ಪ್ರಧಾನಿ ಮನಮೋಹನ್ ಸಿಂಗ್ ಮತ್ತು ಲೋಕಸಭಾ ಅಧ್ಯಕ್ಷ ಸೋಮನಾಥ ಚಟರ್ಜಿಯವರು 'ಉತ್ತಮ ಸಂಸದೀಯ ಪಟು ಮತ್ತು ಆತ್ಮೀಯ ಸ್ನೇಹಿತನನ್ನು ಕಳೆದುಕೊಂಡಿದ್ದೇವೆ' ಎಂದು ದುಃಖಿಸಿದ್ದಾರೆ.

ಅಖಿಲ ಭಾರತ ಕಿಸಾನ್ ಸಭಾ, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ, ಸಿಐಟಿಯು, ಎಸ್‌ಎಫ್‌ಐ, ಡಿವೈಎಫ್‌ಐ ಮತ್ತಿತರ ಸಂಘಟನೆಗಳು,ವ್ಯಕ್ತಿಗಳು ದಾಸ್ ಗುಪ್ತ ರವರ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

ದಾಸ್ ಗುಪ್ತ ಅವರ ಪತ್ನಿ ಆರತಿ ದಾಸ್ ಗುಪ್ತಾ ಸಕ್ರಿಯವಾಗಿ ಕಾರ್ಮಿಕ ಚಳುವಳಿಯಲ್ಲಿ ತೊಡಗಿದ್ದು ಪಶ್ಚಿಮ ಬಂಗಾಳದ ಸಿಐಟಿಯು ರಾಜ್ಯ ಸಮಿತಿಯ ಉಪಾಧ್ಯಕ್ಷರಾಗಿದ್ದಾರೆ.

ಅಗಲಿದ ಚೇತನಕ್ಕೆ ಚಿಕ್ಕರಂಗದ ಭಾವಪೂರ್ಣ ಶ್ರದ್ಧಾಂಜಲಿ.

ಅಮೆರಿಕಾ ವಿಶ್ವದ ಅತ್ಯಂತ ಬಲಶಾಲಿ ದೇಶ. ಇತ್ತ ಭಾರತವೂ ಒಂದು ಪ್ರಧಾನ ಅಭಿವೃದ್ಧಿಶೀಲ ದೇಶ. ಈ ಎರಡು ದೇಶಗಳ ನಡುವೆ ಸಮತೋಲದ, ಸಮದರ್ಶಿಯಾದ ಸಂಬಂಧ ಅಗತ್ಯ. ಯುಪಿಎ ಸರಕಾರದ ಪ್ರಧಾನ ಮಂತ್ರಿಗಳ ಪ್ರಥಮ ಅಮೆರಿಕಾ ಭೇಟಿಯ ನಂತರ ಹೊರಡಿಸಿರುವ ಜಂಟಿ ಹೇಳಿಕೆ ಈ ಅಂಶಕ್ಕೆ ಹೆಚ್ಚೇನೂ ಬೆಲೆ ನೀಡಿದಂತಿಲ್ಲ. ಅಮೆರಿಕಾಕ್ಕೆ ಹೋಲಿಸಿದರೆ ಈಗಲೂ ಭಾರತವೇ ಹೆಚ್ಚಿನ ರಿಯಾಯ್ತಿಗಳನ್ನು ನೀಡುತ್ತಿದೆ.



ಭಾರತ - ಅಮೆರಿಕಾ ಜಂಟಿ ಹೇಳಿಕೆ

ಸಮತೋಲದ ಸಮದರ್ಶಿಯಾದ ಸಂಬಂಧಗಳನ್ನು ಬಿಂಬಿಸಿಲ್ಲ

ಪ್ರಧಾನಮಂತ್ರಿ ಡಾ। ಮನಮೋಹನ್‌ಸಿಂಗ್ ಅಮೆರಿಕಾ ಸಂಯುಕ್ತ ಸ್ಥಾನಕ್ಕೆ ತಮ್ಮ ಪ್ರಥಮ ಅಧಿಕೃತ ಭೇಟಿ ನೀಡಿ ಬಂದಿದ್ದಾರೆ. ಅಮೆರಿಕಾ ವಿಶ್ವದ ಅತ್ಯಂತ ಬಲಶಾಲಿ ದೇಶ, ಭಾರತದ ಅತಿ ದೊಡ್ಡ ವ್ಯಾಪಾರ ಪಾಲುದಾರ ಕೂಡಾ. ಬುಶ್ ಆಡಳಿತದ ಧೋರಣೆಗಳು ಭಾರತದ ಆರ್ಥಿಕ ಭದ್ರತೆ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳ ಮೇಲೆ ನೇರ ಪ್ರಭಾವ ಬೀರುತ್ತದೆ. ಇತ್ತ ಭಾರತವೂ ಒಂದು ಪ್ರಮುಖ ಅಭಿವೃದ್ಧಿಶೀಲ ದೇಶ. ಆದ್ದರಿಂದಲೇ ಈ ಭೇಟಿ ಇಡೀ ಏಶ್ಯಾದ, ಮುಖ್ಯವಾಗಿ ಅಭಿವೃದ್ಧಿಶೀಲ ದೇಶಗಳ ಗಮನ ಸೆಳೆದ ಭೇಟಿ.

ಈ ಭೇಟಿಯ ಫಲಿತಾಂಶವಾಗಿ ಒಂದು ಜಂಟಿ ಹೇಳಿಕೆ ಬಂದಿದೆ. ಇತ್ತೀಚಿನ ವರ್ಷಗಳಲ್ಲಿ ವಾಜಪೇಯಿ ಸರಕಾರ ಅಮೆರಿಕಾ-ಪರ ಧೋರಣೆಗಳನ್ನು ಅನುಸರಿಸುತ್ತಿತ್ತು. ಇದರಿಂದಾಗಿ ಅಮೆರಿಕಾ ಭಾರತವನ್ನು ತನ್ನ ಒಂದು ಸಾಮರಿಕ ಮಿತ್ರನಾಗಿ ಅಂಗೀಕರಿಸುವ ಪ್ರವೃತ್ತಿ ಕಾಣಬರುತ್ತಿತ್ತು. ಈ ಜಂಟಿ ಹೇಳಿಕೆಯಲ್ಲಿಯೂ ಅದು ಪ್ರತಿಫಲನ ಗೊಂಡಿದೆ ಎಂಬ ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ. ಈ ಭೇಟಿಯ ಮೊದಲಿನ ರಕ್ಷಣಾ ಚೌಕಟ್ಟು ಒಪ್ಪಂದವೂ ಈ ಪ್ರವೃತ್ತಿಯನ್ನು ಸೂಚಿಸಿದೆ.

ಜಂಟಿ ಹೇಳಿಕೆ ಭಾರತದ ಪ್ರಧಾನ ಮಂತ್ರಿಗಳು ಮತ್ತು ಅಮೆರಿಕಾದ ಅಧ್ಯಕ್ಷರು ವಿಶ್ವಾದ್ಯಂತ ಪ್ರಜಾಪ್ರಭುತ್ವಕ್ಕೆ ಪ್ರೋತ್ಸಾಹ ನೀಡಲು, ಭಯೋತ್ಪಾದನೆಯ ವಿರುದ್ಧ ಹೋರಾಡಲು ಕಂಕಣಬದ್ಧವಾಗಿದ್ದಾರೆ ಎಂದು ಒತ್ತಿ ಹೇಳುತ್ತದೆ. ಅಮೆರಿಕನ್ ಸಂಸತ್ತಿನಲ್ಲಿ ಪ್ರಧಾನಮಂತ್ರಿಗಳ ಭಾಷಣ ಪ್ರಜಾಪ್ರಭುತ್ವವನ್ನು ಒಂದು ಪ್ರಧಾನ ವಿಷಯವಾಗಿ ಮಾಡಿತ್ತು.

ಅಮೆರಿಕಾ ಮಾದರಿಯಾಗದು


ಮೂರನೇ ಜಗತ್ತಿನ ದೇಶಗಳಲ್ಲಿ ಪ್ರಜಾಪ್ರಭುತ್ವಗಳನ್ನು ಬಲಪಡಿಸಲು "ಅಮೆರಿಕಾ ಭಾರತ ಜಾಗತಿಕ ಪ್ರಜಾಪ್ರಭುತ್ವ ಮುತುವರ್ಜಿ" ವಹಿಸುವುದಾಗಿ ಪ್ರಕಟಿಸಲಾಗಿದೆ. ಇದನ್ನು ಸ್ವಲ್ಪ ಸಂದೇಹದಿಂದಲೇ ಕಾಣಬೇಕಾಗುತ್ತದೆ. ಈ ಹಿಂದೆ ಕ್ಲಿಂಟನ್ ಆಡಳಿತವೂ ತೇಲಿ ಬಿಟ್ಟಿದ್ದ "ಪ್ರಜಾಪ್ರಭುತ್ವಗಳ ಸಮುದಾಯ"ವನ್ನು ಎನ್‌ಡಿಎ ಸರಕಾರ ಸೇರಿಕೊಂಡಿತ್ತು. ವಿಶ್ವಾದ್ಯಂತ ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುವಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನ ಮಾದರಿಯಂತೂ ಆಗಿಲ್ಲ. ಈ ಸೂಪರ್ ಪವರ್ ಈಗ ಏಕಪಕ್ಷೀಯ ಕಾರ್ಯಾಚರಣೆಗಳಿಗೆ, ಪ್ರಜಾಪ್ರಭುತ್ವ ವಿರೋಧಿ ಚಟುವಟಿಕೆಗಳಿಗೆ ಕುಪ್ರಸಿದ್ಧವಾಗಿದೆ. ಇಂತಹ ಸಮಯದಲ್ಲಿ ಅಮೆರಿಕಾದೊಂದಿಗೆ ಕೈಜೋಡಿಸಲು ಭಾರತ ತವಕಿಸುತ್ತಿರುವುದು ಸರಿಕಾಣುವುದಿಲ್ಲ. ಈ ರೀತಿ ದ್ವಿಪಕ್ಷೀಯ ಮಾತುಕತೆ ಬಗ್ಗೆ ಹೇಳುವ ಬದಲು ಈ ಜಂಟಿ ಹೇಳಿಕೆ ವಿಶ್ವ ಸಂಸ್ಥೆಯ ಮೂಲಕ ಮಾತ್ರವೇ ಪ್ರಜಾಪ್ರಭುತ್ವ ಆಚರಣೆಗಳನ್ನು ಬಲಪಡಿಸಲು ಸಾಧ್ಯ ಎಂದು ಹೇಳಿದ್ದರಷ್ಟೇ ಸಾಕಿತ್ತು ಎಂದು ಸಿಪಿಐ(ಎಂ) ಅಭಿಪ್ರಾಯಪಟ್ಟಿದೆ.

ಭಯೋತ್ಪಾದನೆಯ ಬಗ್ಗೆ ಹೇಳು ವುದಾದರೆ, ಇಂದು ಜಾಗತಿಕ ಭಯೋತ್ಪಾದನೆಯ ಒಂದು ಮುಖ್ಯ ಅಂಶವೆಂದರೆ ಪ್ರಭುತ್ವ ಭಯೋತ್ಪಾದನೆಯ ಬಳಕೆ ಹಾಗೂ ರಾಷ್ಟ್ರೀಯ ಸಾರ್ವಭೌಮತೆಯ ನಗ್ನ ಉಲ್ಲಂಘನೆ, ತನ್ಮೂಲಕ ಇದು ಮೂಲಭೂತವಾದ ವನ್ನು, ಭಯೋತ್ಪಾದನೆಯನ್ನು ಹುಟ್ಟುಹಾಕುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ನೆನಪಿಸಿದೆ. ಇಂದಿನ ಇರಾಕ್ ಇದಕ್ಕೊಂದು ಕಣ್ಣಿಗೆ ರಾಚುವ ಉದಾಹರಣೆ. ಸಾಮ್ರಾಜ್ಯಶಾಹಿ ಆಕ್ರಮಣ ಮತ್ತು ಪ್ರಭುತ್ವ ಭಯೋತ್ಪಾದನೆಯಿಂದಾಗಿ ಇರಾಕಿನಲ್ಲಿ ಹಿಂದೆಂದೂ ಕಾಣದ ಭಯೋತ್ಪಾದಕ ಹಿಂಸಾಚಾರ ಭುಗಿಲೆದ್ದಿದೆ. ಅದು ಮ್ಯಾಡ್ರಿಡ್, ಲಂಡನ್‌ಗಳಂತಹ ಯುರೋಪಿನ ರಾಜಧಾನಿಗಳನ್ನು ತಟ್ಟಿದೆ.

ಹೀಗಿರುವಾಗ ಪ್ರಜಾಪ್ರಭುತ್ವವನ್ನು ಹರಡಿಸುವುದರಲ್ಲಾಗಲೀ, ಭಯೋತ್ಪಾದನೆಯನ್ನು ಎದುರಿಸುವುದರಲ್ಲಾಗಲೀ ಅಮೆರಿಕದ ನೇತೃತ್ವವನ್ನು ಪ್ರಶಂಸಿಸುವುದು ಭಾರತದ ಹಿತವನ್ನೇನೂ ಸಾಧಿಸುವುದಿಲ್ಲ.

ಪರಮಾಣು ನಿಶ್ಶಸ್ತ್ರೀಕಣ ಏನಾಯಿತು?

ಜಂಟಿ ಹೇಳಿಕೆಯಲ್ಲಿ ಪರಮಾಣು ಸಹಕಾರದ ಬಗ್ಗೆ ಒಪ್ಪಂದವಾಗಿದೆ ಎಂದು ಹೇಳಲಾಗಿದೆ. ಇದರಿಂದ ಸಾಕಷ್ಟು ಚರ್ಚೆ ಉದ್ಭವಗೊಂಡಿದೆ. ಮೊದಲನೆಯದಾಗಿ, ಇಂತಹ ಒಂದು ಪ್ರಮುಖ ಪ್ರಶ್ನೆಯನ್ನು ಯುಪಿಎ ಸರಕಾರ ಅಮೆರಿಕಾದೊಂದಿಗೆ ನಿರ್ಧರಿಸಿದ ವಿಧಾನದ ಬಗ್ಗೆ ಸಿಪಿಐ(ಎಂ) ಆಕ್ಷೇಪ



ವ್ಯಕ್ತಪಡಿಸಿದೆ. ಇದನ್ನು ನಿರ್ಧರಿಸುವ ಬದಲು ಸರಕಾರ ತನ್ನ ಅಭಿಪ್ರಾಯಗಳನ್ನು ಪ್ರಸ್ತಾವಗಳನ್ನು ಸಂಬಂಧಪಟ್ಟ ಎಲ್ಲರ ಮುಂದೆ ಇಡುವುದು ಅಗತ್ಯವಾಗಿತ್ತು. ಎನ್‌ಡಿಎ ಆಡಳಿತ ಕಾಲದಲ್ಲಿ ಹಲವು ಭದ್ರತಾ ಮತ್ತು ವಿದೇಶಾಂಗ ನೀತಿಯ ಪ್ರಶ್ನೆಗಳನ್ನು ಸ್ಟ್ರೋಬ್ ತಾಲ್ಬೋಟ್ ಮತ್ತು ಜಸ್ವಂತ್ ಸಿಂಗರ ಗುಪ್ತ ಮಾತುಕತೆಗಳ ಮೂಲಕವೇ ನಿರ್ಧರಿಸಲಾಗುತ್ತಿತ್ತು. ಯುಪಿಎ ಸರಕಾರ ಈ ಪ್ರಜಾಪ್ರಭುತ್ವ - ವಿರೋಧಿ ಆಚರಣೆಯನ್ನು ಮುಂದುವರೆಸಬಾರದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಬಿಜೆಪಿ ನೇತೃತ್ವದ ಸರಕಾರ ಪರಮಾಣು ಶಸ್ತ್ರೀಕರಣಕ್ಕೆ ಇಳಿದಿತ್ತು. ಇದನ್ನು ಸಿಪಿಐ(ಎಂ) ವಿರೋಧಿಸಿದೆ. ಪರಮಾಣು ಶಸ್ತ್ರೀಕರಣ ಭಾರತ 'ಮಹಾಶಕ್ತಿ'ಯ ಸ್ಥಾನಮಾನ ಪಡೆಯಲು ಒಂದು ದಾರಿಯೆಂಬ ಪ್ರತಿಪಾದನೆಯನ್ನು ಅದು ಒಪ್ಪುವುದಿಲ್ಲ. ಅದರ ಬದಲಾಗಿ ಭಾರತ ಒಂದು ಸ್ವತಂತ್ರ ಪರಮಾಣು ನೀತಿಯನ್ನು ಹೊಂದಿರಬೇಕು ಎಂದು ಸಿಪಿಐ(ಎಂ) ಮತ್ತು ಎಡಪಕ್ಷಗಳು ಸತತವಾಗಿ ಹೇಳುತ್ತಲೇ ಬಂದಿವೆ. ಪರಮಾಣು ಶಸ್ತ್ರ ಇರುವವರು ಮತ್ತು ಇಲ್ಲದಿರುವವರ ನಡುವೆ ಪಕ್ಷಪಾತವನ್ನು ಭಾರತ ಸದಾ ವಿರೋಧಿಸಿದೆ. ಪರಮಾಣು ನಿಶ್ಶಸ್ತ್ರೀಕರಣ, ವಿಶ್ವವನ್ನು ಪರಮಾಣು ಶಸ್ತ್ರಾಸ್ತ್ರಗಳಿಂದ ಮುಕ್ತಗೊಳಿಸಲು ಭಾರತ ಬದ್ಧವಾಗಿದೆ. ಈ ಬಗ್ಗೆ ರಾಜೀವ್ ಗಾಂಧಿಯ ನಿಶ್ಶಸ್ತ್ರೀಕರಣ ಯೋಜನೆಯೇ ಇದುವರೆಗಿನ ದೊಡ್ಡ ಯೋಚನೆ. "ಪರಮಾಣು ಕ್ಲಬ್" ನಲ್ಲಿ ಅಧಿಕೃತ ಸ್ಥಾನಮಾನ ಪಡೆಯದಿದ್ದರೂ ಭಾರತ ಒಂದು ಪರಮಾಣು ಶಸ್ತ್ರಾಸ್ತ್ರ ದೇಶ ಎಂದು ಅಮೆರಿಕಾ ಮಾನ್ಯ ಮಾಡಿದರೆ ಸಾಕು, ಪ್ರತಿಯಾಗಿ ಭಾರತ ಅಮೆರಿಕಾದ ಕಿರಿಯ ಪಾಲುದಾರನಾಗಲು ಸಿದ್ಧ ಎಂಬ ವಿಚಾರ ಯಾತ್ರೆಯನ್ನು ಬಿಜೆಪಿ ನೇತೃತ್ವದ ಸರಕಾರ ಆರಂಭಿಸಿತ್ತು. ಈ ಹೇಳಿಕೆಯಲ್ಲಿನ ಒಪ್ಪಂದ ಭಾರತದ ನಿಶ್ಶಸ್ತ್ರೀಕರಣ ನೀತಿಯನ್ನು ಕೊನೆಗೊಳಿಸಿದಂತಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ.

ಅಮೆರಿಕಾ ಈ ವಿಷಯದಲ್ಲಿ ಸ್ಪುಟವಾದ ಭರವಸೆಗಳನ್ನು ನೀಡಿಲ್ಲವಾದ್ದರಿಂದ ಭಾರತ ಶಾಂತಿಯುತ ಉದ್ದೇಶಗಳಿಗಾಗಿ ಒಂದು ಸ್ವತಂತ್ರ ಪರಮಾಣು ತಂತ್ರಜ್ಞಾನ ನೀತಿಯನ್ನು ಅನುಸರಿಸಲು ಅಡ್ಡಿಯುಂಟಾಗಬಹುದೆಂಬ ಸಂದೇಶಗಳು ಸಹಜವೇ. ಪರಮಾಣು ಇಂಧನದ ಆಮದಿಗೆ ತಡೆ ಹಾಕುವಂತಹ ಸಂಶೋಧನಾ ಚಟುವಟಿಕೆಗಳಿಗೆ ತೊಂದರೆಯಾಗಲಿಕ್ಕಿಲ್ಲವೇ ಎಂಬ ಪ್ರಶ್ನೆಯೂ ಇದೆ.

ಅಮೆರಿಕಾ, ಪರಮಾಣು ಪೂರೈಕೆದಾರರ ಗುಂಪು ಹಾಗೂ ಅಂತರರಾಷ್ಟ್ರೀಯ ಅಣು ಶಕ್ತಿ ಏಜೆನ್ಸಿಯ ಕ್ರಮಗಳಿಗೆ ತಕ್ಕುದಾದ ಕ್ರಮಗಳನ್ನು ಭಾರತ ಬಹಳ ಎಚ್ಚರಿಕೆಯಿಂದ ಕೈಗೊಳ್ಳಬೇಕಾಗಿದೆ ಎಂದಿರುವ ಸಿಪಿಐ(ಎಂ) ರಾಷ್ಟ್ರೀಯ ಹಿತಾಸಕ್ತಿಗಳಿಗೆ ಅಡ್ಡಿಯಾಗ ಬಹುದಾದ ಏಕಪಕ್ಷೀಯ ಕ್ರಮಗಳನ್ನು ಸರಕಾರ ಕೈಗೊಳ್ಳುವುದಿಲ್ಲ ಎಂಬ ನಿರೀಕ್ಷೆ ವ್ಯಕ್ತಪಡಿಸಿದೆ.

ಭಾರತ ನೀಡಿದ ರಿಯಾಯ್ತಿಗಳೇ ಅಧಿಕ

ಎನರ್ಜಿ ಮತ್ತು ಪರಿಸರದ ಬಗ್ಗೆ ಹೇಳಲಾಗಿದೆ. ಆದರೆ ಈ ಕುರಿತ ಕ್ಯೋಟೋ ಒಪ್ಪಂದಕ್ಕೆ ಸಹಿ ಹಾಕಲು ನಿರಾಕರಿಸುವುದು ಅಮೆರಿಕಾವೇ. ಅದು ಹೆಚ್ಚು ಶುದ್ಧವಾದ, ಶಕ್ತವಾದ ತಂತ್ರಜ್ಞಾನ ಬಳಸದಂತೆ ಅಡ್ಡಿಯುಂಟು ಮಾಡುತ್ತಿದೆ. ಭಾರತದಲ್ಲಿ 'ಎನರ್ಜಿ ಮಾರ್ಕೆಟ್'ಗಳನ್ನು ರಚಿಸುವುದರಲ್ಲೇ ಅಮೆರಿಕಾಕ್ಕೆ

ಪುಟ 7 ಕ್ಕೆ

ಇತ್ತೀಚಿನ ವರ್ಷಗಳಲ್ಲಿ ವಾಜಪೇಯಿ ಸರ್ಕಾರ ಅಮೆರಿಕಾ-ಪರ ಧೋರಣೆಗಳನ್ನು ಅನುಸರಿಸುತ್ತಿತ್ತು. ಇದರಿಂದಾಗಿ ಭಾರತ ಅಮೇರಿಕಾದ ಸುತ್ತ ಒಂದು ಸಾಮರಿಕ ಮಿತ್ರನಾಗಿ ಗಿರಕಿಹೊಡೆಯುತ್ತಿ ದೆಯೇ ಎಂಬ ಭಾವನೆ ಉಂಟಾಗಿತ್ತು. ಡಾ. ಮನಮೋಹನ್‌ಸಿಂಗ್ ನೇತೃತ್ವದ ಯುಪಿಎ ಸರಕಾರ ಅಮೆರಿಕಾದ ಈ ಆಸಕ್ತಿಯನ್ನು ಉದಾರೀಕರಣದ ನೀತಿಗಳನ್ನು ಮುಂದೊತ್ತುವ ಉದ್ದೇಶಕ್ಕೆ ಬಳಸಲು ಆತುರವಾಗಿದೆ. ಹಾಗೆ ಮಾಡುವಾಗ ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಚೌಕಟ್ಟನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು ಎಂದು ಎಡಪಕ್ಷಗಳು ಬಯಸುತ್ತವೆ.

ಪ್ರಧಾನಿಗಳ ಅಮೆರಿಕಾ ಭೇಟಿ

ದೇಶ ನಿರೀಕ್ಷಿಸಿದ್ದೇನು?

ಯುಪಿಎ ಸರ್ಕಾರದ ಪ್ರಧಾನಮಂತ್ರಿಗಳ ಪ್ರಥಮ ಅಧಿಕೃತ ಅಮೆರಿಕಾ ಭೇಟಿಯ ಫಲಿತಾಂಶವನ್ನು ಭಾರತದಲ್ಲಿ ಮಾತ್ರವಲ್ಲ, ಅಂತರ ರಾಷ್ಟ್ರೀಯ ರಂಗದಲ್ಲಿ, ವಿಶೇಷವಾಗಿ ಮೂರನೇ ಜಗತ್ತಿನ ದೇಶಗಳು ಎಚ್ಚರದಿಂದ ಗಮನಿಸಲಾಗಿತ್ತು.

ಇತ್ತೀಚಿನ ವರ್ಷಗಳಲ್ಲಿ ವಾಜಪೇಯಿ ಸರ್ಕಾರ ಅಮೆರಿಕಾ-ಪರ ಧೋರಣೆಗಳಿಂದಾಗಿ ಭಾರತ ಅಮೇರಿಕಾದ ಸುತ್ತ ಒಂದು ಸಾಮರಿಕ ಮಿತ್ರನಾಗಿ ಗಿರಕಿಹೊಡೆಯುತ್ತಿ ದೆಯೇ ಎಂಬ ಭಾವನೆ ಉಂಟಾಗಿತ್ತು. ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದು, ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಅಂಗೀಕರಿಸಿದ ಮೇಲೆ, ಅದರಲ್ಲಿ ಒಂದು ಸ್ವತಂತ್ರ ವಿದೇಶಾಂಗ ನೀತಿಯ ಮೇಲೆ ಒತ್ತನ್ನು ಕಂಡ ಮೇಲೆ ಹಿಂದಿನ ವಿಕೃತಿಗಳನ್ನು ಸರಿಪಡಿಸಿಕೊಂಡು ಭಾರತ ಅಭಿವೃದ್ಧಿಶೀಲ ದೇಶಗಳ ಒಂದು ಪ್ರಮುಖ ದೇಶವಾಗಿ, ಅಲಿಪ್ತ ಆಂದೋಲದ ಒಬ್ಬ ಸ್ಥಾಪಕನಾಗಿತನ್ನ ಪಾತ್ರ ವಹಿಸುತ್ತದೆ ಎಂಬ ನಿರೀಕ್ಷೆ, ಆಶಾಭಾವನೆ ಉಂಟಾಗಿತ್ತು.

ಹಲವು ಪ್ರಶ್ನೆಗಳು

ಅತ್ಯಂತ ಬಲಶಾಲಿ ರಾಷ್ಟ್ರವಾದ, ಒಂದು ಜಾಗತಿಕ ಯಜಮಾನಿಕೆಯ ಕಣ್ನೋಟ ಹೊಂದಿರುವ, ಅಮೆರಿಕಾಕ್ಕೆ ಭಾರತದ ದೊಡ್ಡ ಮಾರುಕಟ್ಟೆಯ ಪೂರ್ಣ ಲಾಭ ಪಡೆಯುವಲ್ಲಿ ಆಸಕ್ತಿಯಿದೆ; ವಿಶೇಷವಾಗಿ, ಭಾರತ ಅಂತರ ರಾಷ್ಟ್ರೀಯ ಹಣಕಾಸು ಬಂಡವಾಳದ ಹರಿವಿಗೆ ಪೂರ್ಣವಾಗಿ ಅವಕಾಶ ತೆರೆದು ಕೊಡುತ್ತದೆ, ದೈತ್ಯ ಅಮೆರಿಕನ್ ಬಹುರಾಷ್ಟ್ರೀಯ ಕಂಪನಿಗಳಿಗೆ ವಿಶೇಷ ಅವಕಾಶ ನೀಡುತ್ತದೆ ಎಂಬ ನಿರೀಕ್ಷೆ ಅದಕ್ಕಿದೆ.

ಡಾ. ಮನಮೋಹನ್‌ಸಿಂಗ್ ನೇತೃತ್ವದ ಯುಪಿಎ ಸರಕಾರ ಅಮೆರಿಕಾದ ಈ ಆಸಕ್ತಿಯನ್ನು ಉದಾರೀಕರಣದ ನೀತಿಗಳನ್ನು ಮುಂದೊತ್ತುವ ಉದ್ದೇಶಕ್ಕೆ ಬಳಸಲು ಆತುರವಾಗಿದೆ. ಹಾಗೆ ಮಾಡುವಾಗ ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಚೌಕಟ್ಟನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು ಎಂದು ದೇಶ ಬಯಸುತ್ತದೆ.

ಭಾರತ ತನ್ನ ಚಿಲ್ಲರೆ ವ್ಯಾಪಾರ ವಲಯವನ್ನು ವಿದೇಶಿ ಹೂಡಿಕೆಗೆ ತೆರೆಯಬೇಕು ಎಂದು ಅಮೇರಿಕಾ ಬಹಳ ಆಸ್ಥೆ ವಹಿಸಿದೆ. ಅಮೆರಿಕಾದ ದೈತ್ಯ ಕಂಪನಿ ವಾಲ್ ಮಾರ್ಟ್‌ಗೆ ಭಾರತಕ್ಕೆ ಬರಲು ಬಹಳ ಆಸಕ್ತಿಯಿದೆ ಎಂಬುದು ಎಲ್ಲರಿಗೂ ಗೊತ್ತು. ಚಿಲ್ಲರೆ ವ್ಯಾಪಾರ ವಲಯದಲ್ಲಿ ದೇಶದ ಒಟ್ಟು ದುಡಿಮೆಗಾರರಲ್ಲಿ ಶೇ.8ರಷ್ಟು ಮಂದಿ ಕೆಲಸ ಮಾಡುತ್ತಾರೆ; ಈ ವಲಯ ಒಟ್ಟು ರಾಷ್ಟ್ರೀಯ ಉತ್ಪನ್ನ (ಜಿಡಿಪಿ)ದ ಶೇ.13ರಷ್ಟು ನೀಡುತ್ತದೆ. ಕೈಗಾರಿಕಾ ವಲಯದ ವಿಸ್ತರಣೆ ಇಲ್ಲದಿರುವಾಗ ಗ್ರಾಮೀಣ ಪ್ರದೇಶಗಳಿಂದ ಕೆಲಸ ಅರಸಿ ಬರುವವರಿಗೆ ಅವಕಾಶ ನೀಡುವ ಒಂದು ವಲಯ ಇದು. ಆದ್ದರಿಂದ ಪ್ರಧಾನ ಮಂತ್ರಿಗಳ ಭೇಟಿಯ ಸಮಯದಲ್ಲಿ ಈ ಚಿಲ್ಲರೆ ವ್ಯಾಪಾರ ವಲಯವನ್ನು ವಿದೇಶೀ ನೇರ ಹೂಡಿಕೆಗೆ ತೆರೆಯುವ ಯಾವುದೇ ಪ್ರಕಟಣೆ ಮಾಡುವ ತವಕವನ್ನು ತೋರಬಾರದು.

ಅಮೆರಿಕಾ ವಿಮಾ ವಲಯವೂ ಸೇರಿದಂತೆ ಹಣಕಾಸು ವಲಯದ ಮತ್ತಷ್ಟು ಉದಾರೀಕರಣ ನಡೆಸಬೇಕು ಎಂದು ಬಯಸುತ್ತದೆ. ಆದರೆ ಹಣಕಾಸು ವಲಯದ ಮೇಲಿನ ನಿಯಂತ್ರಣಗಳನ್ನು ತೆಗೆದು, ಅದನ್ನು ತೆರೆದರೆ ಅದರಿಂದ ದೇಶ ಆರ್ಥಿಕ ಅಧಿಕಾರ ಸಾರ್ವಭೌಮತೆಯನ್ನು

ಪುಟ 8 ಕ್ಕೆ

ನಾಲ್ಕು ವರ್ಷಗಳ ಹಿಂದೆ ಮಹಾರಾಷ್ಟ್ರ ವಿದ್ಯುತ್ ಮಂಡಳಿಯನ್ನು ದಿವಾಳಿಯ ಅಂಚಿಗೆ ತಳ್ಳಿ ಸ್ವತಃ ಮುಚ್ಚಿಹೋದ ದಭೋಲ್ ವಿದ್ಯುತ್ ಸ್ಥಾವರವನ್ನು ಮತ್ತೆ ತೆರೆಯುವ ಪ್ರಯತ್ನ ನಡೆದಿದೆ. ಯುಪಿಎ ಸರಕಾರ ರಚಿಸಿದ ವಿಶೇಷ 'ಮಂತ್ರಿಗಳ ಗುಂಪು' ದಭೋಲ್‌ನ ವಿದೇಶೀ ಸಾಲಗಾರರೊಡನೆ ಇತ್ಯರ್ಥಕ್ಕೆ ಮಂಜೂರಾತಿ ನೀಡಿದೆ ಎಂದು ಕಳೆದ ವಾರ ವರದಿಯಾಗಿದೆ. ಇದು ಈ ವಿದ್ಯುತ್ ಸ್ಥಾವರದ ಪುನರುಜ್ಜೀವನಕ್ಕೆ ಇದ್ದ ಕೊನೆಯ ಅಡ್ಡಿಯನ್ನು ನಿವಾರಿಸಿದೆ ಎಂದು ಹೇಳಲಾಗಿದೆ.

ಕಳೆದ ಎರಡು ತಿಂಗಳಲ್ಲಿ ಮಹಾರಾಷ್ಟ್ರದ ವಿದ್ಯುತ್ ವಲಯದಲ್ಲಿ ಮಹತ್ವದ ಬೆಳವಣಿಗೆಗಳು ಕಂಡುಬಂದವು. ಏಪ್ರಿಲ್ ತಿಂಗಳ ಕಡುಬಿಸಿಲಿನ ದಿನಗಳಲ್ಲಿ ಮಹಾರಾಷ್ಟ್ರ ವ್ಯಾಪಕ ಲೋಡ್‌ಶೆಡ್ಡಿಂಗ್ ಅನುಭವಿಸಿತ್ತು - ಸುಮಾರು 3000 ಮೆ.ವಾ.ನಷ್ಟು. ಈ ಹಿನ್ನೆಲೆಯಲ್ಲಿ ಒಂದೆಡೆ ಬಿಜೆಪಿ-ಶಿವಸೇನೆ ಹಾಗೂ ಇನ್ನೊಂದೆಡೆ ಎನ್‌ಸಿಪಿ ಈ ಎನ್ರೋನ್ ಯೋಜನೆಗೆ ಮತ್ತೆ ಜೀವ ತುಂಬುವ ಹುನ್ನಾರ ನಡೆಸಿದಂತೆ ಕಾಣುತ್ತದೆ.

ಮಹಾರಾಷ್ಟ್ರದಲ್ಲಿ ಮೇ 1ನ್ನು ಮಹಾರಾಷ್ಟ್ರ ಸ್ಥಾಪನೆಯ ದಿನವಾಗಿಯೂ ಆಚರಿಸಲಾಗುತ್ತದೆ. ಇದರ ಮುನ್ನಾ ದಿನ ಕೇಂದ್ರ ಮಂತ್ರಿ ಹಾಗೂ ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್‌ರವರು ಮಹಾರಾಷ್ಟ್ರದ ವಿದ್ಯುತ್ ವಲಯ ಮತ್ತು ದಭೋಲ್ ಯೋಜನೆಯ ತನಿಖೆ ನಡೆಸಿದ ಗೋಡ್‌ಬೋಳೆ ಸಮಿತಿಯ ವರದಿಯನ್ನು ಸ್ವೀಕರಿಸಿದ್ದು ಒಂದು ದೊಡ್ಡ ಪ್ರಮಾದ, ಆ ತಪ್ಪಿನಿಂದಾಗಿಯೇ ಪ್ರಸಕ್ತ ವಿದ್ಯುತ್ ಅಭಾವ ಒದಗಿದೆ ಎಂದರು. ಮರುದಿನ ಅಂದರೆ 'ಮಹಾರಾಷ್ಟ್ರ ದಿನ'ದಂದು ಪುಣೆಯಲ್ಲಿ ಶಿವಸೇನೆ ನೇತೃತ್ವದಲ್ಲಿ ಮಹಾರಾಷ್ಟ್ರ ವಿದ್ಯುತ್ ಮಂಡಳಿಯ ಕಚೇರಿಗಳ ಮೇಲೆ ಧಾಳಿ ನಡೆಯಿತು, ಅಕೋಲಾದಲ್ಲಿ ಬಿಜೆಪಿ ನೇತೃತ್ವದಲ್ಲಿ ವಿದ್ಯುತ್ ನೌಕರರ ಮೇಲೂ ಹಲ್ಲೆ ನಡೆಯಿತು, ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ನಾಶ ಮಾಡಲಾಯಿತು. ಮೇ ತಿಂಗಳಲ್ಲಿ ವಿದ್ಯುತ್ ಕಡಿತವನ್ನು ವಿರೋಧಿಸಿ ವಿದ್ಯುತ್ ಮಂಡಳಿ ಕಛೇರಿಗಳ ಮೇಲೆ ಧಾಳಿ, ಸಾರಿಗೆ ನಿಗಮದ ಬಸ್ಸುಗಳಿಗೆ ಹಾನಿ ಬಿಜೆಪಿ ನೇತೃತ್ವದಲ್ಲಿ ಮುಂದುವರೆಯಿತು.

ಎನ್ರೋನ್ ಮತ್ತು ವಿದ್ಯುತ್ ಬಿಕ್ಕಟ್ಟು

ಜತೆಗೆ ಮಾಧ್ಯಮಗಳಲ್ಲಿ ಬಿಜೆಪಿ, ಶಿವಸೇನೆ ಹಾಗೂ ಎನ್‌ಸಿಪಿ ಮುಖಂಡರ ಹೇಳಿಕೆಗಳು ಪ್ರಚಾರ ಪಡೆಯಲಾರಂಭಿಸಿದವು. ಎನ್ರೋನ್ ಯೋಜನೆಯನ್ನು ನಿಲ್ಲಿಸಿದ್ದು ಪ್ರಮಾದ, ಆದರಿಂದಲೇ ಈಗಿನ ವಿದ್ಯುತ್ ಅಭಾವ, ಎಡಪಕ್ಷಗಳ ಒತ್ತಡದಿಂದ ಕಾಂಗ್ರೆಸ್ ಸರಕಾರ ಆ ನಿರ್ಧಾರಕ್ಕೆ ಬದ್ಧಬಾರದಾಗಿತ್ತು, ಈಗ ಎನ್ರೋನ್‌ನ ಪುನರುಜ್ಜೀವನವೇ ಮಹಾರಾಷ್ಟ್ರದ ವಿದ್ಯುತ್ ಬಿಕ್ಕಟ್ಟಿಗೆ ಏಕೈಕ ಪರಿಹಾರ ಎಂಬುದು ಈ ಪ್ರಚಾರದ ಸಾರಾಂಶ.

ಆದರೆ ವಾಸ್ತವವಾಗಿ ನಡೆದದ್ದೇನು? ಎನ್ರೋನ್‌ನ ದಭೋಲ್ ಯೋಜನೆ ನಾಫ್ತಾ ಆಧಾರಿತವಾಗಿದ್ದು, ಈ ದುಬಾರಿ ವಿದ್ಯುತ್‌ನ್ನು ಕೊಳ್ಳುವ ಶಕ್ತಿ ಮಹಾರಾಷ್ಟ್ರ ವಿದ್ಯುತ್ ಮಂಡಳಿಗಿರಲಿಲ್ಲ. ಒಂದೆಡೆ ವಿದ್ಯುತ್ ಉತ್ಪಾದನೆಯಿತ್ತು, ಇನ್ನೊಂದೆಡೆ ವಿದ್ಯುತ್ತಿನ ಅಗತ್ಯವಿತ್ತು. ಆದರೆ ವಿದ್ಯುತ್ತಿನ ದುಬಾರಿ ಬೆಲೆಯಿಂದಾಗಿ ಅದನ್ನು ಕೊಳ್ಳಲು ಸಾಧ್ಯವಾಗದೆ ಹಣಕಾಸು ಬಿಕ್ಕಟ್ಟು ಉಂಟಾಗಿ ಆ ಸ್ಥಾವರವನ್ನು ಮುಚ್ಚಬೇಕಾಗಿ ಬಂದಿತ್ತು.

ಖಾಸಗೀಕರಣವನ್ನು ಆಧರಿಸಿದ ವಿದ್ಯುತ್ ನೀತಿ ವಿದ್ಯುತ್ ಬಿಕ್ಕಟ್ಟನ್ನು ಪರಿಹರಿಸಲಾಗದು, ಬದಲಿಗೆ ಅದೇ ವಿದ್ಯುತ್ ಬಿಕ್ಕಟ್ಟನ್ನು ತರುತ್ತದೆ ಎಂದು ಎನ್ರೋನ್ ಯೋಜನೆಯ ವಿಫಲತೆ ತೋರಿಸಿಕೊಟ್ಟಿತು. ಆದರೆ ಈಗ ಅದು ಸೃಷ್ಟಿಸಿದ ಬಿಕ್ಕಟ್ಟನ್ನೇ ನೆವವಾಗಿಸಿಕೊಂಡು ಅದೇ ದುಬಾರಿ ಯೋಜನೆಗೆ ಮತ್ತೆ ಜೀವ ತುಂಬುವ ಪ್ರಯತ್ನ ನಡೆದಿದೆ.



ಮತ್ತೆ ದಭೋಲ್‌ನ ಖಾಸಗಿ ವಿದ್ಯುತ್?

'ಎನ್ರೋನ್ ಮಿತ್ರ ಮಂಡಳಿ'ಯಿಂದ

ಮಹಾರಾಷ್ಟ್ರದ ಜನತೆಗೆ ಮತ್ತೊಮ್ಮೆ ವಂಚನೆ

1995ರಲ್ಲಿ ಶಿವಸೇನೆ - ಬಿಜೆಪಿ ಸರಕಾರ ಈ ಎನ್ರೋನ್ ಯೋಜನೆಯ ಬಗ್ಗೆ ಮರುಸಂಧಾನ ನಡೆಸಿದಾಗ ವಿದ್ಯುತ್ತನ್ನು ಯುನಿಟ್ಟಿಗೆ 1.89 ರೂ. ದರದಲ್ಲಿ ಪೂರೈಸಲಾಗುವುದು ಎಂಬ ಭರಸವೆ ನೀಡಲಾಗಿತ್ತು. ಆದರೆ ಅದು ವಿದ್ಯುತ್ ಪೂರೈಸಿದ 25 ತಿಂಗಳಲ್ಲಿ ಎಂದೂ 3.48 ರೂ.ಗಿಂತ ಕಡಿಮೆಗಿಳಿಯಲಿಲ್ಲ. ಜೂನ್ 2000ದಲ್ಲಂತೂ ಅದು 25.50 ರೂ. ತಲುಪಿತ್ತು. ಅದು ಮುಚ್ಚುವ ಮುನ್ನ ಜನವರಿ 2001ರಲ್ಲಿ ರೂ. 20.90, ಫೆಬ್ರುವರಿಯಲ್ಲಿ ರೂ.14.46, ಮಾರ್ಚ್‌ನಲ್ಲಿ ರೂ. 8.55, ಏಪ್ರಿಲ್‌ನಲ್ಲಿ ರೂ.10.22 ಹಾಗೂ ಮೇ 2001ರಲ್ಲಿ ರೂ. 8.75 ಇತ್ತು. ಈ ಯೋಜನೆಯ ಕೊನೆಯ ಒಂದು ವರ್ಷದಲ್ಲಿ ಸರಾಸರಿ ದರ ಸರ್ಕಾರಕ್ಕೆ ಭರವಸೆ ನೀಡಿದ ದರದ ನಾಲ್ಕು ಪಟ್ಟು ಇತ್ತು. ಎನ್ರೋನ್ ಯೋಜನೆ ವಿದ್ಯುತ್ ವಲಯದ ಅತಿ ದೊಡ್ಡ ಹಾಗೂ ಅತಿ ದುಬಾರಿ ಆಭಾಸ ಎಂಬುದರಲ್ಲಿ ಸಂದೇಹವಿಲ್ಲ ಎಂದು ಈ ಯೋಜನೆಯ ಆಳವಾದ ಅಧ್ಯಯನ ಮಾಡಿರುವ ಮಹಾರಾಷ್ಟ್ರದ ಕಾರ್ಮಿಕ ಮುಖಂಡ ಡಾ. ವಿವೇಕ್ ಮೊಂಟೆರೋ ಹೇಳುತ್ತಾರೆ. ಈ ಯೋಜನೆಯ ಪ್ರತಿಯೊಂದು ಹಂತದಲ್ಲೂ ದುರಾಡಳಿತ, ದುಷ್ಪಭಾರ ಹಾಸು ಹೊಕ್ಕಾಗಿತ್ತು. ಅಮೆರಿಕಾದಲ್ಲಿ ಎನ್ರೋನ್ ಅಧ್ಯಕ್ಷ ಕೆನೆತ್ ಲೇ ಯವರನ್ನು ಬಂಧಿಸಿ ಬೇಡಿ ತೊಡಿಸಿದ್ದ ಚಿತ್ರವನ್ನು ಬಿ.ಬಿ.ಸಿ., ಸಿ.ಎನ್.ಎನ್. ಬಿತ್ತರಿಸಿದವು. ಎನ್ರೋನ್‌ನ ಮುಖ್ಯ ಆಡಳಿತಾಧಿಕಾರಿ ಜೆಫ್ ಸ್ಕಿಲ್ಲಿಂಗ್ಸ್ ಮತ್ತಿತರ ಉನ್ನತ ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ಹಾಕಲಾಗಿದೆ ಎಂಬುದನ್ನು ಗಮನಿಸಬೇಕು. ಆದರೆ ಭಾರತದಲ್ಲಿ ಇದುವರೆಗೆ ಯಾರನ್ನೂ ಜವಾಬ್ದಾರರಾಗಿಸಿಲ್ಲ ಎಂಬುದು ಬೇರೆ ಮಾತು.

ಪುನರುಜ್ಜೀವನ ಪ್ರಯತ್ನ

ಈಗ ಇನ್ನಷ್ಟು ಸಾವಿರ ಕೋಟಿ ರೂಪಾಯಿಗಳನ್ನು ಸುರಿದು ಇಂತಹ ಯೋಜನೆಯನ್ನು ಪುನರುಜ್ಜೀವನಗೊಳಿಸುವ ಪ್ರಯತ್ನಗಳು ನಡೆದಿವೆ. ಎನ್ರೋನ್ ಯೋಜನೆಗೆ ಸಾಲ ನೀಡಿದ ಜಿಇ ಮತ್ತು ಬ್ರೆಕ್ಟೆಲ್ ಕಂಪನಿಗಳು ತಮ್ಮ ಸಾಲ ವಾಪಾಸು ನೀಡಬೇಕೆಂದು, ಈ ಯೋಜನೆಗೆ ಗ್ಯಾರಂಟಿ ನೀಡಿದ ಭಾರತ ಸರಕಾರದ ಮೇಲೆ 6 ಶತಕೋಟಿ ಡಾಲರುಗಳ ಪರಿಹಾರಕ್ಕೆ ಲಂಡನ್‌ನಲ್ಲಿ ದಾವೆ ಹಾಕಿವೆ. ಈ ಲೇಖನದ ಆರಂಭದಲ್ಲಿ ಹೇಳಿದಂತೆ ಈ ಎರಡು ಕಂಪನಿಗಳು, ಅದೇ ರೀತಿಯಲ್ಲಿ ಇತರ ಸಾಲ ನೀಡಿದ ವಿದೇಶೀ ಸಂಸ್ಥೆ, ಕಂಪನಿಗಳಿಗೆ ಭಾರತದ ಐಡಿಬಿಐ ಮತ್ತಿತರ ಹಣಕಾಸು ಸಂಸ್ಥೆಗಳು ಪರಿಹಾರ ನೀಡಿ ಇದನ್ನು ಇತ್ಯರ್ಥಗೊಳಿಸಬೇಕೆಂದು ಕೇಂದ್ರ ಮಂತ್ರಿಮಟ್ಟದ ಸಮಿತಿ ನಿರ್ಧರಿಸಿದೆಯಂತೆ. ಜಿ.ಇ ಮತ್ತು ಬ್ರೆಕ್ಟಲ್‌ಗಳಿಗೆ 1276 ಕೋಟಿ ರೂ.ಗಳಿಂದ 1452 ಕೋಟಿ ರೂ.ಗಳನ್ನು ಕೊಡಬೇಕಾದೀತೆಂದು ಹೇಳಲಾಗಿದೆ. ಇವಲ್ಲದೆ ಈ ಯೋಜನೆಯನ್ನು ಪೂರ್ಣಗೊಳಿಸಲು ಮತ್ತೆ 880 ಕೋಟಿ ರೂ.ಗಳು ಬೇಕು. ಇಷ್ಟು ಖರ್ಚಿದ್ದರೂ ಈ ಯೋಜನೆಯನ್ನು ಪುನರುಜ್ಜೀವನಗೊಳಿಸಿ ಯುನಿಟ್ಟಿಗೆ ರೂ. 2.30 ದರದಲ್ಲಿ ವಿದ್ಯುತ್ ಒದಗಿಸಲಾಗುವುದು ಎಂದು ಹೇಳಲಾಗುತ್ತಿದೆ. ಆದರೆ ಈ ಮಾತನ್ನು ಯಾರೂ ಎಂಬುತ್ತಿಲ್ಲ. ಇಂದಿರಾ ಗಾಂಧಿ ಅಣು ಸಂಶೋಧನಾ ಕೇಂದ್ರದ ನಿವೃತ್ತ ನಿರ್ದೇಶಕರು ಹಾಗೂ ವಿದ್ಯುತ್ ಇಂಜಿನಿಯರ್‌ರವರ ಲೆಕ್ಕಾಚಾರದ ಪ್ರಕಾರ ಯೂನಿಟ್ಟಿಗೆ ರೂ. 3.29 ಖರ್ಚು ಬಂದೇ ಬರುತ್ತದೆ. ಹಾಗಿರುವಾಗ ರೂ. 2.30 ದರದಲ್ಲಿ ವಿದ್ಯುತ್ ಒದಗಿಸಲು ಹೇಗೆ ಸಾಧ್ಯ?

ಈ ಹೆಚ್ಚಿನ 1 ರೂ. ಸರಕಾರದ ಮೇಲೆ 1530 ಕೋಟಿ ರೂ.ಗಳ ಹೆಚ್ಚಿನ ಹೊರೆ ಹಾಕುತ್ತದೆ. ಇದನ್ನು ಯಾರು ತೆರಬೇಕು? ಎನ್ರೋನ್ ಯೋಜನೆಯ ಪುನರುಜ್ಜೀವನದ ನಂತರ ಈ ವಿದ್ಯುತ್ತಿಗೆ ರೂ. 3.29 ದರದಲ್ಲಿ 5000 ಕೋಟಿ ರೂ.ಗಳನ್ನು ತೆರಬೇಕಾಗಿ ಬರುತ್ತದೆ. ಈ ಹಣಕಾಸು ಭಾರವನ್ನು ಮಹಾರಾಷ್ಟ್ರದ ವಿದ್ಯುತ್ ವಲಯಕ್ಕೆ ಹೊರಲು ಸಾಧ್ಯವಿಲ್ಲ ಎಂಬುದು ಪರಿಣಿತರ ಅಂದಾಜು. ಇಂತಹ ದುಬಾರಿ ವಿದ್ಯುತ್ತೇ ಎನ್ರೋನ್ ಯೋಜನೆಯ ಮೊದಲ ಹಂತ ಕುಸಿದು ಬೀಳಲು ಕಾರಣವಾಗಿತ್ತು, ಅಲ್ಲದೆ ಒರಿಸ್ಸಾ ಮತ್ತಿತರ ರಾಜ್ಯಗಳಲ್ಲಿ ಖಾಸಗೀ ವಿದ್ಯುತ್ ಉತ್ಪಾದಕರು ಕುಸಿಯಲು ಕಾರಣವಾಗಿದೆ.

ಹೆಚ್ಚು ಎನ್ರೋನ್ ಎಂದರೆ ಕಡಿಮೆ ವಿದ್ಯುತ್

ಹೀಗಿರುವಾಗ ಎನ್ರೋನ್ ಯೋಜನೆಯನ್ನು ಪುನರುಜ್ಜೀವನಗೊಳಿಸುವ ಮೊದಲು ಸರಿಯಾದ ತಾಂತ್ರಿಕ-ಆರ್ಥಿಕ ಪರಿಶೀಲನೆ ನಡೆಸುವುದು ಅಗತ್ಯ ಎಂದು ಡಾ. ವಿವೇಕ್ ಮೊಂಟೆರೋ ಹೇಳುತ್ತಾರೆ. ಇದು 284 ಮೆ.ವಾ. ಸಾಮರ್ಥ್ಯದ ಎಲ್‌ಎನ್‌ಜಿ ಆಧಾರಿತ ಸ್ಥಾವರ. 1993ರಲ್ಲಿ ಸ್ವತಃ ವಿಶ್ವಬ್ಯಾಂಕ್ 2000 ಮೆ.ವಾ. ಸಾಮರ್ಥ್ಯದ ಎಲ್‌ಎನ್‌ಜಿ ಆಧಾರಿತ ಸ್ಥಾವರ ಪ್ರಯೋಜನಕಾರಿಯಲ್ಲ ಎಂದಿತ್ತು. ನಂತರ ರಾಜ್ಯಾಧ್ಯಕ್ಷ ಸಮಿತಿಯೂ ದಭೋಲ್ ಮತ್ತು ಮಹಾರಾಷ್ಟ್ರದ ಇತರ ಎರಡು ಖಾಸಗಿ ವಿದ್ಯುತ್ ಯೋಜನೆಗಳ ಬಗ್ಗೆ ಇಂತಹ ಸಂದೇಹ ವ್ಯಕ್ತಪಡಿಸಿತ್ತು. 2001ರಲ್ಲಿ ಗೋಡ್‌ಬೋಳೆ ಸಮಿತಿ ಕೂಡಾ ಇದು ಉತ್ತಮ ಪರಿಹಾರವೇನೂ ಅಲ್ಲ ಎಂದಿತ್ತು. ಹೀಗಿದ್ದರೂ ಎನ್ರೋನ್ ಯೋಜನೆಯನ್ನು ಪುನರುಜ್ಜೀವನಗೊಳಿಸಲೇ ಬೇಕು ಎಂದು ಮುಂದುವರೆದರೆ ಮಹಾರಾಷ್ಟ್ರ ಮತ್ತೆ ವಿದ್ಯುತ್ ಬಿಕ್ಕಟ್ಟನ್ನು ಎದುರಿಸಬೇಕಾದೀತು, ಹೆಚ್ಚು ಎನ್ರೋನ್ ಎಂದರೆ ಕಡಿಮೆ ವಿದ್ಯುತ್ ಎಂಬ ಸ್ಥಿತಿ ತಲುಪಬಹುದು ಎಂದು ಡಾ. ವಿವೇಕ್ ಮೊಂಟೆರೋ ಹೇಳುತ್ತಾರೆ.

ಈ ಪುನರುಜ್ಜೀವನಕ್ಕೆ ಒತ್ತಡ ತರುತ್ತಿರುವವರು ಯಾರು? ಶರದ್ ಪವಾರ್‌ರವರ ಎನ್‌ಸಿಪಿ ಈ ವಿಷಯವಾಗಿ ಶಿವಸೇನೆ ಮತ್ತು ಬಿಜೆಪಿ ಯೊಂದಿಗೆ ಕೈಮಿಲಾಯಿಸಿದಂತಿದೆ. ಈ ವಿಷಯದಲ್ಲಿ ಈ ಮೈತ್ರಿ ದೀರ್ಘಕಾಲದ್ದು. ಈ ಪಕ್ಷಗಳನ್ನು ಮಹಾರಾಷ್ಟ್ರದಲ್ಲಿ 'ಎನ್ರೋನ್ ಮಿತ್ರಮಂಡಳಿ' ಎಂದೇ ಕರೆಯುತ್ತಾರೆ. ಎನ್ರೋನ್ ಹಾಗೂ ಅಷ್ಟೇ ಅಸಮರ್ಥವಾದ ಇತರ ಖಾಸಗೀ ವಿದ್ಯುತ್ ಉತ್ಪಾದಕರನ್ನು ಮಹಾರಾಷ್ಟ್ರಕ್ಕೆ ತರುವಲ್ಲಿ ಒಟ್ಟುಗೂಡಿದವರು ಇವರು. ಕಳೆದ ಒಂದು ದಶಕದಲ್ಲಿ ರಾಜ್ಯದಲ್ಲಿ ವಿದ್ಯುತ್ ವಲಯ ಇವರ ಕೈಯಲ್ಲೇ ಇತ್ತು. ಕೇಂದ್ರದಲ್ಲೂ ಎನ್‌ಡಿಎ ಸರಕಾರ ಇದ್ದಾಗ ಶಿವಸೇನೆಯ ಸುರೇಶ್ ಪ್ರಭು ಮತ್ತು ಅನಂತಗೀತೆ ಹಾಗೂ ಬಿಜೆಪಿಯ ಜಯವಂತೀಬಾಯಿ ಮೆಹ್ತಾ ವಿದ್ಯುತ್ ಸಚಿವಾಲಯದಲ್ಲಿ ಮಂತ್ರಿಗಳಾಗಿದ್ದರು. ಇವರೆಲ್ಲಾ ಸೇರಿ ಮಹಾರಾಷ್ಟ್ರದಲ್ಲಿ ಸಾರ್ವಜನಿಕ ವಲಯದಲ್ಲಿ ವಿದ್ಯುತ್ ಉತ್ಪಾದನೆಯನ್ನು ತಡೆದು ಆದರಿಂದ ಉಂಟಾಗುವ ಅಭಾವದ ಪರಿಸ್ಥಿತಿಯಲ್ಲಿ ದುಬಾರಿ ಖಾಸಗಿ ಉತ್ಪಾದಕರನ್ನು ತರಬಹುದು ಎಂಬುದು ಇವರ ಹುನ್ನಾರವಿದ್ದಂತಿತ್ತು. ಇದರ ಫಲಿತಾಂಶವೇ ಈಗ ಮಹಾರಾಷ್ಟ್ರ ಅನುಭವಿಸುತ್ತಿರುವ ತೀವ್ರ ವಿದ್ಯುತ್ ಅಭಾವ. ದುರದೃಷ್ಟವಶಾತ್, ಮತ್ತೆ ಈ ವಿದ್ಯುತ್ ಅಭಾವವನ್ನೇ ನೆಪವಾಗಿಸಿಕೊಂಡು ಅದೇ ಎನ್ರೋನ್‌ನ ಪುನರುಜ್ಜೀವನಕ್ಕೆ ಇವರು ಮುಂದಾಗಿದ್ದಾರೆ!

ದಭೋಲ್ ವಿದ್ಯುತ್ ಸ್ಥಾವರ ಪುನರಾರಂಭಕ್ಕೆ ನಡೆದಿರುವ ಮಾತುಕತೆಗಳಲ್ಲಿ ಕೇಂದ್ರ ಹಣಕಾಸು ಮಂತ್ರಿ ಪಿ.ಚಿದಂಬರಂ ಭಾಗವಹಿಸಲು ನಿರಾಕರಿಸಿದರು. ಅದಕ್ಕೆ ಅವರು ಕೊಟ್ಟ ಕಾರಣ - ತಾನು ಕಾನೂನು ಕ್ರಮಗಳಲ್ಲಿ ಎನ್ರೋನ್‌ನ ವಕೀಲನಾಗಿದ್ದೆ ಎಂದು. ಇದು ಸರಿಯಾದದ್ದೇ. ಆದರೆ ಈ ಎನ್ರೋನ್ ಕಲಸುಮೇಲೋಗರಕ್ಕೆ ಕಾರಣರಾದ ಶರದ್ ಪವಾರ್, ಮೊಂಟೆಕ್‌ಸಿಂಗ್ ಅಹ್ಲುವಾಲಿಯಾ ಅಂತವರು ಈ ಮರು ಮಾತುಕತೆಗಳಲ್ಲಿ ಭಾಗವಹಿಸುವುದು ಎಷ್ಟರ ಮಟ್ಟಿಗೆ ಸರಿ ಎಂಬ ಪ್ರಶ್ನೆಯೇಳುವುದು ಸಹಜ.

ಒಟ್ಟಿನಲ್ಲಿ ಮಹಾರಾಷ್ಟ್ರದಲ್ಲಿನ ವಿದ್ಯುತ್ ಬಿಕ್ಕಟ್ಟು ಈ ಬಿಕ್ಕಟ್ಟಿಗೆ ಜವಾಬ್ದಾರರು ಯಾರು, ಖಾಸಗೀಕರಣವನ್ನು ಆಧರಿಸಿದ ವಿದ್ಯುತ್ ನೀತಿ ಸಮರ್ಥನೀಯವೇ, ಪರ್ಯಾಯ ದಾರಿಗಳಿವೆಯೇ ಎಂಬ ಮುಖ್ಯ ಪ್ರಶ್ನೆಗಳನ್ನು ಎತ್ತಿವೆ. ○

ಭಾರತ - ಅಮೆರಿಕಾ ....

ಪುಟ 6 ರಿಂದ

ಆಸಕ್ತಿ ಎಂಬುದು ಈ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ.

ಇತ್ತೀಚೆಗೆ ಸಹಿ ಹಾಕಿದ ಭಾರತ-ಅಮೆರಿಕಾ ರಕ್ಷಣಾ ಚೌಕಟ್ಟನ್ನು ಈ ಜಂಟಿ ಹೇಳಿಕೆ ಅನುಮೋದಿಸಿದೆ. ಈ "ಚೌಕಟ್ಟು" ದೇಶಿ ಭಾರತದ ಸಾಮರಿಕ ಹಿತಾಸಕ್ತಿಗಳಿಗೆ, ಸ್ವತಂತ್ರ ವಿದೇಶಾಂಗ ನೀತಿಗೆ ಬಾಧಕವಾಗಿದೆ ಎಂಬುದನ್ನು ಸಿಪಿಐ(ಎಂ) ಈಗಾಗಲೇ ವಿವರಿಸಿದೆ. ಅಮೆರಿಕಾ ಸಾಮರಿಕ ಪರಮಾಣು ಸಹಕಾರ ನೀಡಲು ಒಪ್ಪಿದ್ದಕ್ಕೆ ಪ್ರತಿಯಾಗಿ ಏನು ಪಡೆದಿದೆ ಎಂಬು ಬಗ್ಗೆ ಈ ಜಂಟಿ ಹೇಳಿಕೆ ಏನು ಹೇಳಿಲ್ಲ, ಕೋಟಿಗಟ್ಟಲೆ ಡಾಲರುಗಳನ್ನು ತೆತ್ತು ಅಮೆರಿಕನ್ ರಕ್ಷಣಾ ಉಪಕರಣಗಳನ್ನು ಖರೀದಿಸುವ ಬಗ್ಗೆ ಒಂದು ಒಪ್ಪಂತಕ್ಕೆ ಬರಲಾಗಿದೆಯೇ? ಸರಕಾರ ಇದನ್ನು ಸ್ಪಷ್ಟಪಡಿಸಬೇಕು ಎಂದು ಸಿಪಿಐ(ಎಂ) ಹೇಳಿದೆ. ಈಗಾಗಲೇ ಸಿಪಿಐ(ಎಂ) ಮತ್ತು ಎಡಪಕ್ಷಗಳು ಎಫ್-16 ಫೈಟರ್ ವಿಮಾನಗಳ ಖರೀದಿಯ ವಿರುದ್ಧ ಮಾತನಾಡಿದೆ.

ಭದ್ರತಾ ಮಂಡಳಿಯಲ್ಲಿ ಭಾರತವನ್ನು ಒಂದು ಖಾಯಂ ಸದಸ್ಯನಾಗಿಸುವ ಬಗ್ಗೆ ಅಮೆರಿಕಾದ ಸ್ಪಷ್ಟ ಭರವಸೆ ಈ ಹೇಳಿಕೆಯಲ್ಲಿ ಕಾಣುತ್ತಿಲ್ಲ. ಭದ್ರತಾ ಮಂಡಳಿಯ ವಿಸ್ತರಣೆ ಕುರಿತ ನಾಲ್ಕು ದೇಶಗಳ ನಿರ್ಣಯವನ್ನು ಅಮೆರಿಕಾ ವಿರೋಧಿಸಿದೆ ಎಂಬುದರತ್ತ ಸಿಪಿಐ(ಎಂ) ಗಮನ ಸೆಳೆದಿದೆ.

ಭಾರತ ಒಂದು ಪ್ರಧಾನ ಅಭಿವೃದ್ಧಿಶೀಲ ದೇಶ. ಆದ್ದರಿಂದ ಅಮೆರಿಕಾ ಸಂಯುಕ್ತ ಸಂಸ್ಥಾನಗಳೊಂದಿಗೆ ಅದು ಒಂದು ಸಮತೋಲನದ, ಸಮದರ್ಶಿತ್ವದ ಸಂಬಂಧಗಳನ್ನು ಹೊಂದಿರಬೇಕಾಗುತ್ತದೆ. ಈ ಅಂಶಕ್ಕೆ ಈ ಜಂಟಿ ಹೇಳಿಕೆ ಬಹಳ ಮಹತ್ವವನ್ನೇನೂ ನೀಡಿಲ್ಲ. ಅಮೆರಿಕಾ ಕೊಟ್ಟಿರುವ ರಿಯಾಯ್ತಿಗಳಿಗೆ ಹೋಲಿಸಿದರೆ ಭಾರತ ಅದಕ್ಕೂ ಹೆಚ್ಚಿನ ರಿಯಾಯ್ತಿಗಳನ್ನು ಕೊಡುವುದನ್ನು ಮುಂದುವರೆಸಿರುವಂತೆ ಕಾಣುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಟೀಕಿಸಿದೆ. ○

ವಂಚಕ ಮಾಲಿಕನ ಮೋಸದ ವಿರುದ್ಧ ಮೆಥೆಡ್ಸ್ ಕಾರ್ಮಿಕರ ಹೋರಾಟ

ಹೊಸಕೋಟೆ ಪಿಲ್ಲಗುಂಪೆ ಕೈಗಾರಿಕಾ ಪ್ರದೇಶದಲ್ಲಿರುವ ಮೇಥೆಡ್ಸ್ ಇಂಡಿಯ ಮಾಲೀಕ 2001-2002 ಮತ್ತು 2002-2003 ರ ಬೋನಸ್ ಕೊಡದೆ ಎಲ್ಲಾ ಕಾರ್ಮಿಕರಿಂದ ಮುಂಗಡವಾಗಿ ಸಹಿ ಹಾಕಿಸಿಕೊಂಡು ಕಾರ್ಮಿಕರಿಗೆ ಮೋಸ ಮಾಡಿರುತ್ತಾನೆ. ಇದನ್ನು ಪ್ರಶ್ನಿಸಿದ ಕಾರ್ಮಿಕ ಮುಖಂಡರಾದ ಸಿ.ಮುನಿರಾಜು, ಡಿ.ಮುನಿರಾಜು ಮತ್ತು ಶ್ರೀನಿವಾಸರೆಡ್ಡಿಯವರನ್ನು ಕೆಲಸದಿಂದ ತೆಗೆದುಹಾಕಿದ್ದು ಇದನ್ನು ವಿರೋಧಿಸಿ ಸಿ.ಐ.ಟಿ.ಯು ಸಂಘಟನೆಯು ವತಿಯಿಂದ. ದಿನಾಂಕ 28.5.2005ರಂದು ಮೆಥೆಡ್ಸ್ ಇಂಡಿಯು ಕಾರ್ಖಾನೆಯ ಪ್ರತಿಭಟನಾ ಕಾರ್ಯಕ್ರಮವನ್ನು ಆಯೋಜಿಸಿ ಕಾರ್ಖಾನೆಯ ಮುಂಭಾಗದಲ್ಲಿ ಸಿ.ಐ.ಟಿ.ಯು ಸಂಘಟನೆಯ ಬಾವುಟ ನೆಟ್ಟು ನಂತರ ಬಹಿರಂಗ ಸಭೆಯನ್ನು ನಡೆಸಿ ಬಂದಮೇಲೆ ಮೆಥೆಡ್ಸ್ ಮಾಲೀಕನಾದ ಇ.ಜೆ.ಜೋಸ್ ಆ ಬಾವುಟವನ್ನು ಕಿತ್ತೆಸೆದ. ಇದನ್ನು ಖಂಡಿಸಿ ಪೊಲೀಸ್ ಠಾಣೆಯಲ್ಲಿ ಮಾಲೀಕನ ವಿರುದ್ಧ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ಆದ ಕಾರಣ ಸಿಐಟಿಯು ಸಂಘಟನೆಯಿಂದ ದಿನಾಂಕ 5.7.2005ರಂದು ಬೆಳಿಗ್ಗೆ 7.30ಕ್ಕೆ ಹೊಸಕೋಟೆ ಕೆ.ಇ.ಬಿ ಸರ್ಕಲ್‌ನಿಂದ ರ‍್ಯಾಲಿ ಮತ್ತು ಮಾಲೀಕನ ಮನೆ ಮುಂದೆ ಪ್ರತಿಭಟನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ವೈಟ್‌ಫೀಲ್ಡ್ ಪ್ರದೇಶದಿಂದ ಹಾಗೂ ಪಿಲ್ಲಗುಂಪೆ ಕೈಗಾರಿಕಾ ಪ್ರದೇಶದಿಂದ ನೂರಾರು ಕಾರ್ಮಿಕರು ಮೆಥೆಡ್ಸ್ ಮಾಲೀಕನ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿ ಭಾಗವಹಿಸಿದ್ದರು. ಪ್ರತಿಭಟನೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿಐಟಿಯು ಜಿಲ್ಲಾ ಉಪಾಧ್ಯಕ್ಷರಾದ ಕಾಂ.ಹೆಚ್.ಎನ್ ಗೋಪಾಲಗೌಡರು ವಹಿಸಿದರು ಹಾಗೂ ಈ ಕಾರ್ಯಕ್ರಮವನ್ನು ಸಿಐಟಿಯು ಮುಖಂಡರಾದ ಕಾಂ.ಪಿ.ಮುನಿರಾಜು ಮತ್ತು ಕಾಂ.ಪಿ.ರಮೇಶ್‌ರವರು ಆಯೋಜಿಸಿದ್ದರು. ಈ ಹೋರಾಟಕ್ಕೆ ಬೆಂಬಲ ಸೂಚಿಸಿ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾದ ಕಾಂ.ಗೌರಮ್ಮ ಹಾಗೂ ಕರ್ನಾಟಕ ಪ್ರಾಂತರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾದ ಕಾಂ.ಮನೋಹರ್, ವಕೀಲರ ಸಂಘದ ಜಿಲ್ಲಾ ಉಪಾಧ್ಯಕ್ಷರಾದ ಕಾಂ.ಹರೀಂದ್ರರವರು ಮತ್ತು ಎಸ್.ಎಫ್.ಐ,ಡಿವೈಎಫ್‌ಐ ಸಂಘಟನೆಯ ಸಂಗಾತಿಗಳು ಭಾಗವಹಿಸಿ ಬೆಂಬಲ ಸೂಚಿಸಿ ಮಾತನಾಡಿದರು.

ವರದಿ

ಪಿ.ಮುನಿರಾಜು

ಅಪಘಾತದಲ್ಲಿ ಎಸ್.ಎಫ್.ಐ ಸಂಗಾತಿ ಮೂರ್ತಿ ನಾಯಕ್ ನಿಧನ

ಭಾರತ ವಿದ್ಯಾರ್ಥಿ ಫೆಡರೇಷನ್ (SFI)ನ ದಾವಣಗೆರೆ ಜಿಲ್ಲೆಯ ಹರಪ್ಪನಹಳ್ಳಿ ತಾಲ್ಲೂಕು ಕಾರ್ಯದರ್ಶಿಯಾಗಿ 4 ವರ್ಷಗಳ ಕಾಲ ಕಾರ್ಯ ನಿರ್ವಹಿಸಿ ಇತ್ತೀಚೆಗೆ ನಡೆದ ಎಸ್‌ಎಫ್‌ಐ ಜಿಲ್ಲಾಸಮ್ಮೇಳನದಲ್ಲಿ ಜಿಲ್ಲಾಸಹ ಕಾರ್ಯದರ್ಶಿಗಳಾಗಿ ಆಯ್ಕೆಯಾಗಿ ಸಕ್ರಿಯವಾಗಿ ವಿದ್ಯಾರ್ಥಿ ಚಳುವಳಿಯಲ್ಲಿ ದುಡಿಯುತ್ತಿದ್ದ ಕಾಮ್ರೇಡ್ ಮೂರ್ತಿನಾಯಕ್‌ರವರು ಜುಲೈ 13ರಂದು ಅಪಘಾತದಲ್ಲಿ ನಿಧನರಾಗಿದ್ದಾರೆ. ಬಿ.ಎ ಪದವಿ ಮುಗಿಸಿ ಕಾನೂನು ಪದವಿ ಪಡೆಯಲು ತಯಾರಿ ನಡೆಸುತ್ತಿದ್ದರೂ ಮೂಲತಃ



ಹರಪ್ಪನಹಳ್ಳಿ ತಾಲ್ಲೂಕಿನ ವಾಸಿಹಳ್ಳಿ ತಾಂಡದವರಾದ ಇವರು ತಂದೆ, ತಾಯಿ ಒಬ್ಬ ಅಣ್ಣ, ಒಬ್ಬ ಅಕ್ಕ ಮತ್ತೊಬ್ಬರು ತಂಗಿಯ ಜೊತೆಗೆ ಸಾವಿರಾರು ಜನ ಎಸ್‌ಎಫ್‌ಐನ ಸಂಗಾತಿಗಳು ಮತ್ತು ಹಿತೈಷಿಗಳನ್ನು ಅಗಲಿದ್ದಾರೆ.

ಸಂಗಾತಿ ಮೂರ್ತಿ ನಾಯಕ್‌ರವರ ಮನೆಯಲ್ಲೇ ಸ್ವಂತ ಟ್ರಾಕ್ಟರ ಇದ್ದು ಇದನ್ನು ಬಹಳ ವರ್ಷಗಳಿಂದ ಇವರೆ ಚಾಲನೆ ಮಾಡುತ್ತಿದ್ದರು. ಅವರು ಊರಿನ ಪಕ್ಕದ ಊರಿನಲ್ಲಿ ಜುಲೈ 9.11 ರಂದು 3 ದಿನಗಳ ಕಾಲ ಅತ್ಯಂತ ಯಶಸ್ವಿಯಾಗಿ ಎಸ್‌ಎಫ್‌ಐನ ಜಿಲ್ಲಾಮಟ್ಟದ ಅಧ್ಯಯನ ಶಿಬಿರವನ್ನು ನಡೆಸಿ ಮನೆಗೆ ಹಿಂದಿರುಗಿ 13ರಂದು ಕಲ್ಲು ತುಂಬಲು ಟ್ರಾಕ್ಟರನ್ನು ಗುಡ್ಡಕ್ಕೆ ತೆಗೆದುಕೊಂಡು ಹೋಗಿ ಕಲ್ಲು ತುಂಬಿದ ನಂತರ ಗುಡ್ಡದ ಮೇಲೆ ಆಯತಪ್ಪಿ ಟ್ರಾಕ್ಟರ್ ಪಲ್ಟಿಯಾಗಿ ಅದರ ಕೆಳಗೆ ಸಿಕ್ಕಿಹಾಕಿಕೊಂಡು ಅಸುನೀಗಿದ್ದಾರೆ.

ಸಾವಿನ ಸುದ್ದಿ ಬರಸಿಡಿಲಿನಂತೆ ಎರಗುತ್ತಿದ್ದ ತಕ್ಷಣ ಬೆಂಗಳೂರು ಸೇರಿ ದಾವಣಗೆರೆ ಸುತ್ತಮುತ್ತಲ ಜಿಲ್ಲೆಗಳ ಎಸ್‌ಎಫ್‌ಐ ಸಂಗಾತಿಗಳು ನೂರಾರು ಸಂಖ್ಯೆಯಲ್ಲಿ ಸೇರಿ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡರು.

ಉತ್ತಮ ಹಾಡುಗಾರನ ಜೊತೆಗೆ ಅತ್ಯುತ್ತಮ ಸಂಘಟಕನಾಗಿದ್ದ ಕಾಮ್ರೇಡ್ ಮೂರ್ತಿ ನಾಯಕನನ್ನು ಕಳೆದುಕೊಂಡಿರುವುದು ವಿದ್ಯಾರ್ಥಿ ಚಳುವಳಿಗೆ ನಷ್ಟವನ್ನುಂಟು ಮಾಡಿದೆ. ಈ ಸಂಗಾತಿಗೆ ಎಸ್‌ಎಫ್‌ಐ ಕರ್ನಾಟಕ ರಾಜ್ಯಸಮಿತಿಯು ಹೃದಯಸ್ಪರ್ಶಿ ಶ್ರದ್ಧಾಂಜಲಿಯನ್ನು ಅರ್ಪಿಸಿದೆ.

ಕಾಂ. ಟಿ.ಎಸ್.ಮಣಿ ಇನ್ನಿಲ್ಲ.....

ಪುಟ 3 ರಿಂದ

ಜೆ.ಎಂ.ಎಸ್ ಮುಖಂಡರು ಅಂತಿಮ ಯಾತ್ರೆಯಲ್ಲಿ ಭಾಗವಹಿಸಿ ಶ್ರದ್ಧಾಂಜಲಿ ಅರ್ಪಿಸಿದರು.

ಜಿಲ್ಲೆಯ ಮಾಜೀ ಮಂತ್ರಿ ಕೃಷ್ಣಾರೆಡ್ಡಿ, ಕೆ.ಜಿ.ಎಫ್‌ನ ಶಾಸಕ ರಾಜೇಂದ್ರನ್, ಮಾಜೀ ಶಾಸಕ ಭಕ್ತವತ್ಸಲಂ, ಜಿ.ಎ.ಐ.ಟಿಯ ಚೇರ್‌ಮನ್ ಡಾ.ತಿಮ್ಮಯ್ಯ, ಕಾಂಗ್ರೆ ಮುಖಂಡರಾದ ಸಂಪತ್‌ಕುಮಾರ್, ಡಿಎಂಕೆಯ ಸಾರಂಗಪಾಣಿ, ಬಿ.ಇ.ಎಂ.ಇ.ಎ.ಯ ಅಧ್ಯಕ್ಷ ಆರ್.ಸತ್ಯಮೂರ್ತಿ, ಬಿಇಎಂಎಲ್ ಎಸ್.ಸಿ/ಎಸ್.ಟಿ ಅಸೋಸಿಯೇಷನ್‌ನ ಗೋಪಾಲ್, ಬಿಇಎಂಎಲ್ ಕಾರ್ಮಿಕ ಸಂಘಟನೆ ಜೆ.ಎ.ಸಿಯ ಕಾಂ.ಇಕ್ಬಾಲ್ ಅಹಮ್ಮದ್, ಬಿಜೆಪಿಯ ಸಿ.ಎಸ್.ಪನ್ನಾಲಾಲ್, ಸಿಪಿಐ ರಂಗಸ್ವಾಮಿ, ಬಿಇಎಂಎಲ್ ಆಡಳಿತ ವರ್ಗದ ಪರವಾಗಿ ಅಧಿಕಾರಿಗಳು, ತಮಿಳು ಮನ್ರಂ ಮುಖಂಡರು. ತಮಿಳುನಾಡಿನ ಸಿಪಿಐ(ಎಂ) ಮುಖಂಡ ಕಾಂ.ಜಯರಾಂ, ಮೈಸೂರು, ಬೆಂಗಳೂರು ಬಿಇಎಂಎಲ್ ಘಟಕಗಳ ಕಾರ್ಮಿಕ ಮುಖಂಡರು ಹಾಗೂ ಡಿವೈಎಫ್‌ಐ, ಜೆ.ಎಂ.ಎಸ್, ಸಮುದಾಯ ಮತ್ತು ಇತರ ಹಲವಾರು ಸಂಘಟನೆಗಳ ಮುಖಂಡರು ಕಾರ್ಯಕರ್ತರು ಕಾಂ.ಟಿ.ಎಸ್.ಮಣಿಯವರಿಗೆ ಅಂತಿಮ ನಮನ ಸಲ್ಲಿಸಿದರು.

ದಿನಾಂಕ 14.7.05 ರಂದು ಸಂಜೆ 4.00 ಗಂಟೆಗೆ ಅವರ ನಿವಾಸದಿಂದ ಹೊರಟ ಶವಯಾತ್ರೆ ಪಕ್ಷದ ತಾಲ್ಲೂಕು ಸಮಿತಿ ಕಛೇರಿಯ ಬಳಿ ನಿಂತು ಅಲ್ಲಿಂದ ಮುಂದಕ್ಕೆ ಆಂಡರ್‌ಸನ್‌ಪೇಟೆ ದಾರಿಯಾಗಿ ಹಲವು ಹಿರಿಯ ಕಮ್ಯೂನಿಸ್ಟ್ ಮುಖಂಡರ ಅಂತ್ಯ ಸಂಸ್ಕಾರ ನಡೆದ ಸ್ಮಶಾನವಾದ ರಾಜಾಸ್ ಕ್ಯಾಂಪ್‌ಗೆ 5.00 ಗಂಟೆಗೆ ತಲುಪಿತು. ಆರಂಭದಲ್ಲಿ ತುಂತುರು ತುಂತುರಾಗಿ ಸುರಿದ ಮಳೆ ಮುಂದೆ ಧಾರಾಕಾರವಾಗಿ ಸುರಿಯಿತು. ಈ ಮಳೆಯಲ್ಲೇ ಸಾವಿರಾರು ಜನರು ಕಾಂ.ಟಿ.ಎಸ್.ಮಣಿ ಚಿರಾಯುವಾಗಲಿ, ಸಿಪಿಐ(ಎಂ) ಜಿಂದಾಬಾದ್, ತೇನ್.ಸು.ಮಣಿ ಜಿಂದಾಬಾದ್, ಕಾಂ.ಟಿ.ಎಸ್.ಜಿಂದಾಬಾದ್ ಎಂದು ಘೋಷಣೆ ಕೂಗುತ್ತಲೇ ಸಾಗಿದರು. ರಸ್ತೆಯ ಇಕ್ಕೆಲಗಳಲ್ಲೂ ಜನಸಮೂಹ ಮೌನವಾಗಿ ನಿಂತು ನಾಯಕನನ್ನು ಬೀಳ್ಕೊಟ್ಟಿತು. ಸ್ಮಶಾನದಲ್ಲಿ ಸ್ಥಳೀಯ ಶಾಸಕ ರಾಜೇಂದ್ರನ್, ಮಾಜಿ ಶಾಸಕ ಭಕ್ತವತ್ಸಲಂ, ಜೆಎಸಿಯ ಇಕ್ಬಾಲ್ ಅಹಮ್ಮದ್, ಎಸ್.ಸಿ/ಎಸ್.ಟಿ ಅಸೋಸಿಯೇಷನ್ನಿನ ಗೌತಮ್, ಕಾಂ.ಮೀನಾಕ್ಷಿ ಸುಂದರಂ, ಕಾಂ.ಜಿ.ವಿ.ಎಸ್, ಕಾಂ.ಜಿ.ಎನ್ ಜನತೆಯನ್ನುದ್ದೇಶಿಸಿ ಮಾತಾಡಿ ಶ್ರದ್ಧಾಂಜಲಿ ಅರ್ಪಿಸಿದರು.

"ಕಳೆದ 4-5 ದಶಕಗಳ ಕಾಲ ಕಮ್ಯೂನಿಸ್ಟ್ ಚಳುವಳಿಯ ನೇತಾರನಾಗಿ ಐಹಿಕವಾಗಿ ಯಾವ ಆಸ್ತಿಯನ್ನು ಸಂಪಾದನೆ ಮಾಡದೆ ಜನತೆಯ ಅಪಾರವಾದ ಪ್ರೀತಿಯನ್ನು ಸಂಪಾದಿಸಿದ ಕಾಂ.ಟಿ.ಎಸ್.ಮಣಿಯವರು ಬಿಟ್ಟುಹೋದ ಕರ್ತವ್ಯಗಳನ್ನು ಮತ್ತು ಅವರು ಕಟ್ಟಿ ಬೆಳೆಸಿದ ಸಿಪಿಐ(ಎಂ) ಪಕ್ಷವನ್ನು ಮತ್ತು ಚಳುವಳಿಯನ್ನು ಬಲಿಷ್ಟವಾಗಿ ಕಟ್ಟುವುದೇ ಅವರಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ" ಎಂದು ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿಯುವರಾದ ಕಾಂ.ಜಿ.ಎನ್.ರವರು ಅಂತಿಮ ನಮನ ಸಲ್ಲಿಸುವಾಗ ನುಡಿದ ಮಾತುಗಳು ಕೆ.ಜಿ.ಎಫ್‌ನ ಸಂಗಾತಿಗಳಿಗೆ ಕಾಂ.ಟಿ.ಎಸ್.ಮಣಿಯವರ ಗೈರು ಹಾಜರಿಯಲ್ಲಿ ಕೆಲಸ ಮಾಡಲು ಆತ್ಮಸ್ಥೈರ್ಯ ತುಂಬಿ ಕಂಕಣಬದ್ಧರಾಗುವಂತೆ ಮಾಡುತ್ತದೆ.

- ವರದಿ : **ಅಚ್ಯುತ**

.........................ದೇಶ ನಿರೀಕ್ಷಿಸಿದ್ದೇನು?

ಪುಟ 6 ರಿಂದ

ಕಳೆಕೊಳ್ಳಬೇಕಾಗುತ್ತದೆ. ಅಷ್ಟೇ ಅಲ್ಲ, ಭಾರತ ತನ್ನ ಆರ್ಥಿಕವನ್ನು ಬೆಳೆಸಿ, ಅಸಮಾನತೆಗಳಿಂದ ತುಂಬಿದ ಅಂತರ್ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯನ್ನು ಕೊನೆಗೊಳಿಸಲು ಅಭಿವೃದ್ಧಿಶೀಲ ದೇಶಗಳ ಐಕ್ಯ ವೇದಿಕೆಗಳನ್ನು ಬಲಪಡಿಸಲು ಒಂದು ಸ್ವತಂತ್ರ ಪಾತ್ರವನ್ನು ವಹಿಸಬೇಕಾಗಿದೆ.

ಇರಾನ್- -ಪಾಕಿಸ್ತಾನ-ಭಾರತ ಅನಿಲ ಪೈಪ್‌ಲೈನ್ ಯೋಜನೆಯನ್ನು ಭಾರತ ಖಂಡಿತಾ ಜಾರಿಗೆ ತರುತ್ತದೆ ಎಂಬ ದೃಢ ನಿರ್ಧಾರವನ್ನು ಪ್ರಧಾನ ಮಂತ್ರಿಗಳು ಸ್ಪಷ್ಟವಾಗಿ ತಿಳಿಸಬೇಕು ಎಂದು ಎಲ್ಲರೂ ನಿರೀಕ್ಷಿಸುತ್ತಾರೆ. ವಿದ್ಯುಚ್ಛಕ್ತಿ ಭದ್ರತೆಗಾಗಿ ಭಾರತದ ಹುಡುಕಾಟಕ್ಕೆ ಅಮೆರಿಕಾ ಅಡ್ಡಿ ತರಲು ಸಾಧ್ಯವಿಲ್ಲ ಎಂದು ಅದಕ್ಕೆ ಹೇಳಬೇಕಾಗಿತ್ತು.

ಭಾರತದ ವಿದ್ಯುಚ್ಛಕ್ತಿಯ ಅಗತ್ಯಗಳಲ್ಲಿ ನಾಗರಿಕ ಪರಮಾಣು ಕಾರ್ಯಕ್ರಮ ಒಂದು ಪ್ರಮುಖ ಭಾಗ. ಈ ವಿಷಯವನ್ನು ಎಚ್ಚರದಿಂದ ಕಾಣುವುದು ಯುಪಿಎ ಸರ್ಕಾರದ ಮಟ್ಟಿಗೆ ವಿವೇಕಯುತವಾದದ್ದು. ಭಾರತಕ್ಕೆ ಉನ್ನತ ತಂತ್ರಜ್ಞಾನ ಒದಗಿಸುವ ಬಗ್ಗೆ ಅಮೆರಿಕಾ ಬಹಳ ನಿಯಂತ್ರಣಗಳನ್ನು ಹಾಕುವ ಧೋರಣೆ ಅನುಸರಿಸಿದೆ. 'ದ್ವಿವಿಧ ಬಳಕೆಯ' ತಂತ್ರಜ್ಞಾನವನ್ನು ಒದಗಿಸದೆ ಅದು ತಡೆ ಹಿಡಿದಿದೆ. ನಾಗರಿಕ ಪರಮಾಣು ಸಹಕಾರದ ಬಗ್ಗೆ ಯಾವುದೇ ನಿರ್ಧಾರ ಕೈಗೊಳ್ಳುವಾಗ ಒಂದು ಸ್ವತಂತ್ರ ಹಾಗೂ ಸ್ವಾವಲಂಬೀ ರೀತಿಯಲ್ಲಿ ಭಾರತದ ಪರಮಾಣು ವಿದ್ಯುತ್ ವಲಯದ ವಿಕಾಸವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿತ್ತು.


ತಪ್ಪು ಸಂಕೇತ ಹೋಗಿದೆ

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಖಾಯಂ ಸದಸ್ಯತ್ವಕ್ಕೆ ಭಾರತ ಅಭ್ಯರ್ಥಿಯಾಗಿದ್ದು ಅದಕ್ಕೆ ಅಮೆರಿಕಾದ ಬೆಂಬಲ ಪಡೆಯುವ ತವಕ ಯುಪಿಎ ಸರಕಾರದ್ದು. ಇದುವರೆಗೆ ಅಮೆರಿಕಾ ಭದ್ರತಾ ಮಂಡಳಿಯಲ್ಲಿ ಜಪಾನಿನ ಸದಸ್ಯತ್ವಕ್ಕೆ ಮಾತ್ರ ಬೆಂಬಲ ಘೋಷಿಸಿದೆ. ಇನ್ನೂ ಒಂದೆರಡು ದೇಶಗಳನ್ನು ತಾನು ಬೆಂಬಲಿಸಬಹುದು ಎಂದು ಅದು ಇತ್ತಿಚೆಗೆ ಸೂಚಿಸಿದೆ. ಇದು ಭಾರತ ಇನ್ನಷ್ಟು ರಿಯಾಯ್ತಿಗಳನ್ನು ನೀಡುವಂತೆ ಪುಸಲಾಯಿಸಲು ಹಾಗೂ ವಿಶ್ವಾದಲ್ಲಿ ಅದರ ಕಿರಿಯ ಪಾಲುದಾರನಾಗಲು ಸಮ್ಮತಿ ಸೂಚಿಸುವಂತೆ ಮಾಡುವ ಒಂದು ಸ್ಪಷ್ಟ ಪ್ರಯತ್ನ. ದುರದೃಷ್ಟವಶಾತ್, ಈಗಾಗಲೇ ಹತ್ತು ವರ್ಷಗಳಿಗೆ ಭಾರತ-ಅಮೆರಿಕಾ ರಕ್ಷಣಾ ಸಂಬಂಧಗಳ ಚೌಕಟ್ಟಿಗೆ ಸಹಿ ಮಾಡಿ ಭಾರತ ಈ ಅಮೆರಿಕನ್ ಕಾರ್ಯತಂತ್ರದಲ್ಲಿ ಶಾಮೀಲಾಗಲು ಸಿದ್ಧವಿದೆ ಎಂಬ ತಪ್ಪು ಸಂಕೇತ ಹೋಗುವಂತೆ ಮಾಡಿದೆ. ವಾಸ್ತವವಾಗಿ ಭಾರತ ಒಂದು ಸ್ವತಂತ್ರ ಶಕ್ತಿಯಾಗಿರುವುದರಿಂದ ಭದ್ರತಾ ಮಂಡಳಿಯಲ್ಲಿ ಪ್ರಾತಿನಿಧ್ಯ ಅಗತ್ಯವಾಗಿದ್ದು ಈ ರೀತಿ ಒಪ್ಪಿಗೆ ಸೂಚಿಸುವುದರಿಂದ ಭಾರತದ ವಿಶ್ವಾಸಾರ್ಹತೆಗೆ ಇದು ಕುಂದು ತರಬಹುದು.

ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಪ್ರಾತಿನಿಧ್ಯದ ಪ್ರಶ್ನೆಯನ್ನು ವಿಶ್ವಸಂಸ್ಥೆಯ ರಚನೆಯ ಪ್ರಜಾಪ್ರಭುತ್ವೀಕರಣದ ವಿಶಾಲ ಪ್ರಶ್ನೆಯಿಂದ ಪ್ರತ್ಯೇಕಿಸಿ ನೋಡಬಾರದು.

ಇತ್ತೀಚೆಗೆ ಅಭಿವೃದ್ಧಿಶೀಲ ದೇಶಗಳ ನಡುವೆ ಮತ್ತು ಮೂರನೇ ಜಗತ್ತಿನಲ್ಲಿ ಭಾರತದ ಪ್ರತಿಷ್ಠೆ ಮತ್ತು ಸ್ಥಾನಮಾನವನ್ನು ಹೇಗೆ ಮತ್ತೆ ಮಾನ್ಯ ಮಾಡಲಾಗುತ್ತಿದೆ ಎಂಬುದನ್ನು ನೋಡಿದ್ದೇವೆ. ಜಕಾರ್ತಾದಲ್ಲಿ ನಡೆದ ಬಾಂಡುಂಗ್ ಸಮ್ಮೇಳನದ 50ನೇ ವಾರ್ಷಿಕೋತ್ಸವದಂದು ಇದು ಸ್ವತಃ ಕಂಡುಬಂತು. ಪ್ರಧಾನಮಂತ್ರಿಗಳು ತನ್ನ ಭೇಟಿಯ ಕಾಲದಲ್ಲಿ ಅಮೆರಿಕಾದೊಂದಿಗೆ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸಲು ಕ್ರಮಗಳನ್ನು ಕೈಗೊಳ್ಳುವಾಗ ಭಾರತದ ಈ ಒಟ್ಟಾರೆ ಪಾತ್ರ ಹಾಗೂ ಸ್ಥಾನಮಾನವನ್ನು ಗಮನದಲ್ಲಿ ಇಟ್ಟುಕೊಳ್ಳುತ್ತಾರೆ ಎಂದು ದೇಶ ನಿರೀಕ್ಷಿಸಿತ್ತು.

ವಂಚಕ ಕಾರ್ಖಾನೆಯ ಹೆಸರೇ ಮಾಯ!



ತಮ್ಮ ಮೇಲೆ ನಡೆಯುತ್ತಿರುವ ಅಮಾನುಷ ಶೋಷಣೆಯ ವಿರುದ್ಧ ಟಯೋಟಾ ಕಿರ್ಲೋಸ್ಕರ್ ಕಾರ್ಖಾನೆ ಕಾರ್ಮಿಕವರ್ಗ ನಡೆಸಿರುವ ಹೋರಾಟದ ಕುರಿತು ಈಗಾಗಲೇ ಐಕ್ಯರಂಗದಲ್ಲಿ ವರದಿಯಾಗಿದೆ. ಮುಂದುವರೆದ ಚಳುವಳಿಯ ಭಾಗವಾಗಿ ಇದೇ ಜೂನ್ 19 ರಂದು ಬೆಂಗಳೂರಿನ ಬನಪ್ಪ ಪಾರ್ಕ್ ಮೈದಾನದಲ್ಲಿ ವಿವಿಧ ಕಾರ್ಮಿಕ ನೌಕರ, ಜನಪರ ಸಂಘಟನೆಗಳು ಪಾಲ್ಗೊಂಡ ಸಮಾವೇಶ ನಡೆಯಿತು. ಟಯೋಟ ಕಿರ್ಲೋಸ್ಕರ್ ಮೋಟಾರ್ ಕಾರ್ಮಿಕರ ಹೋರಾಟ ಬೆಂಬಲಿಸಿ ನಡೆದ ಈ ಬೃಹತ್ ಸೌಹಾರ್ದ ಸಮಾವೇಶದ ಬಗ್ಗೆ ರಾಜ್ಯದ ಕೆಲವೇ ಕೆಲವು ಪತ್ರಿಕೆಗಳು ಪ್ರಕಟಿಸಿವೆ. ಸೂರ್ಯೋದಯ ಪತ್ರಿಕೆಯು 'ಟಿ.ಕೆ.ಎಂ.ಕಂಪನಿ ಕಾರ್ಮಿಕರ ಸಮಾವೇಶದಲ್ಲಿ ಕಾರ್ಮಿಕ ಮುಖಂಡರಾದ ಶಿವಶಂಕರ್, ಪ್ರಕಾಶ್, ಶಾಸಕ ಜಿ.ವಿ. ಶ್ರೀರಾಮರೆಡ್ಡಿ ಮುಂತಾದವರು ಭಾಗವಹಿಸಿದ್ದರು' ಎಂದು ಫೋಟೋ ಸಹಿತ ಪ್ರಕಟಿಸಿದೆ. ಕಾರ್ಮಿಕರ ಸಮಸ್ಯೆಗಳ ಮತ್ತು ಹೋರಾಟದ ಬಗ್ಗೆ ವಿವರಣೆ ಇಲ್ಲ. ಒಂದೊಮ್ಮೆ ರಾಜ್ಯದ ನಂ.1 ದಿನಪತ್ರಿಕೆ ಎಂದು ಹೆಸರು ಮಾಡಿದ್ದ 'ಪ್ರಜಾವಾಣಿ'ಯು ಸಮಾವೇಶದ ಬಗ್ಗೆ ಭಾಗವಹಿಸಿದ ಕಾರ್ಮಿಕರ ಫೋಟೋ ಸಹಿತ ವರದಿ ಮಾಡಿದೆ. ಅದರಲ್ಲಿ ಕಾರ್ಖಾನೆ ಹೆಸರು ನಮೂದಿಸದೆ 'ಬಿಡದಿ ಬಳಿ ಇರುವ ಕಾರ್ಖಾನೆ' ಎಂದಿದೆ. ಕಾರ್ಮಿಕರನ್ನು ಅಮಾನುಷ ರೀತಿಯಲ್ಲಿ ಶೋಷಿಸುತ್ತಿರುವ ಈ ಕಾರ್ಖಾನೆಯ ಹೆಸರನ್ನು ಈ ರೀತಿ ಮರೆಮಾಚಿರುವುದರ ಹಿಂದಿನ ಉದ್ದೇಶವೇನು? ಹೆಸರು ಪ್ರಕಟಿಸದಿರಲು ಪತ್ರಿಕೆಗೆ ಇರುವ ಅಡ್ಡಿಯೇನು?

ಬೇಡಿಕೆಗಳಿಗೆ ತಾತ್ವಿಕ ಒಪ್ಪಿಗೆ ಪಡೆದುಕೊಂಡ ಪ್ರೇರಕರ ಹೋರಾಟ

ಬಾಕಿ ವೇತನ ಬಿಡುಗಡೆ, ವೇತನ ಹೆಚ್ಚಳ; ವಾರದ ರಜೆ, ಮಹಿಳಾ ಪ್ರೇರಕಿಯರಿಗೆ ಹೆರಿಗೆ ರಜೆ ಮತ್ತು ಹೆರಿಗೆ ಭತ್ಯೆ, ಇಲಾಖೆಯಲ್ಲಿ 15 ವರ್ಷಗಳಿಂದ ದುಡಿಯುತ್ತಿರುವವರನ್ನು ಖಾಯಂಗೊಳಿಸುವದು; ವಿಮಾ ಸೌಲಭ್ಯ ಇತ್ಯಾದಿ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ 2005 ಜುಲೈ 4 ರಂದು ರಾಜ್ಯದ ಹಲವಾರು ಜಿಲ್ಲೆಗಳಿಂದ ಬಂದ ಸುಮಾರು 1 ಸಾವಿರ ಮುಂದುವರಿಕೆ ಶಿಕ್ಷಣ ಕೇಂದ್ರಗಳ ಪ್ರೇರಕರು - ಸಹ ಪ್ರೇರಕರು ಬೆಳಿಗ್ಗೆ 11.30ಕ್ಕೆ ಬೆಂಗಳೂರು ನಗರದ ಮೆಜೆಸ್ಟಿಕ್ ಹತ್ತಿರದ ಚಿಕ್ಕಲಾಲ್‌ಬಾಗಿನಿಂದ ಮೆರವಣಿಗೆ ಹೊರಟು, ಕರ್ನಾಟಕ ರಾಜ್ಯ ಲೋಕ್ ಶಿಕ್ಷಣ ನಿರ್ದೇಶನಾಲಯ ಕಛೇರಿ ಎದುರು ಪೋಲೀಸ್ ಬೆಂಗಾವಲು ಎದುರಿಸಿ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದರು.

ಕರ್ನಾಟಕ ರಾಜ್ಯ ಸಾಕ್ಷರತಾ ಪ್ರೇರಕರ ಸಂಘ ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್‌ಐ) ರಾಜ್ಯ ಸಮಿತಿಗಳ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಈ ಸಾಮೂಹಿಕ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವನ್ನು ಡಿವೈಎಫ್‌ಐ ಸಂಸ್ಥಾಪಕ ಮುಖಂಡರು ಹಾಗೂ ಸಿಪಿಐ(ಎಂ) ಪಕ್ಷದ ಶಾಸಕರೂ ಆದ ಜಿ.ವಿ.ಶ್ರೀರಾಮರೆಡ್ಡಿ ಉದ್ಘಾಟಿಸಿದರು.

ಧರಣಿ ನಿರತರನ್ನು ಉದ್ದೇಶಿಸಿ ಮಾತನಾಡಿದ ಶಾಸಕರು, ಪ್ರೇರಕರ ಬೇಡಿಕೆಗಳು ನ್ಯಾಯಯುತವಾಗಿದ್ದು, 30 ತಿಂಗಳಿಂದ ಗೌರವಧನ ಸರ್ಕಾರ ಬಾಕಿ ಉಳಿಸಿಕೊಂಡಿರುವದು ಸರಿಯಲ್ಲ. ಆದಷ್ಟು ಬೇಗ ಸಮಸ್ಯೆ ಪರಿಹರಿಸಿ, ಎಂದು ಸರ್ಕಾರಕ್ಕೆ ತಾಕೀತು ಮಾಡಿದರು. ನಿಮ್ಮ ಹೋರಾಟಕ್ಕೆ ನನ್ನ ನೈತಿಕ ಬೆಂಬಲವಿದೆ. ಈ ಬಗ್ಗೆ ಸದನದಲ್ಲಿಯೂ ಸರ್ಕಾರದ ಗಮನಕ್ಕೆ ತರುತ್ತೇನೆಂದು ಭರವಸೆ ನೀಡಿದರು.

ಸಾಕ್ಷರತಾ ಪ್ರೇರಕರ ಸಂಘದ ರಾಜ್ಯಾಧ್ಯಕ್ಷರಾದ ಕೆ.ಮಹಾಂತೇಶ, ರಾಜ್ಯ ಪ್ರಧಾನ ಕಾರ್ಯದರ್ಶಿ ಶಿವಶರಣಪ್ಪಾ ಸಂತಾಜಿ, ರಾಜ್ಯ ಖಜಾಂಜಿ ಎಂ.ಡಿ.ಜಾಕೀರ ಹುಸೇನ ಖಾದ್ರಿ ಹಾಗೂ ಡಿವೈಎಫ್‌ಐನ ರಾಜ್ಯಾಧ್ಯಕ್ಷರಾದ ಕೆ.ಎನ್.ಉಮೇಶ್ ಧರಣಿಯುನ್ನುದ್ದೇಶಿಸಿ ಮಾತನಾಡಿದರು.

ಪ್ರೇರಕರ ಈ ಅನಿರ್ದಿಷ್ಟ ಧರಣಿ ಹಾಗೂ ತೀವ್ರ ಹೋರಾಟಕ್ಕೆ ಮಣಿದು ಕೊನೆಗೂ ಲೋಕಶಿಕ್ಷಣ ನಿರ್ದೇಶನಾಲಯದ ನಿರ್ದೇಶಕಿ ಡಾ. ನಾಗಲಾಂಬಿಕಾ ದೇವಿಯವರು ಪ್ರತಿಭಟನಾ ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಿದರು. ಪ್ರೇರಕರ ಮುಖಂಡರೊಂದಿಗೆ ಚರ್ಚಿಸಿದ ನಂತರ ಅವರು ವಾರದ ರಜೆ ನೀಡಲು ಗ್ರಾಮ ಸಾಕ್ಷರತಾ ಸಮಿತಿಗಳಿಗೆ ಸುತ್ತೋಲೆ ಕಳುಹಿಸುವದು; ಮಹಿಳಾ ಪ್ರೇರಕರಿಗೆ ಹೆರಿಗೆ ರಜೆಗಾಗಿ ಕೇಂದ್ರದ ಮಾನವ ಸಂಪನ್ಮೂಲ ಇಲಾಖೆಗೆ ಪತ್ರ ಬರೆಯುವುದು ಅಲ್ಲದೆ ವಿವಿಧ ಇಲಾಖೆಗಳಲ್ಲಿ ನಡೆಯುವ ವಿವಿಧ ತರಬೇತಿ ಕಾರ್ಯಕ್ರಮಗಳಿಗೆ ಪ್ರೇರಕರನ್ನು ಬಳಸಿಕೊಳ್ಳಲು ಸರಕಾರದ ಮೇಲೆ ಒತ್ತಡ ತರುವುದು, ಹಾಗೂ ಬಾಕಿ ಇರುವ ಗೌರವಧನದ ಉದ್ದೇಶಕ್ಕಾಗಿ ಪರಿವೀಕ್ಷಣಾ ತಂಡ ರಚಿಸಿ ಮೂರು ತಿಂಗಳಲ್ಲಿ ವರದಿ ತರಿಸಿಕೊಂಡು ಶೀಘ್ರದಲ್ಲಿ ಇತ್ಯರ್ಥಪಡಿಸುವುದಾಗಿ ತಿಳಿಸಿದರು. ಬೇಡಿಕೆಗಳ ಈಡೇರಿಕೆಗೆ ತಾತ್ವಿಕ ಒಪ್ಪಿಗೆ ನೀಡಿದ್ದರ ಹಿನ್ನೆಲೆಯಲ್ಲಿ ಅನಿರ್ದಿಷ್ಟ ಹೋರಾಟವನ್ನು ಹಿಂತೆಗೆದುಕೊಳ್ಳಲಾಯಿತು ಮತ್ತು ಮೂರು ತಿಂಗಳೊಳಗಾಗಿ ಅವು ಜಾರಿಯಾಗದಿದ್ದಲ್ಲಿ ಮನಃ ಹೋರಾಟಕ್ಕೆ ಮುನ್ನಡೆಯಲು ಧರಣಿ ನಿರತ ಪ್ರೇರಕರ ಸಭೆಯು ನಿರ್ಧರಿಸಿತು.

ಒಂದು ವರ್ಷದ ಯೋಜನೆಗೆ (ಕಾರ್ಯಕ್ರಮಕ್ಕೆ) ನಾಲ್ಕು ವರ್ಷ ತೆಗೆದುಕೊಂಡ ಇಲಾಖೆ

ಕೇಂದ್ರ-ರಾಜ್ಯ ಸರ್ಕಾರಗಳ ಸಾಕ್ಷರತಾ ಆಂದೋಲನದ ಭಾಗವಾಗಿ ರಾಜ್ಯದ 24 ಜಿಲ್ಲೆಗಳಲ್ಲಿ 25 ನಿರಂತರ ಕಲಿಕಾ ಯೋಜನೆಗಳಡಿ ಆರಂಭವಾಗಿರುವ 14935 ಮುಂದುವರಿಕೆ ಶಿಕ್ಷಣ ಕೇಂದ್ರಗಳ ಹಾಗೂ 1534 ನೋಡಲ್ ಕೇಂದ್ರಗಳಲ್ಲಿ ದುಡಿಯುತ್ತಿರುವ 32,938 ಪ್ರೇರಕರು, ಉಪ ಪ್ರೇರಕರು, ನೋಡಲ್ ಪ್ರೇರಕರು, ನೋಡಲ್ ಸಹ ಪ್ರೇರಕರು ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿ ಕೊಂಡಿದ್ದಾರೆ. ಬೆಳಗಾಂ ಹಾಗೂ ಹಾಸನ ಈ ಎರಡು ಜಿಲ್ಲೆಗಳಲ್ಲಿ ಹೊಸದಾಗಿ ಇನ್ನೆರಡು ನಿರಂತರ ಕಲಿಕಾ ಯೋಜನೆ ಪ್ರಾರಂಭಿಸಿದ್ದು, ಗುಲಬರ್ಗಾ ಜಿಲ್ಲೆ ಹೊರತುಪಡಿಸಿ ಒಟ್ಟು 26 ಜಿಲ್ಲೆಗಳಲ್ಲಿ 27 ನಿರಂತರ ಯೋಜನೆಗಳು ಪ್ರಾರಂಭಗೊಂಡಂತಾಗಿದೆ. ಈ ಕೇಂದ್ರಗಳ ಮೂಲಕ ಕಲಿಕೆ ಓದು- ಬರಹ, ವಾಚನಾಲಯ, ಗ್ರಂಥಾಲಯ, ಕೌಶಲ್ಯಾಭಿವೃದ್ಧಿ ತರಬೇತಿ, ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆ, ಶ್ರಮದಾನ, ಸಮುದಾಯ ಸೇವಾಕಾರ್ಯ, ಅಬಿವೃದ್ಧಿ ಕಾರ್ಯಕ್ರಮಗಳ ಮಾಹಿತಿ ಪ್ರಸರಣ ಮುಂತಾದ ಕಾರ್ಯಕ್ರಮಗಳು ಅನುಷ್ಠಾನಗೊಳಿಸಲಾಗುತ್ತಿದ್ದು, ಶ್ರಮ ಹಾಗೂ ಸಹಕಾರದ ಫಲವಾಗಿ ರಾಜ್ಯದಲ್ಲಿ ಸಾಕ್ಷರತಾ ಪ್ರಮಾಣವು ಶೇ.67ರಷ್ಟು ತಲುಪಿದೆ.

ರಾಜ್ಯದಲ್ಲಿ ಸದರಿ ಯೋಜನೆಯು 5 ವರ್ಷಕ್ಕಾಗಿ ಐದು ಹಂತಗಳಲ್ಲಿ ಜಾರಿಗೊಳಿಸಿದ್ದು, ಮೊದಲ ಹಂತದಲ್ಲಿ ಬಾಗಲಕೋಟೆ, ದಾವಣಗೆರೆ, ಕೊಪ್ಪಳ, ತುಮಕೂರು, ಚಿತ್ರದುರ್ಗ, ಬೀದರ, ಹಾವೇರಿ, ಮೈಸೂರು, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಬಳ್ಳಾರಿ - ಈ 12 ಜಿಲ್ಲೆಗಳು 2000-01ರಲ್ಲಿ ಪ್ರಾರಂಭಿಸಲಾಗಿರುತ್ತದೆ. 2001-02ರಲ್ಲಿ ಎರಡನೆ ಹಂತದಲ್ಲಿ ಮಂಡ್ಯ, ಶಿವಮೊಗ್ಗ, ಕೊಡಗು, ರಾಯಚೂರು, ಬಿಜಾಪುರ, ಮತ್ತು ಚಿಕ್ಕಮಗಳೂರು - ಈ 7 ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿರುತ್ತದೆ.

2002-03ರಲ್ಲಿ ಮೂರನೆ ಹಂತದಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಬೆಂಗಳೂರು ಸಿಟಿ, - ಈ ನಾಲ್ಕು ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿರುತ್ತದೆ. 2003-04ರಲ್ಲಿ ನಾಲ್ಕನೆ ಹಂತದಲ್ಲಿ ಗದಗ ಮತ್ತು ಧಾರವಾಡ - ಈ ಎರಡು ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿರುತ್ತದೆ.

2004-05ರಲ್ಲಿ ಐದನೆ ಹಂತದಲ್ಲಿ ಬೆಳಗಾಂ ಮತ್ತು ಹಾಸನ ಈ ಎರಡು ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿರುತ್ತದೆ. ಗುಲಬರ್ಗಾ ಜಿಲ್ಲೆಯಲ್ಲಿ ಮಾತ್ರ ಸದರಿ ಯೋಜನೆ ಬರುವ ಅಕ್ಟೋಬರ ತಿಂಗಳಲ್ಲಿ ಪ್ರಾರಂಭಗೊಳ್ಳುವುದಾಗಿ ತಿಳಿದು ಬಂದಿರುತ್ತದೆ.

2000-01ರಲ್ಲಿ ಯೋಜನೆಯ ಪ್ರಾರಂಭದಲ್ಲಿ ಮೊದಲನೆ ವರ್ಷದ ಪ್ರಥಮ ಕಂತಿನಲ್ಲಿ ಬಿಡುಗಡೆಯಾದ ಹಣದಲ್ಲಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಸಾಕ್ಷರತಾ ಸಮಿತಿಗಳು ಲೋಕಶಿಕ್ಷಣ ನಿರ್ದೇಶನಾಲಯದ ಮಾರ್ಗದರ್ಶಿಯಂತೆ 6 ತಿಂಗಳ ಗೌರವಧನ ಬಿಡುಗಡೆ ಮಾಡಿರುತ್ತವೆ. ಪುನಃ ಮೊದಲನೆ ವರ್ಷದ ಎರಡನೆ ಕಂತಿನ ಅನುದಾನ ಕೇಂದ್ರದಿಂದ ಬಿಡುಗಡೆಯಾದಾಗ ಮತ್ತೇ 6 ತಿಂಗಳ ಗೌರವಧನ, ಪತ್ರಿಕೆ, ವಿದ್ಯುತ್ ಬಿಲ್ಲು ಪ್ರೇರಕರಿಗೆ ನಿಡಿರುತ್ತಾರೆ. ಈ ಒಂದು ವರ್ಷದ ಪ್ರಕ್ರಿಯೆ ಮುಗಿಸಲು ಇಲಾಖೆ 2000-01, 2001-02, 2002-03, 2003-04 ಹೀಗೆ ನಾಲ್ಕು ವರ್ಷಗಳ ಅವಧಿ ತೆಗೆದುಕೊಂಡು ಕೇವಲ ಒಂದು ವರ್ಷದ ಗೌರವ ಧನ ಪಾವತಿಸಿರುತ್ತದೆ. ಬಾಕಿ ಇರುವ ಗೌರವ ಧನ, ವಾರದ ರಜೆ ಇತ್ಯಾದಿ ಬೇಡಿಕೆಗಳ ಈಡೇರಿಕೆಗೆ ಪಣ ತೊಟ್ಟ ಪ್ರೇರಕರ ಸಂಘ ಮತ್ತು ಡಿವೈಎಫ್‌ಐ ರಾಜ್ಯ ಸಮಿತಿಗಳ ನೇತೃತ್ವದಲ್ಲಿ 2003ರ ಮೇ ತಿಂಗಳಿಂದ ಹೋರಾಟ ನಡೆಸುತ್ತ ಬರಲಾಗಿದ್ದು, 2003ರ ಅಕ್ಟೋಬರ 9ರ ವಿಧಾನಸೌಧ ಚಲೋ, 2004 ಅಕ್ಟೋಬರ 15ರ ವಿಧಾನಸೌಧ ಚಲೋ, 16 ರಂದು ಲೋಕ ಶಿಕ್ಷಣ ನಿರ್ದೇಶನಾಲಯಕ್ಕೆ ಮುತ್ತಿಗೆಯಂತಹ ಹೋರಾಟಗಳನ್ನು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿ ನಡೆಸಲಾಗಿದೆ. ಕೇಂದ್ರ ಸರ್ಕಾರದ ಅನುದಾನ ಬಿಡುಗಡೆಗಾಗಿ ಕೊನೆಗೆ ಸಂಘಟನೆಯು 2004 ನವೆಂಬರ 4 ರಂದು ರಾಜ್ಯದ ಸಾವಿರಾರು ಪ್ರೇರಕರು ದೇಹಲಿಯಲ್ಲಿ ಧರಣಿ ನಡೆಸಿ, ಕೇಂದ್ರ ಮಾನವ ಸಂಪನ್ಮೂಲ ಸಚಿವರಾದ ಅರ್ಜುನ್ ಸಿಂಗ್ ಅವರಿಗೆ ಮನವಿ ಸಲ್ಲಿಸಿ ರಾಜ್ಯಸಭೆಯ ಸದಸ್ಯರಾದ ಸಿಪಿಐ(ಎಂ)ನ ವಿಜಯರಾಘವನ್ ಸಮ್ಮುಖದಲ್ಲಿ ಮಾತುಕತೆ ನಡೆಸಿದ ಪರಿಣಾಮ ರಾಜ್ಯಕ್ಕೆ ಬಿಡುಗಡೆಯಾಗಬೇಕಿದ್ದ ಅನುದಾನದಲ್ಲಿ ಸುಮಾರು 27 ಕೋಟಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ.

ಸಾಕ್ಷರತಾ ಪ್ರೇರಕರ ಬೃಹತ್ ಪ್ರತಿಭಟನಾ ಮೆರವಣಿಗೆ



'ಬೇಲೂರು ಘೋಷಣೆ'

ಬಾಕಿ ವೇತನ ನೀಡದ ಹೊರತು ಅವಧಿಗೆ ಮುನ್ನ ಕೇಂದ್ರಗಳನ್ನು ಗ್ರಾಮಪಂಚಾಯತಿಗೆ ವಹಿಸಬಾರದೆಂದು ಹಲವಾರು ಸಲ ಹೋರಾಟದ ಮೂಲಕ ಕೋರಲಾಗಿದ್ದರೂ, ಬೇಲೂರು ಘೋಷಣೆಯ ಭಾಗವಾಗಿ 2004 ಏಪ್ರಿಲ್ 1 ರಿಂದ ಸರ್ಕಾರ ಅವಧಿಯು ಪೂರ್ಣಗೊಳ್ಳುವ ಮುನ್ನವೇ ಕೇಂದ್ರಗಳನ್ನು ಪಂಚಾಯತಿಗೆ ವಹಿಸಲಾಗಿದೆ. ಅನುದಾನ ಬಿಡುಗಡೆಯಾಗಿದ್ದರೂ ಸಹಾ ಪಂಚಾಯತಿಗಳು ಹಿಂದಿನ ಬಾಕಿ ವೇತನಕ್ಕೂ ತಮಗೂ ಸಂಬಂಧವಿಲ್ಲ. ಮುಂದಿನ ವೇತನವಷ್ಟೆ ತಮ್ಮ ಜವಾಬ್ದಾರಿ ಎಂದು ಹೇಳುತ್ತಿವೆ.

ಆದರೆ ವಾಸ್ತವ ಸತ್ಯವೆಂದರೆ 2000-01ರಲ್ಲಿ ಪ್ರಾರಂಭಿಸಿದ ಒಂದು ವರ್ಷದ ಅವಧಿ ಪ್ರಸಕ್ತ ಸಾಲಿನಲ್ಲಿ ಮುಗಿಸದೆ 2004-05ರವರೆಗೆ ತೆಗೆದುಕೊಂಡಿದ್ದು, ಅಲ್ಲದೆ ಪ್ರೇರಕರನ್ನು ಕೆಲಸಕ್ಕೆ ತೊಡಗಿಸಿಕೊಂಡಿರುತ್ತಾರೆ. ಬಿಡುಗಡೆಯಾದ ಅನುದಾನ ಎರಡನೆ ವರ್ಷ ಮೊದಲನೆ ಕಂತು ಆಗಿರುವುದರಿಂದ 1.4.2005 ರಿಂದ ಎರಡನೆ ವರ್ಷವೆಂದು ಪರಿಗಣಿಸಲು ಕೇಮದ್ರ ಸರ್ಕಾರ ಸೂಚಿಸಿರುವುದರಿಂದ, ಸದರಿ ಹಣ ಹಿಂದಿನ ಬಾಕಿ ವೇತನ ನೀಡಲಗುವುದಿಲ್ಲ. ಹಿಂದಿನ ಬಾಕಿಗೂ ನಮಗೂ ಸಂಬಂಧವಿಲ್ಲವೆಂಬುದನ್ನು. ಅಲ್ಲದೆ ಒಂದು ವರ್ಷದ ಕಾರ್ಯಕ್ರಮ ನಾಲ್ಕು ವರ್ಷಗಳವರೆಗೆ ನಡೆಸಿದ್ದು ಯಾಕೆ? ಎಂದು ಕೇಂದ್ರ ಸರಕಾರ ಕೂಡ ನಿರ್ದೇಶನಾಲಯಕ್ಕೆ ಪತ್ರ ಬರೆದಿರುತ್ತದೆ.. ಇದರಿಂದಾಗಿ ಪ್ರೇರಕರ ಬಾಕಿ ವೇತನವನ್ನೆ ಇಲ್ಲದಾಗಿಸುವ ಹುನ್ನಾರವನ್ನು ಸರ್ಕಾರಗಳು ಹಾಗೂ ಇಲಾಖೆ ನಡೆಸಿವೆ. ಹೀಗಾಗಿ 2002, 2003 ಮತ್ತು 2004ನೇ ಸಾಲಿನ 36 ತಿಂಗಳ ಪ್ರೇರಕರ- ಸಹ ಪ್ರೇರಕ ಬಾಕಿ ಇರುವ ಧನದ ವಿಷಯ ಮತ್ತಷ್ಟು ಗೌರವ ಕಗ್ಗಂಟಾಗಿದೆ. ಆಯಾ ಜಿಲ್ಲಾ ಸಾಕ್ಷರತಾ ಸಮಿತಿಗಳು ಮತ್ತು ಲೋಕಶಿಕ್ಷಣ ನಿರ್ದೇಶನಾಲಯಕ್ಕೆ ಬಂದ ಅನುದಾನ ಬಳಸದೆ ನಾಲ್ಕು ವರ್ಷಗಳವರೆಗೆ ಬ್ಯಾಂಕಿನಲ್ಲಿಟ್ಟು ಬಡ್ಡಿ ತಿಂದದ್ದು ಒಂದೆಡೆಯಾದರೆ, ಬಳಕೆ ಪ್ರಮಾಣ ಪತ್ರ ಮತ್ತು ಆಡಿಟ್ ವರದಿ ಕಳಿಸದೆ ಇರುವುದು ಇಷ್ಟೆಲ್ಲಾ ಅವಾಂತರಕ್ಕೆ ಕಾರಣ.

ಸದರಿ ಸಮಸ್ಯೆಯನ್ನು ವಿವರವಾಗಿ ಚರ್ಚಿಸಿ, ಒಂದು ನಿರ್ಧಾರಕ್ಕೆ ಬಂದ ಸಂಘವು ಒಂದು ಪರಿಹಾರ ಸೂತ್ರವನ್ನು ತಯಾರಿಸಿ, ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ರಾಜ್ಯದ ಹಲವಾರು ಜಿಲ್ಲೆಗಳ ಅನುದಾನದ ಮೇಲಿನ ಬಡ್ಡಿ ಹಣ ರಾಷ್ಟ್ರೀಯ ಸಾಕ್ಷರತಾ ಮಿಷನ್‌ದಲ್ಲಿ ಜಮಾ ಇರುವುದರಿಂದ, ಲೋಕಶಿಕ್ಷಣ ನಿರ್ದೇಶನಾಲಯ ಮಾನವೀಯತೆಯ ಆಧಾರದಲ್ಲಿ, ಈಗಿರುವ ಪ್ರೇರಕರು ತರಬೇತಿ ಪಡೆದಿರುವವರಾಗಿರುವ ಕಾರಣ, ಉತ್ಸಾಹ ಕಳೆದುಕೊಳ್ಳಬಾರದೆಂಬ ಉದ್ದೇಶದಿಂದ ಈ ಹಣವನ್ನು ಬಾಕಿ ಗೌರವಧನದ ಬಾಬ್ತಿಗ ನೀಡಲು ಕೋರಿ ಕೇಂದ್ರದ ಮಾನವ ಸಂಪನ್ಮೂಲ (ಎನ್.ಎಲ್.ಎಂ.) ಇಲಾಖೆಗೆ ಕಳುಹಿಸಿದರೆ, ಸಂಘದಿಂದ ನಾವು ಸಹಾ ರಾಜ್ಯ ಸರಕಾರಕ್ಕೆ ಹಾಗೂ ಕೇಂದ್ರಕ್ಕೆ ಒತ್ತಡ ಹೇರಿ, ಹೋರಾಡುವುದಾಗಿ ತಿಳಿಸಲಾಗಿದೆ.

ವಿಶೇಷ ಅನುದಾನಕ್ಕೆ ಪ್ರಸ್ತಾವನೆ

ಅದೇ ರೀತಿಯಲ್ಲಿ ಇಲಾಖೆಯಿಂದ ರಾಜ್ಯ ಸರಕಾರಕ್ಕೆ ವಿಶೇಷ ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸುವುದು. ಪ್ರೇರಕರು ತೀವ್ರ ಸಂಕಷ್ಟಕ್ಕೆ ಒಳಗಾಗಿರುವುದರಿಂದ ಸರಕಾರ ಮತ್ತು ಇಲಾಖೆ ಮಾತುಕತೆ ನಡೆಸಿ ರಾಜ್ಯದಲ್ಲಿರುವ 32938 ಪ್ರೇರಕರನ್ನು ಆದಷ್ಟು ಶೀಘ್ರದಲ್ಲಿ ಸಾಮೂಹಿಕ ವಿಮಾ ಯೋಜನೆಗೆ ಒಳಪಡಿಸುವ ಕ್ರಮ ವಹಿಸಬೇಕೆಂಬ ಪ್ರಸ್ತಾವನೆಯನ್ನು ಇಲಾಖೆ ಮುಂದಿರಿಸಲಾಗಿದೆ.

ಇದಕ್ಕಾಗಿ ಇಲಾಖೆ ಪ್ರೇರಕರಿಗೆ ಕೊಡುವ ವೇತನದಲ್ಲಿ ಕಡಿತಗೊಳಿಸಿ ಪ್ರತಿ ಪ್ರೇರಕನಿಂದ 100/- ರೂ. ವಾರ್ಷಿಕ ಪ್ರೀಮಿಯಮ್ ತುಂಬಬೇಕು. ಉಳಿದ 100/- ರೂ. ಕೇಂದ್ರ ಸರಕಾರ ಭರಿಸುತ್ತದೆ. ಇದರಿಂದ ಆಕಸ್ಮಿಕ ಸಾವಿಗೀಡಾದರೆ ವಾರಸುದಾರರಿಗೆ ರೂ. 20 ಸಾವಿರ, ಅಪಘಾತದಲ್ಲಿ ಮೃತಪಟ್ಟರೆ, ಎರಡು ಕಾಲು, ಎರಡು ಕೈ, ಎರಡು ಕಣ್ಣು ಕಳೆದುಕೊಂಡರೆ, ರೂ.50 ಸಾವಿರ, ಯಾವುದಾದರೊಂದು ಅಂಗ ಕಳೆದುಕೊಂಡರೆ ರೂ. 25 ಸಾವಿರ ಪರಿಹಾರ ಧನ ಸಿಗುತ್ತದೆ; ಅಲ್ಲದೆ ಪ್ರೇರಕರ/ ಉಪಪ್ರೇರಕರ ಮಕ್ಕಳು 9ನೇ, 10ನೇ, 11ನೇ ಮತ್ತು 12ನೇ ತರಗತಿಯಲ್ಲಿ ಓದುತ್ತಿದ್ದರೆ, ಅಂತವರ ಇಬ್ಬರು ಮಕ್ಕಳಿಗೆ 3 ತಿಂಗಳಿಗೆ ತಲಾ ರೂ. 300/- ವಿದ್ಯಾರ್ಥಿವೇತನ ಸಿಗುತ್ತದೆ. ಈ ಜನಶ್ರೀ ವಿಮಾ ಯೋಜನೆಗೆ ಇಲಾಖೆ ಕ್ರಮವಹಿಸಬೇಕಿದೆ.

ಈ ಅನಿರ್ದಿಷ್ಟ ಪ್ರತಿಭಟನಾ ಧರಣಿಯ ನೇತೃತ್ವವನ್ನು ಕರ್ನಾಟಕ ರಾಜ್ಯ ಸಾಕ್ಷರತಾ ಪ್ರೇರಕರ ಸಂಗದ ರಾಜ್ಯಾಧ್ಯಕ್ಷ ಕೆ.ಮಹಾಂತೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿ, ಎಸ್.ವಿ.ಸಂತಾಜಿ, ರಾಜ್ಯ ಖಜಾಂಚಿ ಜಾಕೀರ ಹುಸೇನ, ಡಿವೈಎಫ್‌ಐ ರಾಜ್ಯ ಅಧ್ಯಕ್ಷರಾದ ಕೆ.ಎನ್.ಉಮೇಶ/ ಬೀದರನ ಬಸವರಾಜ ಸ್ವಾಮಿ, ಮನೋಹರ ಮೋರೆ, ಮಾರುತಿ ದಾಸರವಾಡಿ, ರಾಯಚೂರಿನ ಕೆ.ಜಿ.ವೀರೇಶ, ಬೆಂಗಳೂರಿನ ದನರಾಜ್, ಶಂಕ್ರಿಮ್ಮ ತುಮಕೂರಿನ ರವೀಂದ್ರ, ರೇವಣಾರಾಧ್ಯ, ಸುಬ್ಬಣ್ಣಾ, ಚಿತ್ರದುರ್ಗದ ಮಂಜುನಾಥ, ನವಕೋಟಿ, ಕೊಪ್ಪಳದ ಗೈಬುಸಾಬ್, ಮಂಡ್ಯದ ಕುಮಾರ, ಮುದ್ದೇಗೌಡ, ಕೊಡಗಿನ ವಾರಿಜಾ ಭರತ್, ಜಗದೀಶ, ಫಾತಿಮಾ, ಉಡುಪಿಯ ಗಣೇಶ; ಸಾವಿತ್ರಿ, ಇನ್ನೂ ಹಲವಾರು ಜಿಲ್ಲೆಯ ಮುಖಂಡರುಗಳು ವಹಿಸಿ ಹೋರಾಟವನ್ನು ಯಶಸ್ವಿಗೊಳಿಸಿದರು.

ವರದಿ ಶಿವಶರಣಪ್ಪಾ. ವಿ. ಸಂತಾಜಿ

ರಾಜ್ಯ ಪ್ರಧಾನ ಕಾರ್ಯದರ್ಶಿ, ಸಾಕ್ಷರತಾ ಪ್ರೇರಕರ ಸಂಘ

ಶ್ರೀನಿವಾಸ ಬಜಾಲ್ ಹುತಾತ್ಮ ದಿನಾಚರಣೆ

ರೌಡಿಯೊಬ್ಬನ ಬದುಕು ಸಾವಿನಲ್ಲಿ ಅಂತ್ಯ. ಆದರೆ ಕ್ರಾಂತಿಕಾರಿಯೊಬ್ಬನ ಬದುಕು ಸಾವಿನಿಂದ ಉಜ್ವಲಗೊಳ್ಳುತ್ತದೆ. ಈ ಮಾತು ಎಡಪಂಥೀಯ ಚಳುವಳಿಯಲ್ಲಿ ನಾವು ಕಂಡಿದ್ದೇವೆ ಅಂತಹ ಕ್ರಾಂತಿಕಾರಿಯೊಬ್ಬನ ತ್ಯಾಗ, ಆದರ್ಶಗಳು ನಮ್ಮನ್ನು ಮತ್ತೆ ಮತ್ತೆ ಹೋರಾಟದ ಸಾಗರಕ್ಕೆ ಆಹ್ವಾನಿಸುತ್ತದೆ.ಈ ಹಿನ್ನೆಲೆಯಲ್ಲಿ ಸಂಗಾತಿಗಳ ಮಧ್ಯೆ ಸ್ಫೂರ್ತಿಯ ಸೆಲೆಯಾಗಿ ಮತ್ತೆ ಮತ್ತೆ ಬರುತ್ತಿರುವ ಶ್ರೀನಿವಾಸ್ ಬಜಾಲ್‌ರವರನ್ನು ಒಂದಿಷ್ಟು ಸ್ಮರಿಸೋಣ.

2002 ಜೂನ್ 24 ದಿನ ಶ್ರೀನಿವಾಸ್ ಬಜಾಲ್‌ರವರ ಬದುಕಿನ ಕಟ್ಟ ಕಡೆಯ ದಿನ. ತನ್ನ ಸಹೋದ್ಯೋಗಿಯೊಬ್ಬರಿಗೆ ರಕ್ತ ನೀಡಲು ಆಸ್ಪತ್ರೆಗೆ ಹೊರಟ ಶ್ರೀನಿವಾಸ್ ರವರನ್ನು ದಾರಿ ಮಧ್ಯೆ ಹಿಂದೂ ಯುವ ಸೇನೆಯ ಗೂಂಡಾಗಳು ಬರ್ಬರವಾಗಿ ಹತ್ಯೆ ಮಾಡಿದ್ದರು. ಶ್ರೀನಿವಾಸ್ ರವರು ದೈಹಿಕವಾಗಿ ಇಲ್ಲದಿದ್ದರೂ ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿದ್ದಾರೆ. ನವ ಸಮಾಜದ ನಿರ್ಮಾಣಕ್ಕಾಗಿ ನಮ್ಮೆಲ್ಲರ ಹೋರಾಟಕ್ಕೆ ಸ್ಫೂರ್ತಿಯಾಗಿದ್ದಾರೆ.

ಉತ್ತಮ ನಡೆನುಡಿಯ ಕಲಾವಿದ, ಕ್ರೀಡಾಪಟುವಾಗಿ, ಸಂಘಟಕನಾಗಿ, ಸಂಘಟನೆಯ ತತ್ವ ಸಿದ್ಧಾಂತಗಳಿಗೆ ವಿಧೇಯನಾಗಿ ದುಡಿದ ಶ್ರೀನಿವಾಸ್‌ರವರು ಚೆಲ್ಲಿದ ರಕ್ತದ ಹನಿಹನಿಯಲ್ಲೂ ಡಿವೈಎಫ್ಐ ಮೇಲೆದ್ದು ಬಂತು. ನ್ಯಾಯಾಲಯದಲ್ಲಿ ನಮ್ಮ ಸಾಕ್ಷಿದಾರರಿಗೆ ಸಾಕ್ಷಿ ಹೇಳದಂತೆ ಬೆದರಿಕೆಯನ್ನು ಒಡ್ಡಿದರೂ ಹೆದರದೆ ನಮ್ಮ ಸಂಗಾತಿಗಳು ಸಾಕ್ಷಿ ನುಡಿದಿದ್ದಾರೆ. ಅಂತಿಮವಾಗಿ ಐದು ಮಂದಿಗೆ ಜೀವಾವಧಿ ಶಿಕ್ಷೆಯಾಗಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಶ್ರೀನಿವಾಸ್ ನೆನಪು

"ಕ್ರಾಂತಿಕಾರಿಗೆ ಹುಟ್ಟು ಮಾತ್ರ, ಸಾವಿಲ್ಲ" ಎನ್ನುವಂತೆ ಶ್ರೀನಿವಾಸ್‌ರವರು ಹುತಾತ್ಮರಾಗಿ ಮೂರು ವರ್ಷ ಕಳೆದರೂ ಅವರ ಹೆಸರನ್ನು ಜನಮಾನಸದಲ್ಲಿ ಅಚ್ಚಳಿಯದೆ ಉಳಿಯುವಂತೆ ದ.ಕ. ಜಿಲ್ಲೆಯ ಡಿವೈಎಫ್ಐ ನಿರಂತರವಾಗಿ ಸಾಗಿದೆ. ಜಿಲ್ಲೆಯಲ್ಲಿ ನಡೆಯುವ ಕ್ರೀಡಾಕೂಟ, ರಕ್ತದಾನ ಶಿಬಿರ, ಸಾಂಸ್ಕೃತಿಕ ಕಾರ್ಯಕ್ರಮ, ಅಧ್ಯಯನ ಶಿಬಿರ, ಮುಂತಾದ ಜನಪರ ಕಾರ್ಯಕ್ರಮಗಳು ಶ್ರೀನಿವಾಸ್‌ರವರ ಹೆಸರಿನಲ್ಲಿ ನಡೆಯುತ್ತಾ ಬಂದಿದೆ. ಶ್ರೀನಿವಾಸ್‌ರವರು ಹುತಾತ್ಮರಾಗಿ ಮೂರು ವರ್ಷಗಳಾಗುತ್ತಿರುವ ಈ ಸಂದರ್ಭದಲ್ಲಿ ಮಂಗಳೂರಿನಲ್ಲಿ ಅವರ ಹುತಾತ್ಮ ದಿನಾಚರಣೆಯನ್ನು ಅಚ್ಚುಕಟ್ಟಾಗಿ ನಡೆಸಲಾಗಿದೆ. ಜೂನ್ 24 ರಂದು ಬಜಾಲ್‌ನಲ್ಲಿ ಅವರು ಹತ್ಯೆಯಾದ ಸ್ಥಳದಲ್ಲಿ ಮುಂಜಾನೆ 6.30ರ ಹೊತ್ತಿಗೆ ಸುಮಾರು 50 ಸಂಗಾತಿಗಳು ಒಟ್ಟು ಸೇರಿ ಶ್ವೇತ ಪತಾಕೆಯನ್ನು ಹಾರಿಸಿ ಅಗಲಿದ ಸಂಗಾತಿಗೆ ಕೆಂಪು ನಮನವನ್ನು ಸಲ್ಲಿಸಿದರು. ಆ ಸಂದರ್ಭದಲ್ಲಿ ಸಂಗಾತಿ ಶ್ರೀನಿವಾಸ್ ನೀನು ಚೆಲ್ಲಿದ ರಕ್ತ ವ್ಯರ್ಥವಲ್ಲ, ನೀನು ಕಂಡ ಕನಸ್ಸನ್ನು ನನಸ್ಸು ಮಾಡುತ್ತೇವೆ ಎನ್ನುವ ಘೋಷಣೆಗಳನ್ನು ಕೂಗಿದರು. ಬಳಿಕ ಬಜಾಲ್ ಜಂಕ್ಷನ್‌ನಲ್ಲಿ ಶ್ರೀನಿವಾಸ್‌ರವರ ದೊಡ್ಡದಾದ ಭಾವಚಿತ್ರವನ್ನು ಹಾಕಿದ ಸ್ಥಳದಲ್ಲಿ ಸಾರ್ವಜನಿಕವಾಗಿ ಕೆಂಪು ನಮನ ಸಲ್ಲಿಸಲಾಯಿತು. ಇದರಲ್ಲಿ ಸಾರ್ವಜನಿಕರು ಹೆಚ್ಚು ಹೆಚ್ಚು ಸೇರ್ಪಡೆಯಾದರು. ನಂತರ ಜಿಲ್ಲೆಯ ಪ್ರಮುಖ ಘಟಕಗಳಾದ ಕೊಂಚಾಡಿ, ಪಿಲಾರು ಮುಂತಾದ ಘಟಕಗಳಲ್ಲಿ ಧ್ವಜಾರೋಹಣ ಮಾಡುವ ಮುಖಾಂತರ ವಿವಿಧ ಕಾರ್ಯಕ್ರಮಗಳಿಗೆ ಚಾಲನೆಯನ್ನು ನೀಡಲಾಯಿತು.

ರಕ್ತದಾನ ಶಿಬಿರ ಹಾಗೂ ಪ್ರಶಸ್ತಿ ಪ್ರದಾನ

ಜೂನ್ 26ರಂದು ಬಜಾಲ್‌ನಲ್ಲಿ ರಕ್ತದಾನ ಶಿಬಿರ ಮತ್ತು ಬಜಾಲ್ ವಿಭಾಗ ಮಟ್ಟದಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಗರಿಷ್ಠ ಅಂಕ ಪಡೆದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ, ಬೆಳ್ಳಿಪದಕ ಹಾಗೂ ಪ್ರಶಸ್ತಿಪತ್ರ ಪ್ರದಾನ ಸಮಾರಂಭ ಆಯೋಜಿಸಲಾಗಿತ್ತು. ಮಂಗಳೂರು ನರ್ಸಿಂಗ್



ಹೋಂ ಇದರ ಸಹಯೋಗದೊಂದಿಗೆ ಬಜಾಲ್ ಸಂತ ಜೋಸೆಫರ ಪ್ರೌಢ ಶಾಲೆಯಲ್ಲಿ ರಕ್ತದಾನ ಶಿಬಿರ ನಡೆಯಿತು. ಸುಮಾರು 45 ಸಂಗಾತಿಗಳು ರಕ್ತದಾನ ಮಾಡಿದರು.

ಕಳೆದ ಎರಡು ವರ್ಷಗಳಿಂದ ಬಜಾಲ್ ವಿಭಾಗ ಮಟ್ಟದಲ್ಲಿ ಕಲಿಕೆಯಲ್ಲಿ ಮುಂದೆ ಬರುವ ವಿದ್ಯಾರ್ಥಿಗಳಿಗೆ ಚಿನ್ನದ ಪದಕ, ಬೆಳ್ಳಿ ಪದಕ ಹಾಗೂ ಪ್ರಶಸ್ತಿ ಪತ್ರವನ್ನು ನೀಡುತ್ತಾ ಬಂದಿದೆ. ಅದಕ್ಕಾಗಿ ಶ್ರೀನಿವಾಸ್ ಬಜಾಲ್ ದತ್ತಿನಿಧಿಯನ್ನು ಸ್ಥಾಪಿಸಲಾಗಿತ್ತು. ಈ ಬಾರಿ ಎಸ್.ಎಸ್.ಎಲ್.ಸಿ. ಯಲ್ಲಿ ಗರಿಷ್ಠ ಅಂಕ ಪಡೆದ ಗೋರಿಗುಡ್ಡೆ ಕಿಟ್ಟೆಲ್ ಮೆಮೋರಿಯಲ್ ಹೈಸ್ಕೂಲ್‌ನ ವಿದ್ಯಾರ್ಥಿನಿ ಶೃತಿ ಎಸ್. ಎಕ್ಕೂರು ಇವರಿಗೆ ಚಿನ್ನದ ಪದಕ, ಆದರ್ಶ ಭಾರತಿ ಪ್ರೌಢಶಾಲೆ ಕರ್ವಾರ್‌ನ ಸುಜಿತ್‌ಕುಮಾರ್ ಮಾನೆಲ್ ಕೋಡಿ, ಹಾಗೂ ಸಂತ ಜೋಸೆಫರ ಪ್ರೌಢಶಾಲೆ ಬಜಾಲ್ ಚೈತ್ರ ಎಂ.ಬಿ. ಇವರಿಗೆ ಬೆಳ್ಳಿ ಪದಕ ಹಾಗೂ ಪ್ರಶಸ್ತಿಪತ್ರ ನೀಡಿ ಗೌರವಿಸಲಾಯಿತು.

ಸಮಾರಂಭದಲ್ಲಿ ಮುಖ್ಯ ಭಾಷಣಗಾರರಾಗಿ ಭಾಗವಹಿಸಿದ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿಯವರು ಮಾತನಾಡಿ ಒಬ್ಬ ಸಂಗಾತಿನ್ನು ಕೊಲ್ಲಬಹುದು. ಆದರೆ ಅವರ ತತ್ವ ಆದರ್ಶಗಳನ್ನು ಕೊಲ್ಲಲು ಸಾಧ್ಯವಿಲ್ಲ. ಅದಕ್ಕೆ ಶ್ರೀನಿವಾಸ್ ಬಜಾಲ್‌ರವರು ಸಾಕ್ಷಿಯಾಗಿದ್ದಾರೆ ಎಂದರು. ದೇಶದ ಅಭಿವೃದ್ಧಿ ಐಕ್ಯತೆಗಾಗಿ ಡಿವೈಎಫ್ಐಯು ನಿರಂತರವಾಗಿ ದುಡಿಯುತ್ತಾ ಬಂದಿದೆ. ಅನೇಕ ವಿಜ್ಞಾನಿ, ರಾಜಕಾರಣಿ, ತತ್ವಜ್ಞಾನಿಗಳನ್ನು ನೀಡಿರುವ ಈ ದೇಶದ ಏಕೈಕ ಯುವಜನ ಸಂಘಟನೆಯಾಗಿದೆ. ಆದರೆ ಇಂದು ದೇಶದ ಅಭಿವೃದ್ಧಿಗೆ ತೊಡಗಿಸಿಕೊಳ್ಳಬೇಕಾದ ಯುವಜನರನ್ನು ದೇಶ ಒಡೆಯುವ ಕ್ರಿಮಿನಲ್ ಕೃತ್ಯಗಳಿಗೆ ಕೋಮುವಾದಿಗಳ ಬಳಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಡಿವೈಎಫ್ಐ ನ ಮೇಲೆ ಮಹತ್ತರವಾದ ಜವಾಬ್ದಾರಿ ಇದೆ. ಶ್ರೀನಿವಾಸ್ ಬಜಾಲ್‌ರವರ ತ್ಯಾಗ ಆದರ್ಶಗಳನ್ನು ಜನರ ಬಳಿಗೆ ಕೊಂಡೊಯ್ಯುವ ಮೂಲಕ ನರ್ಸಿಂಗ್ ಹೋಂನ ಯುವ ವೈದ್ಯಾಧಿಕಾರಿ ಪಿ.ಡಿ.ಭಂಡಾರಿ ಹಾಗೂ ಬಜಾಲ್ ಘಟಕದ ಕಾರ್ಯದರ್ಶಿ ದೀಪಕ್ ಬಜಾಲ್ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷರಾದ ಸುನಿಲ್‌ಕುಮಾರ್ ಬಜಾಲ್‌ರವರು ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಅಶೋಕ್ ಕೊಂಚಾಡಿ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರೆ ದಯಾನಂದ ಶೆಟ್ಟಿಯವರು ಕ್ರಾಂತಿಗೀತೆಯನ್ನು ಹಾಡಿ ಕೊನೆಯಲ್ಲಿ ಧನ್ಯವಾದವಿತ್ತರು.

ವರದಿ : **ಅಶೋಕ್ ಕೊಂಚಾಡಿ**

ಓದಲೇಬೇಕಾದ ಪುಸ್ತಕ....

ಪುಟ 12 ರಿಂದ

ಕೋಮುವಾದದ ಸ್ವರೂಪದ ಬಗ್ಗೆ ಹೆಚ್ಚು ಕಡಿಮೆ ಸಮಗ್ರವಾದ ಚಿತ್ರಣ ನೀಡುವ 'ಕೋಮುವಾದದ ಕರಾಳ ಮುಖಗಳು' ಪುಸ್ತಕದಲ್ಲಿ ಕೆಲವು ಕೊರತೆಗಳು ಕಂಡಿವೆ. ಶಾಲಾ ಪಠ್ಯ (ಅದರಲ್ಲೂ ಚರಿತ್ರೆಯ) ಪುಸ್ತಕಗಳನ್ನು, ದೊಡ್ಡ ಪ್ರಮಾಣದಲ್ಲಿ ಒಟ್ಟಾರೆ ಶಿಕ್ಷಣವನ್ನು ಕೋಮುವಾದೀಕರಿಸುವ ಬಿಜೆಪಿ ಸರ್ಕಾರದ ಪ್ರಯತ್ನದ ಅಂಶ ಪೂರ್ತಿಯಾಗಿ ಬಿಟ್ಟು ಹೋಗಿರುವುದು ಇಂತಹ ಒಂದು ಕೊರತೆ. ದೀಪಾ ಮೆಹ್ತಾ ಫಿಲಂ ಆಗಗೊಡದ್ದು, ಎಂ.ಎಫ್.ಹುಸೇನ್ ಕಲಾಚಿತ್ರಗಳ ಮೇಲೆ ದಾಳಿ, ಗುಲಾಂ ಅಲಿ ಗಜಲ್ ಕಾರ್ಯಕ್ರಮಕ್ಕೆ ಅಡ್ಡಿ ಮಾಡಿದ್ದು, ಡಾಕ್ಯುಮೆಂಟರಿ ಫಿಲಂ ಉತ್ಸವಕ್ಕೆ ಅಡ್ಡಿ - ಮುಂತಾದ ಸಾಂಸತಿಕ ಪ್ರಜಾಪ್ರಭುತ್ವ ಅಭಿವ್ಯಕ್ತಿಯ ಹಕ್ಕಿನ ಮೇಲೆ ಸತತ ದಾಳಿ ಸಹ ಇಡೀ ಪುಸ್ತಕದಲ್ಲಿ ಬಿಟ್ಟು ಹೋಗಿರುವುದೂ ಇನ್ನೊಂದು ಕೊರತೆ. ಈ ಮೂಲಕ ಪುಸ್ತಕ 'ಕೋಮುವಾದದ ಕರಾಳ ಮುಖ' ಗಳಿಗೆ ಮಾತ್ರ ಸೀಮಿತವಾಗಿದೆ. ಇತರ ಪ್ರಮುಖ ಮುಖಗಳು ಬಿಟ್ಟು ಹೋಗಿವೆ. ಪುಸ್ತಕದ ತಲೆಬರಹ ಸೂಚಿಸುವ, ಕೋಮುವಾದದ ಒಟ್ಟಾರೆ ಅರ್ಥೈಸುವಿಕೆ ಲೇಖಕರ ಉದ್ದೇಶವೆಂದು ಇಟ್ಟುಕೊಂಡರೆ ಇದು ಪ್ರಮುಖ ಕೊರತೆ.

ಕೋಮುವಾದ ಈಗಿನ ಕರಾಳ ಸ್ವರೂಪ ಪಡೆಯಲು ಕಾರಣವಾದ ಸಂದರ್ಭ ಸೃಷ್ಟಿಸುವುದರಲ್ಲಿ ಜಾಗತೀಕರಣದ ಆರ್ಥಿಕ ನೀತಿಯ ಬಗ್ಗೆ ಸಾಕಷ್ಟು ಚರ್ಚೆ ಇದೆ. ಆದರೆ ಇದು ಒಟ್ಟಾರೆ ನಿರೂಪಣೆಯ ಜತೆ ಹಾಸುಹೊಕ್ಕಾಗಿ ತಕ್ಕ ಒತ್ತು ಮತ್ತು ಪ್ರಾಮುಖ್ಯತೆ ಪಡೆದಿಲ್ಲ.

90 ದಶಕದಲ್ಲಿ ಸಾಮ್ರಾಜ್ಯಶಾಹಿ ಜಾಗತೀಕರಣ ಯುಜವಾನಿಕೆಗೆ ಮೂಲ ಕಾರಣವಾದ ಸೋವಿಯೆತ್ ಒಕ್ಕೂಟದಲ್ಲಿ ಮತ್ತು ಪೂರ್ವ ಯುರೋಪಿನಲ್ಲಿ ಸಮಾಜವಾದದ ಹಿನ್ನಡೆಯ ಹಿನ್ನೆಲೆಯ ಬಗ್ಗೆ ಪ್ರಸ್ತಾಪವಾದರೂ ಬರಬೇಕಿತ್ತು. ಮನುಕುಲವನ್ನು ಸಕಾರಾತ್ಮಕ ಮೌಲ್ಯಗಳ(ಸ್ವಾತಂತ್ರ್ಯ, ಸಮಾನತೆ, ಸಮೃದ್ಧಿ) ಆಧಾರದ ಮೇಲೆ ಮುನ್ನಡೆಸುವ ಬಗ್ಗೆ ಜಗತ್ತಿನಾದ್ಯಂತ 'ಸಮಾಜವಾದಿ ಪರಿಕಲ್ಪನೆ' ಮೂಡಿಸಿದ್ದ ಆಶಾವಾದ ಕುಸಿದದ್ದು ಹಲವು ನಕಾರಾತ್ಮಕ ಬೆಳವಣಿಗೆಗಳಿಗೆ ಎಡೆಕೊಟ್ಟಿದೆ. ಧರ್ಮ-ಭಾಷೆ-ಜನಾಂಗದ ಆಧಾರದ ಮೇಲೆ ಸಂಕುಚಿತವಾದ, ಪ್ರತ್ಯೇಕತೆ ಬಲಪಂಥೀಯ ರಾಜಕಾರಣಕ್ಕೆ ಜಗತ್ತಿನಾದ್ಯಂತ ಉತ್ತೇಜನ ನೀಡಿದೆ. ಭಾರತದ ಕೋಮುವಾದ ಈ ಬೆಳವಣಿಗೆಯ ಭಾಗ ಎಂದು ಗುರುತಿಸುವುದು ಅಗತ್ಯವಾಗಿತ್ತು. ಸಾಮೂಹಿಕ ಕೋಮು ಹಿಂಸೆಯ ಸಂದರ್ಭದಲ್ಲಿ ವೈಯಕ್ತಿಕವಾಗಿ ಹಾಗೂ ಗುಂಪಿನಲ್ಲಿ 'ಹಿಂಸೆಯ ಸಾಧ್ಯತೆ' ಬಗ್ಗೆ (ಹಿಂಸೆಯ ಅಭಿಜ್ಞಾನ) ಕೆಲವು ಅರ್ಥೈಸುವಿಕೆಗಳು ಅಷ್ಟೇನೂ ಸಮಂಜಸವಾಗಿಲ್ಲ ಎನ್ನಬಹುದು.

ಕರ್ನಾಟಕದಲ್ಲಿ ಕೋಮುವಾದದ ಬೆಳವಣಿಗೆ ನಿರೂಪಿಸುವಾಗ ಹಿಂದಕ್ಕೆ ಈದ್ಗಾ ಮೈದಾನ, ಬಾಬಾ ಬುಡನ್‌ಗಿರಿ ವಿವಾದದ ಬಗ್ಗೆ ಪ್ರಸ್ತಾಪವಿಲ್ಲದಿರು ವುದು ಪುಸ್ತಕದ ಸಮಗ್ರತೆಗೆ ಕೊರತೆ ಎನ್ನಿಸುತ್ತದೆ.

ಬಹುಶಃ ಒಂದೇ ಪುಸ್ತಕದಿಂದ ಕೋಮುವಾದದ ಎಲ್ಲಾ ಆಯಾಮಗಳ ಬಗ್ಗೆ ನಿರೂಪಣೆ ನಿರೀಕ್ಷಿಸುವುದು ತಪ್ಪಾದೀತು. ಕೋಮುವಾದದ ಹಲವು ಆಯಾಮಗಳನ್ನು ಇನ್ನಷ್ಟು ವಿವರವಾಗಿ ಎಲ್ಲರಿಗೂ ತಟ್ಟುವಂತೆ ನಿರೂಪಿಸುವ ಹಲವು ಪುಸ್ತಕಗಳ ಅವಶ್ಯಕತೆ ಇದೆ. ಸಂಘ ಪರಿವಾರದ ಕೋಮುವಿಷಕ್ಕೆ ಇವು 'ಆಂಟಿ ಬಯೋಟಿಕ್' ಆಗಿ ಕೆಲಸ ಮಾಡಬೇಕು. 'ಕರಾಳ ಮುಖಗಳು' ಈ ನಿಟ್ಟಿನಲ್ಲಿ ಮೊದಲ ದೊಡ್ಡ ಹೆಜ್ಜೆ ಎನ್ನುವುದರಲ್ಲಿ ಏನೂ ಸಂಶಯವಿಲ್ಲ.

ಸಾಮ್ರಾಜ್ಯಶಾಹಿ ವಿರೋಧಿ ಅಂತರರಾಷ್ಟ್ರೀಯ ವಿದ್ಯಾರ್ಥಿ - ಯುವಜನೋತ್ಸವ

16° ಕರಕಾಸ್
ವೆನುಜುವೆಲಾ
VENEZUELA
August 2005
ಆಗಸ್ಟ್ 7-15, 2005

ಅಂತರರಾಷ್ಟ್ರೀಯ ಸಾಮ್ರಾಜ್ಯಶಾಹಿ ವಿರೋಧಿ ವಿದ್ಯಾರ್ಥಿ-ಯುವ ಜನೋತ್ಸವವು ಆಗಸ್ಟ್ 7ರಿಂದ 15, 2005 ರವರೆಗೆ ಲ್ಯಾಟಿನ್ ಅಮೇರಿಕಾದ ರಾಷ್ಟ್ರವಾದ ವೆನಿಜುವೆಲಾದಲ್ಲಿ ನಡೆಯುತ್ತಿದೆ. ಅಮೇರಿಕಾ ನೇತೃತ್ವದ ಯುದ್ಧಕೋರ, ಲೂಟಿಕೋರ, ಸಾಮ್ರಾಜ್ಯಶಾಹಿ ಆಕ್ರಮಣಗಳ ವಿರುದ್ಧ, ಸಾಮ್ರಾಜ್ಯಶಾಹಿ ಜಾಗತೀಕರಣದ ವಿರುದ್ಧ ವಿಶ್ವದಾದ್ಯಂತ ಚಳುವಳಿ ಗಳಿಗೆದರಿರುವ ಈ ಮಹತ್ವದ ಸಂದರ್ಭದಲ್ಲಿ ನಡೆಯುತ್ತಿರುವ ಈ ಉತ್ಸವ ಐತಿಹಾಸಿಕ ಪ್ರಾಮುಖ್ಯತೆ ಪಡೆದಿದೆ.

ಅಮೇರಿಕಾ-ಸಿಐಎ ಗಳ ದುಷ್ಟ ಹುನ್ನಾರಗಳನ್ನು ಹಿಮ್ಮೆಟ್ಟಿಸಿ, ಐಎಂಎಫ್-ವಿಶ್ವಬ್ಯಾಂಕ್ ಪ್ರೇರಿತ ಜಾಗತೀಕರಣವನ್ನು ಹಿಮ್ಮೆಟ್ಟಿಸಿ, ಜನಪರ ನೀತಿಗಳತ್ತ ದೃಢವಾಗಿ ಮುನ್ನುಗ್ಗುತ್ತಿರುವ ವೆನಿಜುವೆಲಾ ಜನತೆಯ ಧೀಮಂತ ಹೋರಾಟವು ಇಡೀ ಜಗತ್ತಿನ ಜಾಗತೀಕರಣ ವಿರೋಧಿ ಹೋರಾಟದ ಸ್ಫೂರ್ತಿಯ ಚಿಲುಮೆಯಾಗಿದೆ.

ಜಗತ್ತಿನ ವಿವಿಧ ಮೂಲೆಗಳಿಂದ ಇದೇ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಶ್ರೀಮಂತ - ವೈವಿಧ್ಯಮಯ ಅನುಭವ ಗಳನ್ನು ಹೊತ್ತು ತರುವ ನೂರಾರು ದೇಶಗಳ ವಿದ್ಯಾರ್ಥಿ ಯುವಜನರು ಈ ಉತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ.

ಜಾಗತೀಕರಣ ವಿರೋಧಿ ಹೋರಾಟದ ನಮ್ಮ ಚಳುವಳಿಯ ಅನುಭವನ್ನು ಹಂಚಿಕೊಂಡು ಜಗತ್ತಿನ ಚಳುವಳಿಯ ಅನುಭವ, ಸ್ಫೂರ್ತಿಯನ್ನು ಹೊತ್ತು ತರಲು ಭಾರತ ವಿದ್ಯಾರ್ಥಿ ಫೆಡರೇಷನ್ (SFI) ಕರ್ನಾಟಕ ರಾಜ್ಯ ಸಮಿತಿಯ ಅಧ್ಯಕ್ಷರಾದ ಕಾಂ. ಜಿ.ರಾಜಶೇಖರ ಮೂರ್ತಿಯವರು, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ನನ ರಾಜ್ಯ ಉಪಾಧ್ಯಕ್ಷರಾದ ಕಾಂ.ಸುನೀಲ್ ಕುಮಾರ್ ಬಜಾಲ್ ಮತ್ತು ಕಾಂ. ಎ.ವಿ.ವೆಂಕಟರಾಮ್ ಉತ್ಸವಕ್ಕೆ ತೆರಳುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿಯೂ ಈ ಸಂಬಂಧ ಸಿದ್ಧತಾ ಸಮಿತಿ ರಚನೆಯಾಗಿದ್ದು ಪ್ರಚಾರ-ಪೂರಕ ಕಾರ್ಯಕ್ರಮಗಳ ಸಿದ್ಧತೆ ನಡೆದಿದೆ.


ಮಾರನ್ 'ಫ್ಲಾಟ್ ರೇಟ್' ಜನಸಾಮಾನ್ಯರಿಗೆ ಮಾರಕ

ಮಾರನ್‌ರ 'ಫ್ಲಾಟ್‌ರೇಟ್'ನ ಭಯಂಕರ ಐಡಿಯಾ ದೇಶದ ಸಂಪರ್ಕ ನೀತಿಯಾಗುವ ಲಕ್ಷಣಗಳು ಕಂಡುಬರುತ್ತಿವೆ. ಮಾರನ್‌ರ 'ಫ್ಲಾಟ್ ರೇಟ್' ವಿಚಾರದ ಪ್ರಕಾರ ಭಾರತದಲ್ಲಿ ಎಲ್ಲಿಂದ ಎಲ್ಲಿಗೆ ಫೋನು ಮಾಡಿದರೂ ಒಂದೇ 'ರೇಟು' ಇರಬೇಕು. ಇದು ಮೊದಲ ನೋಟಕ್ಕೆ ಟೆಲಿಫೋನ್ ಗ್ರಾಹಕರಿಗೆ ಅನುಕೂಲ ಮಾಡುವ ಕ್ರಮದ ಹಾಗೆ ಕಾಣುತ್ತದೆ. ಇದಕ್ಕೆ 'ಇಂಡಿಯಾ ಒನ್' ಎಂಬ ಆಕರ್ಷಕ ಹೆಸರು ಬೇರೆ ಇದೆ. ಇದು ಎಷ್ಟು ಎಂದು ಇನ್ನೂ ನಿರ್ಧಾರವಾಗಿಲ್ಲ. ಆದರೆ ಈಗಿನ ಟೆಲಿಫೋನು ಕಂಪನಿಗಳ ಖರ್ಚು-ವೆಚ್ಚ-ಆದಾಯಗಳ ವಿಶ್ಲೇಷಣೆ ಮಾಡಿದರೆ, ಸ್ಥಳೀಯ ಕರೆಗಳು ಮತ್ತು ಅಂತರ್ರಾಷ್ಟ್ರೀಯ ಕರೆಗಳ ಸರಾಸರಿಯಷ್ಟು ಮಾತ್ರ ಇರಲು ಸಾಧ್ಯ. ಇಂದಿನ ಸ್ಥಳೀಯ ಕರೆಗಳ ದರದಲ್ಲಿ ಎಸ್‌ಟಿಡಿ ಕರೆಗಳನ್ನು ಕೊಡುವುದು ಸಾಧ್ಯವೇ ಇಲ್ಲ ಎನ್ನುವ ಪರಿಸ್ಥಿತಿ ಇದೆ. ಅಂದರೆ ಸ್ಥಳೀಯ ಕರೆಗಳ ಬೆಲೆ ಇನ್ನಷ್ಟು ಏರುತ್ತದೆ. ಎಸ್‌ಟಿಡಿ ಕರೆಗಳ ದರ ಇನ್ನಷ್ಟು ಇಳಿಯುತ್ತದೆ. ಎಲ್ಲಾ ರಂಗಗಳಲ್ಲಿ ಈಗ ಇರುವ ಬಡವರ ತುತ್ತು ಕಸಿದು ಶ್ರೀಮಂತರಿಗೆ ಔತಣ ಬಡಿಸುವ ನೀತಿಯಂತೆ ಇದು ಕೂಡಾ.

'ಇಂಡಿಯಾ ಒನ್', 'ಫ್ಲಾಟ್ ರೇಟ್'

ದೇಶದ ಟೆಲಿಫೋನ್ ಸಾಂದ್ರತೆಯನ್ನು (ಈಗಿನ ಕೇವಲ ಶೇಕಡ 7 ರಿಂದ) ಹೆಚ್ಚಿಸುವುದು, ಎಲ್ಲಾ ಗ್ರಾಮಗಳಲ್ಲಿ ಕನಿಷ್ಟ ಒಂದಾದರೂ ಫೋನು ಇರುವಂತೆ ಮಾಡುವುದು - ಇದು ದೇಶದ ಸಂಪರ್ಕ ನೀತಿಯ ಬೆನ್ನೆಲುಬು. ಯಾವುದೇ ಸಂಪರ್ಕ ಜಾಲದಲ್ಲಿ ಅದರ ಬಳಕೆ (ಶೇಕಡಾ 80 ರಷ್ಟು)ಮಾಡುವುದು ಶೇಕಡಾ 20 ರಷ್ಟು ಗ್ರಾಹಕರು. ಅಂದರೆ ಶೇಕಡಾ 20 ರಷ್ಟು ಗ್ರಾಹಕರು, ಶೇಕಡಾ 80 ರಷ್ಟು 'ಬಿಸಿನೆಸ್' ಟೆಲಿಫೋನು ಕಂಪನಿಗಳಿಗೆ ಕೊಡುತ್ತಾರೆ. ಇದರಲ್ಲಿ ದೊಡ್ಡ ಭಾಗ ದೂರದ ಕರೆಗಳು. ಶೇಕಡಾ 80 ರಷ್ಟು ಗ್ರಾಹಕರು ಕೊಡುವ 'ಬಿಸಿನೆಸ್' ಅದಕ್ಕೆ ತಗಲುವ ವೆಚ್ಚ ಸಹ ಭರಿಸುವುದಿಲ್ಲ. ಇದು ಗ್ರಾಮೀಣ ಪ್ರದೇಶಗಳ ಬಗೆಗೂ ನಿಜ. ನಗರದ ಫೋನು ಹೆಚ್ಚಾಗಿ ಒಳಬರುವ ಮಿತ ಬಳಕೆ ಮಾಡುವ ಗ್ರಾಹಕರಿಗೂ ಅನ್ವಯಿಸುತ್ತದೆ. ಆದರೆ ಯಾವುದೇ ಸಂಪರ್ಕ ಜಾಲದ ಉಪಯುಕ್ತತೆ, ಅದರಿಂದ ಎಷ್ಟು ಜನರನ್ನು ಸಂಪರ್ಕಿಸಬಹುದು ಎಂಬ ಸಂಖ್ಯೆಯ ಮೇಲೆ ಅವಲಂಬಿತವಾಗಿರುತ್ತದೆ. ಆದ್ದರಿಂದ ಯಾವುದೇ ಸಂಪರ್ಕ ಜಾಲವನ್ನು ವಿಸ್ತರಿಸುವುದು ಅಷ್ಟೇ ಮುಖ್ಯ. ಇದಕ್ಕಾಗಿ ದೂರದ ಕರೆಗಳಿಗೆ ಹೆಚ್ಚು ಬೆಲೆ ಇಟ್ಟು, ಸ್ಥಳೀಯ ಕರೆಗಳನ್ನು ಕಡಿಮೆ ದರ ಇಡುವುದು, ನಗರದ ಫೋನುಗಳಿಗಿಂತ ಗ್ರಾಮೀಣ ಪ್ರದೇಶದ

ಸಂಪರ್ಕಖಾತೆ ಮಂತ್ರಿ ದಯಾನಿಧಿ ಮಾರನ್‌ಗೆ ಒಂದು ಹೊಸ 'ಭಯಂಕರ' ಐಡಿಯಾ ಹೊಳೆದಿದೆ - ದೇಶದ ಸಮಗ್ರತೆ, ಐಕ್ಯತೆ ಹೆಚ್ಚಿಸಲು. ಇಡೀ ದೇಶವೇ ಒಂದೇ ಆಗಿರುವಾಗ ಟೆಲಿಫೋನ್ ದರ ಸಹ ಒಂದೇ ಆಗಿರಬೇಕಲ್ಲ. ಇಡೀ ದೇಶಕ್ಕೆ ಒಂದೇ 'ಫ್ಲಾಟ್‌ರೇಟ್' ಇದ್ದರೆ ಹೇಗೆ? ಮಾರನ್‌ರ 'ಫ್ಲಾಟ್‌ರೇಟ್' ಮತ್ತು 'ಟ್ರಾಯ್' (TRAI)ನ ಕೆಲವು ಹೊಸ ಪ್ರಸ್ತಾವಗಳು ಸಾಮಾನ್ಯ ಟೆಲಿಫೋನ್ ಗ್ರಾಹಕರಿಗೆ (ಸ್ಥಳೀಯ ಕರೆ ಏರಿಸುವ ಮೂಲಕ) ಮತ್ತು ಗ್ರಾಮೀಣ ಜನರಿಗೆ (ಗ್ರಾಮೀಣ ಪ್ರದೇಶದಲ್ಲಿ ಟೆಲಿಫೋನ್ ವಿಸ್ತರಣೆಯನ್ನು ಮಂದಗೊಳ್ಳಿಸುವ ಮೂಲಕ) ಮಾರಕವಾಗಲಿದೆ.




ಫೋನು ದರ ಕಡಿಮೆ ಇಡುವುದು (ಇದಕ್ಕೆ 'ಕ್ರಾಸ್ ಸಬ್ಸಿಡಿ' ಎನ್ನುತ್ತಾರೆ) ತಕ್ಕ ಉತ್ತಮ ನೀತಿ. ಈ ನೀತಿಯನ್ನು ಹಲವು ದಶಕಗಳಿಂದ ಅನುಸರಿಸಿದ್ದರಿಂದಲೇ ಸ್ವಲ್ಪವಾದರೂ ಟೆಲಿಫೋನು ಸಾಂದ್ರತೆ ವಿಸ್ತಾರವಾಗಿದೆ.

ಅಪರಾಧಿಗಳಿಗೆ ಉತ್ತೇಜನ ಧನ

ಆದರೆ 90 ರ ದಶಕದಿಂದ 'ಖರ್ಚಿಗೆ ಅನುಗುಣವಾಗಿ ಬೆಲೆ' ಎಂಬ ನೀತಿ ಅನುಸರಿಸಿ ಸ್ಥಳೀಯ ಕರೆಗಳು ಏರುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಒಟ್ಟಾರೆಯಾಗಿ ಕೂಡಾ ಟೆಲಿಫೋನ್ ಜಾಲ ವಿಸ್ತರಣೆಗೆ ಹೊಡೆತ ಬಿದ್ದಿದೆ. ಗ್ರಾಮೀಣ ಟೆಲಿಫೋನ್ ಪೂರೈಕೆ 2001-02 ರಲ್ಲಿ 60 ಸಾವಿರದಿಂದ 2004 ರಲ್ಲಿ 15 ಸಾವಿರಕ್ಕೆ ಇಳಿದಿದೆ. ಗ್ರಾಮೀಣ ಫೋನ್ ಲೈನು ವಿಸ್ತರಣೆ ಶೇಕಡಾ 40 ರಷ್ಟು ಇಳಿದಿದೆ. ಪಟ್ಟಣ ಪ್ರದೇಶಗಳಲ್ಲೂ ವಿಸ್ತರಣೆ ಸೀಮಿತವಾಗಿದೆ. ಒಟ್ಟು 5200 ಪಟ್ಟಣಗಳಲ್ಲಿ ಕೇವಲ 1700 ಪಟ್ಟಣಗಳಲ್ಲಿ ಮಾತ್ರ ಮೊಬೈಲ್ ಫೋನು ಸಂಪರ್ಕ ಲಭ್ಯವಿದೆ. ಇದಕ್ಕೆ ಮುಖ್ಯಕಾರಣ ಟೆಲಿಫೋನು ಮೂಲ ಸೇವೆಯ ಖಾಸಗೀಕರಣ. ಶೇಕಡಾ 10 ರಷ್ಟು ಗ್ರಾಮೀಣ ಫೋನುಗಳನ್ನು ಒದಗಿಸಬೇಕೆಂಬ ಶರತ್ತನ್ನು ಈ ಖಾಸಗಿ ಕಂಪನಿಗಳು ಉಲ್ಲಂಘಿಸಿವೆ. (ಕೋಷ್ಟಕ 1 ನೋಡಿ) ಇದರ ಬದಲು ಸಣ್ಣ 'ದಂಡ' ತೆತ್ತು ಸುಮ್ಮನಾಗಿವೆ. ಈ ಸಣ್ಣ 'ದಂಡ' ಹೊರಿಸುವ ನೀತಿ ಕೆಲಸ ಮಾಡದಿರುವುದನ್ನು ನೋಡಿಯೂ, ಸರ್ಕಾರ ತನ್ನ ನೀತಿ ಬದಲಾಯಿಸಿಲ್ಲ. ಗ್ರಾಮೀಣ ಟೆಲಿಫೋನ್ ಜಾಲ ವಿಸ್ತರಿಸುವ ಬಗ್ಗೆ ಯಾವುದೇ ಆಸಕ್ತಿ ತೋರಿಸಿಲ್ಲ. ಕೋಷ್ಟಕದಲ್ಲಿ ತೋರಿಸಿದಂತೆ ಬಿಎಸ್‌ಎನ್‌ಎಲ್ ಬಿಟ್ಟರೆ ಗ್ರಾಮೀಣ ಫೋನು ಪೂರೈಕೆಯು ಹೆಚ್ಚಿನ ಕಂಪನಿಯ ಶೇಕಡಾ 1ನ್ನೂ ದಾಟಿಲ್ಲ.

ಬಿಎಸ್‌ಎನ್‌ಎಲ್‌ಗೆ ಷೊಕ್!

ಈ ಮೂಲಸೇವೆ ಕಂಪನಿಗಳ ಮೇಲೆ ಈ ಶರತ್ತು ಪೂರೈಸುವಂತೆ ಒತ್ತಡ ಹೇರುವ ಬದಲು, ಅದಕ್ಕೆ ಪ್ರೋತ್ಸಾಹ ಧನ ನೀಡುವ ವಿಚಿತ್ರ ನೀತಿಯನ್ನು 'ಟ್ರಾಯ್' (TRAI) ಮುಂದಿಟ್ಟಿದೆ. ಈಗಿನ ನೀತಿಯಲ್ಲಿ ಗ್ರಾಮೀಣ ಮತ್ತು ಒಟ್ಟಾರೆ ಟೆಲಿಫೋನು ವಿಸ್ತರಣೆಯ ಖರ್ಚು ಭರಿಸುವಂತೆ ಎರಡು ನಿಧಿಗಳನ್ನು ರಚಿಸಲಾಗಿದೆ. USO(Universal Service Obligation - ಸಾರ್ವತ್ರಿಕ ಸೇವೆ ಶರತ್ತು) ಮತ್ತು ADC-Access Dificiat Charges ಇವೆರೆಡು ಆ ನಿಧಿಗಳು. ADC ನಿಧಿಗೆ ದೂರ ಕರೆ ಹಣದ ಒಂದು ಭಾಗ ಹೋಗುತ್ತದೆ. USO ಗೆ ಕಂಪನಿಯ ಒಟ್ಟು ಆದಾಯದ ಒಂದು ಭಾಗ ಹೋಗುತ್ತದೆ. ಇವೆರಡನ್ನು ಮಿಶ್ರ ಮಾಡಿ ಒಂದೇ ನಿಧಿ ಮಾಡಬೇಕು ಎಂದು ಟ್ರಾಯ್ ಯೋಚಿಸುತ್ತಿದೆ. ಆ ನಿಧಿಗೆ ಯಾವ ಆಧಾರದ ಮೇಲೆ ಕಂಪನಿಗಳು ಹಣ ಕೊಡಬೇಕು? ಯಾವ ಆಧಾರದ ಮೇಲೆ ಈ ನಿಧಿಯಿಂದ ಹಣವನ್ನು ಕಂಪನಿಗಳಿಗೆ ಕೊಡಲಾಗುತ್ತದೆ? ಈ ಬಗ್ಗೆ ಟ್ರಾಯ್ ಪ್ರಸ್ತಾವಗಳು ಬಿಎಸ್‌ಎನ್‌ಎಲ್‌ನಿಂದ ದುಡ್ಡು ಕಸಿದು ಖಾಸಗಿ




ಕಂಪನಿಗಳಿಗೆ ಕೊಡುವ ಪರಿಣಾಮ ಹೊಂದಿವೆ. ಇದರಿಂದ ಗ್ರಾಮೀಣ ಮತ್ತು ಒಟ್ಟಾರೆ ಟೆಲಿಫೋನ್ ವಿಸ್ತರಣೆಯ ಉದ್ದೇಶ ಫಲಿಸುವುದಿಲ್ಲ.

ಕೋಷ್ಟಕ 1

ಕಂಪನಿ	ಗ್ರಾಮೀಣ ಲೈನುಗಳ ಶೇಕಡಾವಾರು(%)
ಬಿ.ಎಸ್.ಎನ್.ಎಲ್	35.00
ಭಾರತಿ	0.08
ಟಾಟಾ	0.23
ಶ್ಯಾಮ	3.37
ಹೆಚ್.ಎಫ್.ಸಿ.ಎಲ್	0.45
ರಿಲೆಯನ್ಸ್	0.66


ಒಟ್ಟಾರೆಯಾಗಿ ಟೆಲಿಫೋನ್ ವಿಸ್ತರಣೆಯಲ್ಲಿ ಇನ್ನೂ ದೊಡ್ಡ (ಅಥವಾ ಏಕಮಾತ್ರ) ಪಾತ್ರ ವಹಿಸುತ್ತಿರುವ ಬಿಎಸ್‌ಎನ್‌ಎಲ್ ಮತ್ತು ಇತರ ಖಾಸಗಿ ಕಂಪನಿಗಳನ್ನು ಒಂದೇ ತಕ್ಕಡಿಯಲ್ಲಿ ತೂಗುವ ಹುನ್ನಾರ ನಡೆದಿದೆ.

ಮಾರನ್‌ರ 'ಫ್ಲಾಟ್‌ರೇಟ್' ಐಡಿಯಾ ಮತ್ತು ಟ್ರಾಯ್‌ನ ಈ ಪ್ರಸ್ತಾವಗಳು ಸಾಮಾನ್ಯ ಟೆಲಿಫೋನ್ ಗ್ರಾಹಕರಿಗೆ (ಸ್ಥಳೀಯ ಕರೆ ಏರಿಸುವ ಮೂಲಕ ಹೊಸ ಪ್ರದೇಶಗಳಿಗೆ ವಿಸ್ತರಣೆ ಮಂದಗತಿ ಮಾಡುವ ಮೂಲಕ)ಗ್ರಾಮೀಣ ಜನರಿಗೆ (ಗ್ರಾಮೀಣ ಪ್ರದೇಶದಲ್ಲಿ ಟೆಲಿಫೋನ್ ವಿಸ್ತರಣೆ ಮಂದಗತಿ ಮಾಡುವ ಮೂಲಕ) ಮಾರಕವಾಗಲಿದೆ.



ಆಫ್ರಿಕಾ ಖಂಡದ ದೇಶಗಳ ಎಲ್ಲಾ ಸಾಲ ಮನ್ನಾ ಮಾಡಬೇಕೆಂದು ಒತ್ತಾಯಿಸಿ ಇಂಗ್ಲೆಂಡ್‌ನಲ್ಲಿ ಜಿ-8 ಸಭೆಗೆ ಮುನ್ನ ನಡೆದ ಸಾಮೂಹಿಕ ಪ್ರತಿಭಟನೆಯ ಚಿತ್ರ ←

ಜನಸಮೂಹಗಳ ಸಾಮೂಹಿಕ ಪ್ರತಿರೋಧದ ಚಳುವಳಿಯನ್ನು ದಿಕ್ಕುತಪ್ಪಿಸುವುದಕ್ಕಾಗಿ ಲಂಡನ್‌ನಲ್ಲಿ ಭಯೋತ್ಪಾದಕರ ಬಾಂಬ್ ದಾಳಿ? ↓





ಅಡ್ವಾಣಿಯವರ ಒಮ್ಮೆ ರಾಜೀನಾಮೆ - ಮತ್ತೊಮ್ಮೆ ಕುರ್ಚಿ ಅಪ್ಪಿಕೊ ಪ್ರಹಸನ, ಅಯೋಧ್ಯೆಯಲ್ಲಿ ಭಯೋತ್ಪಾದಕ ದಾಳಿ ಬಗ್ಗೆ ಉದ್ರೇಕವೆಬ್ಬಿಸುವ ವಿಫಲ ಪ್ರಯತ್ನ - ಇವು ಸಂಘ-ಪರಿವಾರದ 'ರಾಜಕೀಯ' ಎದುರಿಸುತ್ತಿರುವ ತೀವ್ರ ಬಿಕ್ಕಟ್ಟನ್ನು ಎತ್ತಿ ತೋರಿಸುತ್ತವೆ. ಕಳೆದ ಒಂದು ವರ್ಷದಲ್ಲಿ ಸಂಘ ಪರಿವಾರದ ಅಜೆಂಡಾ ಹಿಂದೆ ಸರಿದಿದೆ. ಆದರೆ ಕೋಮುವಾದಿ - ಫ್ಯಾಸಿಸಂನ ಅಪಾಯ ತಪ್ಪಿ ಹೋಗಿದೆ ಎಂದು ಭಾವಿಸುವುದು ದೊಡ್ಡ ಪ್ರಮಾದವಾದೀತು. ಕೋಮುವಾದ ಈಗ ಭೀಕರವಾಗಿ ವ್ಯಾಪಕವಾಗಿ, ಆಳವಾಗಿ ಬೇರೂರಿರುವ ಬಗ್ಗೆ ಅರಿವು ಮತ್ತು ಸದಾ ಕಟ್ಟೆಚ್ಚರ ಬೇಕು. ಈ ಹಿನ್ನೆಲೆಯಲ್ಲಿ ಈಗಿನ ಹಂತದಲ್ಲಿ ಕೋಮುವಾದದ ಬಗ್ಗೆ ಆಳವಾದ ಅರಿವು ಮೂಡಿಸುವ ಓದಲೇಬೇಕಾದ ಉತ್ತಮ ಪುಸ್ತಕ - 'ಕೋಮುವಾದದ ಕರಾಳ ಮುಖಗಳು'.

ಶರತ್‌ಚಂದ್ರ

ಇತ್ತೀಚಿಗೆ ಬೆಂಗಳೂರಿನಲ್ಲಿ ಬಿಡುಗಡೆಯಾದ ನವಕರ್ನಾಟಕ ಪ್ರಕಾಶನದ ಈ ಪುಸ್ತಕದ ಮೊದಲ ಭಾಗ 'ಹಿಂದೂ - ಮುಸ್ಲಿಂ ಘರ್ಷಣೆಗಳ ಸಮಸ್ಯೆ' ಎಂಬ ಹೆಸರಿನಲ್ಲಿ ಪ್ರಕಟವಾಗಿತ್ತು. ಕನ್ನಡದಲ್ಲಿ ಆಗ ಕೋಮುದಂಗೆಗಳ ಬಗ್ಗೆ ಪ್ರಕಟವಾದ ಮಹತ್ವದ ಕೃತಿಯಾಗಿತ್ತು. ಈ ಭಾಗದಲ್ಲಿ ಸ್ವಾತಂತ್ರ್ಯಾನಂತರದಿಂದ ಅಂದಿನ (1986)ವರೆಗೆ ಕೋಮುದಂಗೆಗಳ ಸಮಸ್ಯೆಯ ಸ್ವರೂಪ, ಅದರ ಕಾರಣಗಳು, ಪರಿಹಾರಗಳ ಬಗ್ಗೆ ಚರ್ಚೆ ಇತ್ತು. ಈ ಸಮಸ್ಯೆಯ ಮೇಲೆ ಬ್ರಿಟಿಷ್ ವಸಾಹತುಶಾಹಿ ಅವಧಿಯಲ್ಲಿ ಕೋಮುವಾದಿ ಚರಿತ್ರೆ ಬರೆದದ್ದರ ಪರಿಣಾಮಗಳನ್ನು ಲೇಖಕರು ವಿವರವಾಗಿ ಚರ್ಚಿಸಿದ್ದರು.

'ಕೋಮುವಾದದ ಸ್ವರೂಪ ಆಮೂಲಾಗ್ರ ಬದಲಾಗಿದೆ'

ಪುಸ್ತಕದ ಎರಡನೇ ಭಾಗ 1986 ರಿಂದೀಚಿಗಿನ ಸುಮಾರು ಎರಡು ದಶಕಗಳ ಅವಧಿಯಲ್ಲಿ ಕೋಮುವಾದ ಪಡೆದುಕೊಂಡಿರುವ ಕರಾಳ ಮುಖವನ್ನು ಅನಾವರಣಗೊಳಿಸುತ್ತದೆ. ಎರಡನೇ ಭಾಗದ ಲೇಖಕರು ಕೋಮುವಾದದ ಹಲವು ಆಯಾಮಗಳ ಬಗ್ಗೆ ಗಂಭೀರ ಅಧ್ಯಯನ ಮಾಡಿರುವ ಜಿ.ರಾಜಶೇಖರ್ ಮತ್ತು ಫಣಿರಾಜ್. ಮೊದಲನೆಯ ಭಾಗ ನಿರೂಪಿಸಿದ ಅವಧಿ (1947-86) ಮತ್ತು ಎರಡನೆಯ ಅವಧಿ (1986-2005)ಯ ನಡುವೆ 'ಕೋಮುವಾದದ ಸ್ವರೂಪವೇ ಆಮೂಲಾಗ್ರವಾಗಿ ಬದಲಾಗಿದೆ' ಎನ್ನುತ್ತಾರೆ ಲೇಖಕರು. 'ಎರಡು ಸಮುದಾಯಗಳ ನಡುವಿನ ದೊಂಬಿಯನ್ನು ನಿರ್ದಿಷ್ಟ ಊರು, ಕೇರಿಗಳ ಜೊತೆ ಗುರುತಿಸಬಹುದು. ನೆಪಕ್ಕಾದರೂ ಅಂತಹ ದೊಂಬಿಗಳಿಗೆ ಒಂದು ಸ್ಥಳೀಯ ಹಿನ್ನೆಲೆಯೂ ಇರುತ್ತದೆ. ಆದರೆ ಈಗ ಕೋಮುವಾದ ಕಾಲ - ದೇಶಗಳ ಈ ನಿರ್ದಿಷ್ಟತೆಯನ್ನು ಮೀರಿ ದೇಶದಾದ್ಯಂತ ಹಬ್ಬಿದೆ ಮತ್ತು ನಿತ್ಯದ ದಿನಚರಿಯಾಗಿದೆ. ಅದೇ ನಮ್ಮ ಹವಾಮಾನವೆನ್ನಿಸುವಷ್ಟರ ಮಟ್ಟಿಗೆ ಕೋಮುವಾದ ನಮ್ಮನ್ನು ಆವರಿಸಿದೆ..' ಎಂದು ಲೇಖಕರು ಗುರುತಿಸುತ್ತಾರೆ.

ದೆಹಲಿಯ ಸಿಖ್ ನರಮೇಧ (1984), ಅಡ್ವಾಣಿ ರಾಮ ಜನ್ಮಭೂಮಿ ರಥಯಾತ್ರೆ (1990), ಬಾಬರಿ ಮಸೀದಿ ಕೆಡವಿದ್ದು (1992), ಮುಂಬಯಿ ದಂಗೆಗಳು (1992-93), ಗುಜರಾತ್ ನರಮೇಧ (2002)ಗಳ ಮೂಲಕ ಬೆಳೆದು ಬಂದ ಕೋಮುವಾದದ ಕರಾಳ ಮುಖಗಳನ್ನು ಲೇಖಕರು ಅಂಕಿ-ಅಂಶ, ಸಾಕ್ಷ್ಯಾಧಾರ, ತಕ್ಕ ವಿವರಣೆಗಳಿಂದ ನಿರೂಪಿಸುತ್ತಾರೆ. ಪ್ರತಿ ಹಂತದಲ್ಲಿ ಬದಲಾದ ಕೋಮುವಾದದ ಸ್ವರೂಪ, ಅದರ ಬೆಚ್ಚಿ ಬೀಳಿಸುವ ವ್ಯಾಪಕತೆ, ಆಳವಾಗಿ ಬೇರೂರಿದ್ದನ್ನು ಗುರುತಿಸುತ್ತಾ ಹೋಗುತ್ತಾರೆ. ಅವರು ಗುರುತಿಸುವ ಹಲವು ಅಂಶಗಳು ಬೆಚ್ಚಿ ಬೀಳಿಸುವಂತಹದ್ದು.



'ಪ್ರಜೆಗಳು ಮೈಗೂಡಿಸಿಕೊಂಡ ಕೋಮುದ್ವೇಷ'

ಕೋಮುಹಿಂಸೆಯಲ್ಲಿ ಜನಸಾಮಾನ್ಯರ ದೊಡ್ಡ ಪ್ರಮಾಣದ ಭಾಗವಹಿಸುವಿಕೆ ಅಥವಾ ಸಮ್ಮತಿ ಇಂತಹ ಒಂದು ಅಂಶ, ಅದರಲ್ಲೂ ಮುಂಬಯಿ, ಗುಜರಾತ್ ನರಮೇಧಗಳಲ್ಲಿ ಇದು ವ್ಯಾಪಕವಾಗಿ ಕಂಡಿದೆ. ಎಷ್ಟೋ ಬಾರಿ ಅದೇ ಆಸುಪಾಸಿನ ಜನರೇ ಭಾಗವಹಿಸಿದ್ದಾರೆ. ಮುಂಬಯಿ ಗಲಭೆಗಳಲ್ಲಿ "ಪ್ರತೀಕ್ಷಾನಗರದ ಸುಮಾರು 3 ರಿಂದ 5 ಸಾವಿರದಷ್ಟು ಮುಸ್ಲಿಮರು ಭಯಗ್ರಸ್ತರಾಗಿ, ತಮ್ಮ ಮನೆಗಳಿಗೆ ಬೀಗ ಹಾಕಿ ಸುಂದರ್ ವಿಹಾರ್ ಹೊಟೇಲಿನ ಬಳಿ ಒಟ್ಟು ಸೇರಿದರು. ಅವರನ್ನು ಸುಮಾರು 40 ರಿಂದ 50 ಸಾವಿರ ಹಿಂದುಗಳು ಸುತ್ತುವರಿದಿದ್ದರು. 1993 ಜನವರಿ 9 ರಿಂದ 12 ರವರೆಗೆ ಮೂರು ದಿನಗಳ ಕಾಲ ಮುಸ್ಲಿಮರು ಯಾವ ಕ್ಷಣದಲ್ಲಿ ತಮ್ಮ ಮೇಲೆ ದಾಳಿ ನಡೆಯುತ್ತದೋ ಎಂದು ಭಯದಲ್ಲಿ ಕಳೆದರು. ಜನವರಿ 12 ರಂದು ಸೈನ್ಯದ ತುಕಡಿಯೊಂದು ಈ ಜನರನ್ನು ಸುರಕ್ಷಿತ ಸ್ಥಳಕ್ಕೆ ತಲುಪಿಸಿತು..." ಸಾಮಾನ್ಯ ಪ್ರಜೆಗಳು ಕೂಡಾ ಮೈಗೂಡಿಸಿಕೊಂಡ ಕೋಮುದ್ವೇಷಕ್ಕೆ ಇಂತಹ ಹಲವು ಪ್ರಕರಣಗಳು ಮುಂಬಯಿ, ಗುಜರಾತ್‌ಗಳಲ್ಲಿ ನಡೆದಿದ್ದನ್ನು 'ಕರಾಳ ಮುಖಗಳು' ನೀಡುತ್ತದೆ. ಮುಸ್ಲಿಮರ ವಿರುದ್ಧ ದೊಡ್ಡ ಪ್ರಮಾಣದಲ್ಲಿ ಹರಿಜನ-ಆದಿವಾಸಿ ಗುಂಪುಗಳು ಹಿಂಸಾಚಾರದಲ್ಲಿ ಭಾಗವಹಿಸಿದ್ದು ಅತ್ಯಂತ ಕಳವಳಕಾರಿ.

'ಹಿಂದುತ್ವದ ಕೋಮುವಾದಿ ವಿಚಾರಗಳಿಗೆ ದೇಶದಲ್ಲಿ ಈಗ ಪಕ್ಷ, ಜಾತಿ, ವರ್ಗ ಮತ್ತು ಅಂತಸ್ತುಗಳ ಭೇದಗಳನ್ನು ಮೀರಿದ ಒಂದು ಸಹಮತ ಮತ್ತು ಒಪ್ಪಿಗೆ ದೊರೆತಿದೆ. ಅಲ್ಪಸಂಖ್ಯಾತರ ಪೌರತ್ವವನ್ನು ಕೂಡಾ ಅಲ್ಲಗಳೆಯುವ ಈ ಸಹಮತ ಇಂದು ಭಾರತದ ಸಂವಿಧಾನ, ಈ ದೇಶದ ಎಲ್ಲ ಮತಧರ್ಮಗಳವರಿಗೆ ಕೊಡಮಾಡಿದ ಮೂಲಭೂತ ಹಕ್ಕುಗಳನ್ನೇ ಧಿಕ್ಕರಿಸುವ ಮಟ್ಟಕ್ಕೆ ಬೆಳೆದು ನಿಂತಿದೆ..."ಎಂಬೀ ಲೇಖಕರ ಆರಂಭದ ಹೇಳಿಕೆ ಪುಸ್ತಕದ ಉದ್ದಕ್ಕೂ ಧ್ವನಿಸುತ್ತದೆ.

ಸರ್ಕಾರವೂ ಶಾಮೀಲು

ಸರಕಾರವೇ (ಕನಿಷ್ಠ ಸ್ಥಳೀಯ, ರಾಜ್ಯ ಮಟ್ಟದ ಆಡಳಿತ) ಅಲ್ಪಸಂಖ್ಯಾತ ಕೋಮಿನ ವಿರುದ್ಧ ವ್ಯಾಪಕ, ವ್ಯವಸ್ಥಿತ ಹಿಂಸಾಚಾರದಲ್ಲಿ ಶಾಮೀಲಾಗುವುದು, ಸಕ್ರಿಯವಾಗಿ ಭಾಗವಹಿಸುವುದು ಇನ್ನೊಂದು ಬೆಚ್ಚಿಬೀಳಿಸುವ ಅಂಶ. ಇದು ದೆಹಲಿ ಸಿಖ್ ನರಮೇಧದಲ್ಲೇ ಆರಂಭವಾಗಿ, ಗುಜರಾತ್‌ನಲ್ಲಿ ತಾರಕಕ್ಕೇರಿತು. ಅದು ಮಾತ್ರವಲ್ಲ, ಇಂತಹ ಹಿಂಸಾಚಾರವನ್ನು ಸಮರ್ಥಿಸಿಕೊಳ್ಳುವುದೂ ವ್ಯಾಪಕವಾಗಿದೆ. 1984ರ ದೆಹಲಿ, 1992-93ರ ಮುಂಬಯಿಯಲ್ಲಿ ಕಾಂಗ್ರೆಸ್ ಸರಕಾರ, 2002ರ ಗುಜರಾತ್‌ನಲ್ಲಿ ಬಿಜೆಪಿ ಸರ್ಕಾರ ಮತ್ತು ಆಡಳಿತ ಒಂದೇ ರೀತಿಯಾಗಿ ವರ್ತಿಸಿತು. ಸಿಖ್ ನರಮೇಧದ ಸಮಯದಲ್ಲಿ ರಾಜೀವ್ ಗಾಂಧಿ ಹೇಳುವುದು 'ದೊಡ್ಡ ಆಲದ ಮರವೊಂದು ಉರುಳಿದಾಗ ಭೂಮಿ ನಡುಗುವುದು ಸಹಜ' ಎಂಬ ಹೇಳಿಕೆಯಿಂದ, ಗೋಧ್ರ ನಂತರದ ಗುಜರಾತ್ ನರಮೇಧ ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ಎಂದು ನರೇಂದ್ರ ಮೋದಿ ಹೇಳುವುದು ಸರ್ಕಾರದ ಶಾಮೀಲಿನ ಭಯಾನಕತೆಯನ್ನು ಇನ್ನೂ ಹೆಚ್ಚಿಸುತ್ತದೆ. ಈ ಎಲ್ಲಾ ಪ್ರಮುಖ ನರಮೇಧಗಳಲ್ಲಿ ಹಲವು ಪತ್ರಿಕೆಗಳು ಏಕಪಕ್ಷೀಯವಾಗಿ ಗಲಭೆಕೋರರ ಪರ ಕೋಮುವಾದಿ - ಪ್ರಚಾರದಲ್ಲಿ ತೊಡಗಿರುವ ಸಾಮಾನ್ಯ ಅಂಶ (ಬಹುಶಃ ಸಿಖ್ ನರಮೇಧ ಬಿಟ್ಟರೆ)ವನ್ನು ಲೇಖಕರು ಗುರುತಿಸುತ್ತಾರೆ.

ದೆಹಲಿ, ಮುಂಬಯಿ, ಗುಜರಾತ್ ನಂತಹ ದೊಡ್ಡ ನರಮೇಧಗಳಲ್ಲದೆ ಕರ್ನಾಟಕ ಅದರಲ್ಲೂ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಈ ಹೊಸ ಕೋಮುವಾದಿ ಉನ್ಮಾದದ ರೂಪುಗಳ ಬಗ್ಗೆ ಒಂದು ಅಧ್ಯಾಯ ಇದೆ. ಮತಾಂತರ, ಗೋಹತ್ಯೆ-ನಿಷೇಧ, ಮುಂತಾದ 'ಹೊಸ' ವಿಷಯಗಳನ್ನೆತ್ತಿಕೊಂಡು ಸತತವಾಗಿ ಕೋಮು ಉನ್ಮಾದ ಸೃಷ್ಟಿಸುವ ಬಗ್ಗೆ ವಿವರವಾದ ವರದಿ ಸಹ ಕೋಮುವಾದದ ಹೊಸ ಸ್ವರೂಪದ ಬಗ್ಗೆ ಕಣ್ತೆರೆಸುವಂತದ್ದು.

ಪುಸ್ತಕದ ಹೆಗ್ಗಳಿಕೆ

1986-2005ರ ಅವಧಿಯಲ್ಲಿ ಕೋಮುವಾದದ ಹೊಸ ಸ್ವರೂಪದ ಮುಖ್ಯ ಅಂಶಗಳ ಬಗ್ಗೆ ಉದಾಹರಣೆಗಳೊಂದಿಗೆ ಸರಳವಾಗಿ ಎಲ್ಲರಿಗೂ ತಟ್ಟುವಂತೆ, ಆಲೋಚನೆಗೆ ಪ್ರಚೋದಿಸುವಂತೆ ಹೇಳಿರುವುದು ಪುಸ್ತಕದ ಹೆಗ್ಗಳಿಕೆ. ಪುಸ್ತಕದಲ್ಲಿ ಹೇಳಿರುವ ಕೆಲವು ಅಂಶಗಳು ವರದಿಯಾಗಿದ್ದು, ಹಲವು ವರದಿಯಾಗದ್ದನ್ನು ಜೋಡಿಸಿ ಈ ಒಟ್ಟಾರೆ ಬೆಳವಣಿಗೆಯ ಸಮಗ್ರ ರೂಪದರ್ಶನ ಮಾಡಿಸುತ್ತದೆ ಈ ಪುಸ್ತಕ. ನಿರೂಪಣೆಯ ಶೈಲಿ ವಸ್ತುಗೆ ತಕ್ಕದ್ದಾಗಿದ್ದು, ಘಟನೆಗಳನ್ನು ಹೇಳುವ ಜತೆ-ಜತೆಗೆ ಅದರ ಅರ್ಥೈಸುವಿಕೆ ಸಾಗುತ್ತದೆ. ಕೋಮುವಾದಿ ಆಲೋಚನಾಕ್ರಮವನ್ನು ಒಡೆಯುತ್ತಾ ಹೋಗುತ್ತದೆ. ಸಾಮಾನ್ಯವಾಗಿ ಕೋಮುವಾದದ ಬಗ್ಗೆ ಹೇಳುವಾಗ ಅಯೋಧ್ಯಾ, ಮುಂಬಯಿ, ಗುಜರಾತ್ ಮತ್ತು ಸಂಘ ಪರಿವಾರದ ಬಗ್ಗೆ ಸೀಮಿತವಾಗಿರುತ್ತದೆ. ದೆಹಲಿಯ ಸಿಖ್ ನರಮೇಧ, ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಕೋಮು ಉನ್ಮಾದ ಸೇರಿಸಿ ಕಾಂಗ್ರೆಸ್‌ನ ಪಾತ್ರ ಸೇರಿಸಿರುವುದು ಪುಸ್ತಕದ ವಿಶೇಷ. 'ಕೋಮುವಾದದ ಕರಾಳ ಮುಖಗಳ' ಬಗ್ಗೆ ಇಂತಹ ಒಂದು ಸಮಗ್ರ ವಿಶ್ಲೇಷಣೆ ನೀಡಿರುವ ರಾಜಶೇಖರ್ ಮತ್ತು ಫಣಿರಾಜ್ ಅಭಿನಂದಾರ್ಹರು.

ಕೋಮುವಾದದ ಕರಾಳ ಮುಖಗಳು
ಎಸ್.ಆರ್.ಭಟ್
ಜಿ.ರಾಜಶೇಖರ್
ಕೆ.ಫಣಿರಾಜ್

ಬೆಲೆ ರೂ. 75/-

ಪ್ರಕಾಶಕರು
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ.
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು - 1

'ಅರಿವಿನ ನಿರಾಶೆ, ಸಂಕಲ್ಪದ ಆಶಾವಾದ'

'ಹಿಂಸೆಯ ಅಭಿಜ್ಞಾನ' ಎಂಬ ಕೊನೆಯ ಅಧ್ಯಾಯ ಕೋಮುವಾದವನ್ನು ಒಟ್ಟಾರೆ ಅರ್ಥೈಸುವ ಪ್ರಯತ್ನ. ಕೋಮು ಹಿಂಸೆಯನ್ನು ವಿರೋಧಿಸುವವರು ಕೋಮುವಾದದ ಆರ್ಥಿಕ - ಸಾಮಾಜಿಕ ಮುಖಗಳನ್ನು ತಿರಸ್ಕರಿಸುವುದು ಅಷ್ಟೇ ಅನಿವಾರ್ಯವಾಗಿದೆ. ಕೋಮುವಾದ ಚರಿತ್ರೆ, ಧರ್ಮ, ಸಂಸತಿ, ಅರ್ಥವ್ಯವಸ್ಥೆ ಮತ್ತು ಸಾಮಾಜಿಕ ನಡವಳಿಕೆಗಳ ಒಂದು ಸಮಗ್ರ ವ್ಯಾಖ್ಯೆಯಾಗಿದೆ. ಜೊತೆಗೆ ಅದು ಪ್ರಭುತ್ವವನ್ನು ಸಂಪೂರ್ಣ ವಶಪಡಿಸಿಕೊಳ್ಳುವ ರಾಜಕೀಯ ಕಾರ್ಯಕ್ರಮವೂ ಆಗಿದೆ. ಹಾಗಾಗಿ ಕೋಮುವಾದದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಆಯಾಮಗಳನ್ನು ಮರೆತು, ನಮ್ಮ ಕೆಲವು ಗಾಂಧಿವಾದಿಗಳು ಮಾಡುವಂತೆ, ಕೋಮು ಹಿಂಸೆಯ ಬಗ್ಗೆ ವಿಷಾದ ವ್ಯಕ್ತಪಡಿಸುವುದು ಹುಸಿ ನೈತಿಕತೆ, ಹಿಂಸೆ ನಡೆಸುವವರು ಮತ್ತು ಈ ಹಿಂಸೆಗೆ ಬಲಿಯಾಗಿರುವವರು - ಎರಡೂ ಕಡೆಯವರು ಸಿಕ್ಕಿ ಹಾಕಿಕೊಂಡಿರುವ ಚಾರಿತ್ರಿಕ ಸನ್ನಿವೇಶವನ್ನು ಅದು ಗಮನಿಸುವುದಿಲ್ಲ. ಕೋಮು ಹಿಂಸೆ ಕೋಮುವಾದದ ಅತ್ಯಂತ ಮೂರ್ತವಾದ ಮಾತುಗಳು ಇಲ್ಲಿ ಬರುತ್ತವೆ. 90ರ ದಶಕದ ಕೋಮುವಾದ ಭೀಕರವಾಗಿ ಬೆಳೆಯುವ ಮತ್ತು ಜಾಗತೀಕರಣದ ಆರ್ಥಿಕ ನೀತಿಗಳ ನಡುವಿನ ಗಹನ ಸಂಬಂಧದ ಬಗ್ಗೆ ಅಧ್ಯಾಯ ಬಿಚ್ಚಿಡುತ್ತದೆ.

ಇಂದಿನ ಭಾರತ 30-40ರ ದಶಕದ ಇಟಲಿಯನ್ನು ಹೋಲುತ್ತದೆ. ದಿಮಿತ್ರೊವ್ ಗುರುತಿಸಿದ ಫ್ಯಾಸಿಸಂನ ಮುಖ್ಯ ಲಕ್ಷಣಗಳು ಹಾಗೂ ಗ್ರಾಮ್ಸ್ಕಿ ಹೇಳಿದ ಇಟಲಿಯ ಫ್ಯಾಸಿಸಂನ ವಿಶಿಷ್ಟ ಸ್ವರೂಪವನ್ನು ಇಂದಿನ ಭಾರತದ ಕೋಮುವಾದಕ್ಕೆ ಅನ್ವಯಿಸುವ ಪ್ರಯತ್ನವನ್ನೂ ಲೇಖಕರು ಮಾಡಿದ್ದಾರೆ. 'ತನ್ನ ಕಾಲದ ರಾಜಕೀಯದ ವಸ್ತುಸ್ಥಿತಿಯನ್ನು ಅವ ಗ್ರಹಿಸುವುದು 'ಅರಿವಿನ ನಿರಾಶೆಯಲ್ಲಿ'. ಆದರೆ ಸಾಮಾನ್ಯ ಜನ ಫ್ಯಾಸಿಸಂನ ನಿರಂಕುಶ ಹಿಂಸೆಯನ್ನು ಬೆಂಬಲಿಸುವ ಈ ಸ್ಥಿತಿಯಲ್ಲಿ "ಯಾರಿಗೋಸ್ಕರ ಹೋರಾಡುವುದು?" ಎಂಬ ನಿರಾಶೆಯಲ್ಲಿ ಕೈಚೆಲ್ಲಿ ಕೂಡುವುದು ಅಥವಾ ಫ್ಯಾಸಿಸಂಗೆ ಇರುವ ಜನ ಬೆಂಬಲವನ್ನು ಕಡೆಗಣಿಸಿ ಹುಸಿ ಆಶಾವಾದ ಹುಮ್ಮಸ್ಸುಗಳಲ್ಲಿ ಫ್ಯಾಸಿಸಂನ್ನು ಎದುರಿಸುವುದು - ಎರಡೂ ಧೋರಣೆಗಳು ಸೋಲನ್ನು ತಮ್ಮ ಬೆನ್ನಿಗೆ ಕಟ್ಟಿಕೊಂಡಿರುವಂತಹವು. ನಿರಾಶೆಯ ಅರಿವಿನಲ್ಲಿಯೇ, ಆ ಸ್ಥಿತಿಯನ್ನು ಬದಲಾಯಿಸುವಂತಹ ಹೋರಾಟವನ್ನು ರೂಪಿಸುವ ಸಂಕಲ್ಪ ಮಾತ್ರ, ಆ ಕಾಲಕ್ಕೆ ಅವಶ್ಯವಾದ "ನಿಜವಾದ ರಾಜಕೀಯ" ಎಂದು ಗ್ರಾಮ್ಸ್ಕಿ ಭಾವಿಸಿದ್ದ....." ಎಂದು ಗ್ರಾಮ್ಸ್ಕಿಯ 'ಅರಿವಿನ ನಿರಾಶೆ, ಸಂಕಲ್ಪದ ಆಶಾವಾದ' ನುಡಿಗಟ್ಟಿನ ಮೂಲಕ ನಮ್ಮ ಮುಂದೆ ಇಂದಿರುವ ಸವಾಲಿನ ಸಾರಾಂಶವನ್ನು ಲೇಖಕರು ಮುಂದಿಡುತ್ತಾರೆ.

ಕೆಲವು ಕೊರತೆಗಳು

ಪುಟ 10 ನೋಡಿ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹರಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH